ಅಧ್ಯಕ್ಷರು:- ನಾಳೆ ತೆಗೆದುಕೊಳ್ಳೋಣ. ಈಗ ಮೊಯ್ಲಿಯವರು ಕಾವೇರಿ ವಿಚಾರದ ಬಗ್ಗೆ ತಯಾರಾಗಿ ಬಂದಿದ್ದಾರೆ. ಅವರು ಮುಗಿಸಲಿ. ಅವರು ಹಿರಿಯ ಸದಸ್ಯರಿದ್ದು ನಿಂತಿದ್ದಾರೆ. ಮೊದಲು ಅವರು ಮುಗಿಸಲಿ. ನಿಮಗೂ ಗೊತ್ತಿದೆ. ಅವರು ಬಹಳ ಧಾರಾಳಿಗಳು, ಈ ಮುಖ್ಯಮಂತ್ರಿಯವರು ಸಹೃದಯಿಗಳು. ನಿಮಗೆ ಯಾವುದೂ ಅಡ್ಡ ಇಲ್ಲ. ಯಾವಾಗ ಬೇಕಾದರೂ ಪ್ರಸ್ತಾಪ ಮಾಡಬಹುದು. ನಿಜ ಹೇಳುವುದಾದರೆ, ಇಷ್ಟೊಂದು ಸಲಿಗೆ ಇರತಕ್ಕವರು ಸಿಕ್ಕಿರತಕ್ಕದ್ದು.

ಶ್ರೀ ವಾಟಾಳ ನಾಗರಾಜ್:- ತಾವು ಹೇಳುತ್ತಿರುವುದು ಸತ್ಯ. ಇದರಲ್ಲಿ ಏನೂ ಅನುಮಾನ ಇಲ್ಲ. ನಮ್ಮ ವಿರೋಧಪಕ್ಷದವರೆಲ್ಲರ ಮಾತಿಗೂ ಬೆಲೆ ಕೊಟ್ಟು ವಿದ್ಯುಚ್ಛಕ್ತಿ ಬೆಲೆಏರಿಕೆ ಬಗ್ಗೆ ಸಮಿತಿ ಮಾಡಿದರು. ಬೇರೆ ಯಾರಾದರೂ ಆಗಿದ್ದಿದ್ದರೆ ಇದನ್ನು ಮಾಡುತ್ತಿರಲಿಲ್ಲ ಎಂದು ನಾವು ಅಂದುಕೊಂಡಿದ್ದೆವು. ಇದು ಅವರ ಧಾರಾಳತನ.....

ಅಧ್ಯಕ್ಷರು:- ಅದಕ್ಕಿಂತ ಮುಖ್ಯವಾಗಿ ನಮ್ಮ ಜೊತೆಯಲ್ಲಿ ಸದಸ್ಯರಾಗಿದ್ದು ಅಕಾಲ ಮರಣಕ್ಕೆ, ದುರ್ಮರಣಕ್ಕೆ ಈಡಾದಂಥ ಮಾನ್ಯ ಡಾ:ಚಿತ್ತರಂಜನ್‌ರವರ ವಿಚಾರವನ್ನು ಪ್ರಸ್ತಾಪ ಮಾಡುವ ವಿಚಾರಕ್ಕೆ ಮೊದಲ ಪ್ರಿಯಾರಿಟಿ ಬರುತ್ತದೆ. ಈ ವಿಚಾರವನ್ನು ನಾನು ಮಾನ್ಯ ಸಭಾ ನಾಯಕರು ಇದ್ದಾಗ ಪ್ರಸ್ತಾಪ ಮಾಡಿ ಎಂದು ಪ್ರತಿಪಕ್ಷದ ನಾಯಕರಿಗೆ ಹೇಳಿದ್ದೆ. ಮಾನ್ಯ ಮೊಯ್ಲಿಯವರು ಕಾವೇರಿ ವಿಚಾರವನ್ನು ಅರ್ಧಕ್ಕೇ ನಿಲ್ಲಿಸಿದ್ದರು ಈಗ ಅವರು ಬಂದಿದ್ದಾರೆ ಅವರ ಭಾಷಣವನ್ನು ಮುಂದುವರೆಸಲಿ.

ಶ್ರೀ ವಾಟಾಳ ನಾಗರಾಜ್:- ಆಗಲಿ ಆದರೆ ಮಾನ್ಯ ಮೊಯ್ಲಿಯವರು ಪ್ರಾರಂಭ ಮಾಡಿದ ಮೇಲೆ ನಾವು ಹೇಳುವುದಕ್ಕೆ ಅವಕಾಶವಾಗುವುದಿಲ್ಲ. ಏಕೆಂದರೆ ಸಂಜೆಯಾಗುತ್ತದೆ.

ಅಧ್ಯಕ್ಷರು:- ನಾಳೆ ಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾಳೆ ಇದಕ್ಕೆ ಒಂದು ಟೈಮ್‌ನ್ನು ನಿಗದಿಮಾಡಿ ಅವಕಾಶ ಕೊಡಿ. ಇಲ್ಲದಿದ್ದರೆ ಇದರ ಪ್ರಾಮುಖ್ಯತೆ ಹೋಗುತ್ತದೆ. ಪ್ರಶ್ನೋತ್ತರ ವೇಳೆ ಎಂದು ಎಲ್ಲರೂ ಒಪ್ಪಿಕೊಂಡರು. ಅದನ್ನೇ ಪ್ರತಿನಿತ್ಯ ಮಾಡಿದರೆ....

ಅಧ್ಯಕ್ಷರು:- ಮಾನ್ಯ ಸಭಾ ನಾಯಕರು ನಾಳೆ ಇರುತ್ತಾರೆ. ಅವರ ಜೊತೆ ಚರ್ಚೆ ಮಾಡಿ ಅವರು ಇರುವ ಸಮಯದಲ್ಲಿ ಮಾಡೋಣ. ಇವತ್ತು ನಾಳೆಯಲ್ಲಿ ವ್ಯತ್ಯಾಸ ಏನೂ ಆಗುವುದಿಲ್ಲ. ನಾಳೆ ಮಾಡಿಸೋಣ.

4. ನಿಯಮ 159ರ ಮೇರೆಗೆ

ವಿಷಯ:- ತಮಿಳ್ನಾಡಿಗೆ ಕಾವೇರಿ ನೀರನ್ನು ಬಿಟ್ಟ ವಿಚಾರ

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

+ಶ್ರೀ ಎಂ.ವೀರಪ್ಪಮೊಯಿಲಿ:- ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಕೆಲವು

ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಇವತ್ತು ಇನ್ನೂ ಕೆಲವು ಸೂಕ್ಷ್ಮ ವಿಚಾರಗಳನ್ನು ಆದಷ್ಟು ಜಾಗ್ರತೆ ಪ್ರಸ್ತಾಪ ಮಾಡಿ ಮುಗಿಸುತ್ತೇನೆ. ಮುಖ್ಯವಾಗಿ 16-4-96ರಂದು ತಾವು ಒಂದು ಅರ್ಜಿಯನ್ನು ಹಾಕಿ, ಈ ಟ್ರಿಬ್ಯುನಲ್ ಪ್ರೊಸೀಡಿಂಗ್ಸ್‌ನ್ನು ಮುಂದುವರೆಸಬೇಕು, ವಾಟರ್ ರಿಸೋರ್ಸಸ್ ಕೌನ್ಸಿಲ್ ಏನಿದೆ ಅದು ತನ್ನ ಮಾರ್ಗ ಸೂಚಿಯನ್ನು ಕೊಡುವುದಕ್ಕೆ ಮುಂಚೆ ಈ ಪ್ರೊಸೀಡಿಂಗ್ಸನ್ನು ತಡೆಹಿಡಿಯಬೇಕೆಂದು ತಾವು ಏನು ಅರ್ಜಿಯನ್ನು ಕೊಟ್ಟಿದ್ದೀರಿ, ಅದರ ಬಗ್ಗೆ 16-4-96ರಂದು ಟ್ರಿಬ್ಯುನಲ್ ಪುರಸ್ಕರಿಸಲಿಲ್ಲ. ಆ ಸಂದರ್ಭದಲ್ಲಿ ಒಂದು ಮಾತನ್ನು ಇಲ್ಲಿ ಏನು ಹೇಳಿದ್ದಾರೆ ಅದನ್ನು ತಮ್ಮ ಕಾನೂನು ಇಲಾಖೆ ಅಥವಾ ನೀರಾವರಿ ಇಲಾಖೆಯವರು ತಮ್ಮ ಗಮನಕ್ಕೆ ತಂದಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಅವರು ಆ ಆರ್ಡರ್‌ನಲ್ಲಿ ಏನು ಹೇಳಿದ್ದಾರೆಂದರೆ:

"It may be stated here that the National Water Resources Development Council was set-up by the Government of India by Notification dated 10th March, 1983, issued by the Govt. of India, Ministry of Irrigation."

Prima facie it is not an Inter-State as contemplated under Article 263 of the Constitution of India.

ಏಕೆಂದರೆ ಚೀಫ್ ಜಸ್ಟೀಸ್ ಆಗಿದ್ದವರು ಈ ಟ್ರಿಬ್ಯುನಲ್‌ನಿಂದ ಕೊಟ್ಟಿದ್ದಾರೆ. ನಾವೆಲ್ಲರೂ ಆತುರದಿಂದ ದೆಹಲಿಯ ಕಡೆಗೆ ನೋಡುತ್ತಿದ್ದೆವು. ಏಕೆಂದರೆ, ಫೆಬ್ರವರಿ 96ರಲ್ಲಿ ಒಂದು ಮೀಟಿಂಗ್‌ನ್ನು ಕರೆದರು, ಆ ದಿವಸವೇ ಫೈನಲೈಸ್ ಮಾಡುತ್ತೇವೆಂದು ಹಿಂದಿನ ಪ್ರಧಾನಮಂತ್ರಿಗಳು ನಮಗೆ ಭರವಸೆಯನ್ನೂ ಸ್ಪಷ್ಟವಾಗಿ ಕೊಟ್ಟಿದ್ದರು. ಅಂದಿನ ಪ್ರಧಾನಿಯವರ ಪತ್ರದ ಪ್ರಕಾರ "I propose to convene the Water Resources Council of which all Chief Ministers are members in early February to discuss and adopt the above policy guidelines."

It was not only to discuss but also to adopt the policy guidelines.

"I believe that this is the only viable process by which complications, such as, we are dealing which could be obviated to a large extent making for smoother working of the water sharing mechanism and strengthening a sense of National integration through our river system."

If you are going to dispute it, the proposition made by the Tribunal.

ಕೇಂದ್ರ ಸರ್ಕಾರಕ್ಕೆ ಹಕ್ಕಿದೆ; ಅಥವಾ ಸಂವಿಧಾನಬದ್ಧವಾಗಿ ಇಂಟರ್‌ಸ್ಟೇಟ್ ವಾಟರ್ ಕೌನ್ಸಿಲ್‌ನ್ನು ರಚನೆ ಮಾಡಿದ್ದಾರೆ ಎಂಬ ವಿಚಾರ ಇದ್ದರೆ, I think. in the appropriate forum you have to take it up. ಕೇಂದ್ರ ಸರ್ಕಾರಕ್ಕೆ ಬರೆಯಬೇಕಾಗುತ್ತದೆ. ಇಲ್ಲದಿದ್ದರೆ ತಾವು ಮೀಟಿಂಗನ್ನು ಕರೆಯಬೇಕೆಂದು ಹೇಳಿದ್ದರೂ ಕೂಡ ಸಂವಿಧಾನ ಬದ್ಧವಾಗಿ ಆ ಕೌನ್ಸಿಲ್ ಆಗಿಲ್ಲದಿದ್ದರೆ, You must prevail upon the Government of India to reconstitute the Inter-State Water Council. ಏಕೆಂದರೆ ನಮ್ಮ ಕರ್ನಾಟಕ ರಾಜ್ಯದ ಮಟ್ಟಿಗೆ, ರಾಷ್ಟ್ರಮಟ್ಟದಲ್ಲಿ ಈ ಮಾರ್ಗಸೂಚಿ ಬೇಕೆಂದು ಹೇಳುವುದೂ ಹೌದು. ಆದರೆ ಈ ಜ್ವಲಂತ ಸಮಸ್ಯೆಯನ್ನು ನಾವು ಎದುರಿಸುತ್ತಿರುವ ಕಾರಣ, ಇದರ ಬಗ್ಗೆ ತಾವು ಹೆಚ್ಚಿನ ಆಸಕ್ತಿಯನ್ನು ತೆಗೆದುಕೊಂಡು ಮಾಡಬೇಕಾದ ಅವಶ್ಯಕತೆ ಇದೆ ಎಂಬ ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಸಭಾನಾಯಕರಿಗೆ ತಿಳಿಸಬಯಸುತ್ತೇನೆ, ತಾವು ಇದನ್ನು ದಯವಿಟ್ಟು ಮಾಡಿ. ಇಲ್ಲದೇ ಹೋದರೆ, ಇವರು ಪುನಃ ಟ್ರಿಬ್ಯುನಲ್‌ಗೆ, ಸುಪ್ರೀಂಕೋರ್ಟ್‌ಗೆ ಹೋಗುವುದು, ನಮಗೆ ಮಾರ್ಗಸೂಚಿಬರಬೇಕೆಂದು ಹೇಳುವುದು ಬೇಡ. ಕಾನೂನುಬದ್ಧವಾಗಿ ಇಲ್ಲದೇ ಹೋದರೆ ಯಾವುದೂ ಪ್ರಯೋಜನವಾಗುವುದಿಲ್ಲ. ಅಲ್ಲಿ ಗೈಡ್‌ಲೈನ್ಸ್ ಮಾಡಿದರೂ ಅದು ತಮಗೆ ಏನೇನೂ ಪ್ರಯೋಜನಕ್ಕೆ ಬರುವುದಿಲ್ಲ. ಈ ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಅಪೇಕ್ಷೆಪಡುತ್ತಿದ್ದೇನೆ.

ಇನ್ನೊಂದು ಬಹಳ ಪ್ರಾಮುಖ್ಯವಾದ ವಿಚಾರ ಎಂದರೆ, ಡಾ: ಅಲಘ್ ಸಮಿತಿಯವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲಿ ಬಹಳ ಮುಖ್ಯವಾಗಿ ಪುಟ 22ರಲ್ಲಿ ಅವರು ಏನು ಹೇಳಿದ್ದಾರೆಂದರೆ "Doubts were expressed in Tamilnadu regarding accuracy of total supplies being made by Karnataka to Tamilnadu." ಇದರಲ್ಲಿ ಅನುಮಾನಕ್ಕೆ ಅವಕಾಶವೇ ಇಲ್ಲ. ಕಾರಣ ಏನೆಂದರೆ, ಗೇಜಿಂಗ್ ಸ್ಟೇಷನ್ ಸೆಂಟ್ರಲ್ ವಾಟರ್ ಪವರ್ ಕಮಿಷನ್‌ನವರದ್ದೇ ಇದೆ. ನಾವು ಎಷ್ಟು ನೀರನ್ನು ಉಪಯೋಗ ಮಾಡುತ್ತೇವೆ ಅದು it is absolutely hundred percent transparent. ನಾವು ಬಿಡುಗಡೆ ಮಾಡುವುದೂ ಕೂಡ ಬಹಳ ಸುಸ್ಪಷ್ಟ. "Similar doubts were also expressed in Karantaka regarding the accuracy of measurements made by Tamilnadu at Mettur in respect of supplies received by Tamilnadu. The inflow at Mettur is assessed by the Government of Tamilnadu by an indirect method by calculating the outflow through power houses'

and under sluices and increase in storage of the reservoir, it is suggested...." ಇದನ್ನು ಅಲಫ್ ಸಮಿತಿಯವರು ಸಜೆಸ್ಟ್ ಮಾಡುತ್ತಿದ್ದಾರೆ. "It is suggested that the guage and discharge site maintained by Central Water Commission at Biligondalu be considered as a reference point for measurement of all releases in future by Karnataka to Tamilnadu." ನಾವು ಇದನ್ನು ಒತ್ತಾಯ ಮಾಡಬೇಕಾಗುತ್ತದೆ. ಏಕೆಂದರೆ ಸುಪ್ರೀಂ ಕೋರ್ಟ್ ಆಗಲಿ, ಕೇಂದ್ರಸರ್ಕಾರವಾಗಲಿ, ಅಥವಾ ತಮಿಳ್ನಾಡು ಆಗಲಿ, ನೀವು ನೀರನ್ನು ಬಿಡಬೇಕೆಂದು ಆಗಾಗ್ಗೆ ಬೇಡಿಕೆ ಇಡತಕ್ಕದ್ದು, ಅಥವಾ ನೀರು ಹೋಗುತ್ತಿರುವಂಥಾದ್ದು; ಇಂಥಾದ್ದಕ್ಕೆ once for all it should be settled. The Tamilnadu should agree for guaging station. The outflow should not be measured by an indirect method of measurement but by a direct method of measurement through a Gauging Station. ಇದನ್ನು ಮಾಡಬೇಕೆಂಬ ಅಂಶವನ್ನು ತಾವು ಸುಪ್ರೀಂ ಕೋರ್ಟಿಗೆ ಮನವರಿಕೆ ಮಾಡಿಕೊಡಬೇಕಾಗುತ್ತದೆ.

3.40 ಪಿಎಂ

ಇಲ್ಲದಿದ್ದರೆ ಇವತ್ತು 5 ಟಿಎಂಸಿ. ನೀರು ಕೊಡಿ, 10 ಟಿಎಂಸಿ ಕೊಡಿ 15-20-25 ಟಿಎಂಸಿ.ನೀರು ಕೊಡಿ ಎಂದು ಹೇಳುವುದು ಏನಿದೆ ಇದು ಸರಿಯಾದ ಮಾರ್ಗ ಆಗವುದಿಲ್ಲ. ಮತ್ತು ನ್ಯಾಯವಾದ ರೀತಿಯಲ್ಲಿ ನೀರನ್ನು ಹಂಚಿಕೊಳ್ಳತಕ್ಕ ವಿಧಾನ ಆಗುವುದಿಲ್ಲ. ಇಂಥ ಹಲವಾರು ಸೂಚನೆಗಳನ್ನು ಇವತ್ತು ಅಲಫ್ ಕಮಿಟಿಯವರು ಕೊಟ್ಟಿದ್ದಾರೆ. ಈಗ ಅದನ್ನೆಲ್ಲ ಪ್ರಸ್ತಾಪ ಮಾಡುವುದಕ್ಕೆ ಹೋದರೆ, ಬಹಳ ಸಮಯವಾಗುತ್ತದೆ. ಆದರೆ ಡಾ॥ ಅಲಫ್ ಕಮಿಟಿ ರಿಪೋರ್ಟ್ ಏನು ಕೊಟ್ಟಿದೆ There are many things which the State Governments will have to follow it up. ಇದೆಲ್ಲ ಟೆಂಪರರಿ ರೀಲೀಸ್ ಮಾಡತಕ್ಕದ್ದು, ಇಂಟರಿಂ ರಿಪೋರ್ಟ್ ಅನ್ನು ಅವರು ಇಂಪ್ಲಿಮೆಂಟ್ ಮಾಡತಕ್ಕದ್ದು, ಅದರಲ್ಲಿರತಕ್ಕ ಸಾಧಕ ಬಾಧಕಗಳಿಗೆ ನೇರವಾಗಿ ಸಂಬಧ ಇರುತ್ತದೆ. ತಾವು ದಯವಿಟ್ಟು ಅಲಫ್ ಕಮಿಟಿ ರಿಪೋರ್ಟ್ ಏನು ಕೊಟ್ಟಿದ್ದಾರೆ, ಅದರಲ್ಲಿ ಏನು ಹೇಳಿದ್ದಾರೆ ಎಂಬುದನ್ನು ನೋಡಬೇಕು. ಆ ಸಂದರ್ಭದಲ್ಲಿ ಆದ ಅಜಿಟೇಷನ್ ಬಗ್ಗೆ ಕೂಡ ಇಲ್ಲಿ ವರದಿ ಇದೆ. ಮಂಡ್ಯ, ಮೈಸೂರಿನಲ್ಲಿ ಅತ್ಯಂತ ಕಡಿಮೆ ಅಜಿಟೇಷನ್ ಆಗಿದೆ. ನೀರಾವರಿ ಅನುಕೂಲತೆ ಇಲ್ಲ ಎಂಬುದನ್ನು ಡಾ:ಅಲಫ್ ಕಮಿಟಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಅನೇಕ ಭಾಗಗಳನ್ನು ಇವತ್ತು ಹೇಳಬೇಕಾಗುತ್ತದೆ. ಅದು ಟ್ರಿಬ್ಯುನಲ್‌ಗೆ ಸಹಕಾರಿಯಾಗುತ್ತದೆ ಮತು ಸುಪ್ರೀಂ ಕೋರ್ಟಿಗೆ ಸಹಕಾರಿಯಾಗುತ್ತದೆ. ಮತ್ತು ಬೇರೆ ಬೇರೆ ರಾಜಕೀಯ ವೇದಿಕೆಗಳಲ್ಲಿ ಇದನ್ನು ಹೇಳುವುದಕ್ಕೆ ವಿಶೇಷವಾಗಿ ಸಹಕಾರಿಯಾಗುತ್ತದೆ. ಆದುದರಿಂದ

ದಯಮಾಡಿ, you have to put some experts into it, examine all these aspects and take some action on that. ನಾನು ನಿನ್ನೆ ಸ್ವಲ್ಪಮಟ್ಟಿಗೆ ಮತ್ತೊಂದು ವಿಷಯ ಪ್ರಸ್ತಾಪ ಮಾಡಿದ್ದೆ. ಅದೇನೆಂದರೆ, ಇವತ್ತು ಟ್ರಿಬ್ಯುನಲ್ ಅಧ್ಯಕ್ಷರು ರಾಜೀನಾಮೆ ಕೊಟ್ಟಿದ್ದಾರೆ. ಟ್ರಿಬ್ಯುನಲ್ ಅಧ್ಯಕ್ಷರು ರಾಜೀನಾಮೆ ಕೊಟ್ಟಿದ್ದು, ರಾಜೀನಾಮೆ ಕೊಟ್ಟ ಕಾರಣವನ್ನು ಈಗ ಹೇಳುವುದಕ್ಕೆ ಹೋಗುವುದಿಲ್ಲ. There are certain personal allegations, made by the highest authority. I do not say that the allegations are false or anything. I do not go into the merits and demerits of those allegations. ಆದರೆ ರಾಜೀನಾಮೆ ಕೊಡದೇ ಬೇರೆ ಮಾರ್ಗ ಇಲ್ಲ. ಇಂಥ ಅಲೀಗೇಷನ್ ಇದ್ದಾಗ ಅವರಿಗೆ ಅಥವಾ ಟ್ರಿಬ್ಯುನಲ್ ಮೆಂಬರ್‌ಗೆ ರಾಜೀನಾಮೆಯ ಹೊರತು ಬೇರೆ ದಾರಿ ಇಲ್ಲ. ರಾಜೀನಾಮೆ ಕೊಡಲೇಬೇಕು. ಮತ್ತೆ ಇಬ್ಬರು ಏತಕ್ಕೆ ರಾಜೀನಾಮೆ ಕೊಟ್ಟಿಲ್ಲವೆಂದು ಗೊತ್ತಿಲ್ಲ. I think they are also bound to resign. It has to be reconstituted. ಇವತ್ತು ತಮಿಳ್ನಾಡಿನವರು ಏನು ಹೇಳುತ್ತಾರೆ. ರಾಜೀನಾಮೆ ಕೊಟ್ಟದ್ದನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಯಡಿಯೂರಪ್ಪನವರು ಮತ್ತು ಅನೇಕ ಸದಸ್ಯರು ಹೇಳಿದರು, ನಾನು ಹೇಳುವುದಾದರೆ ಅರ್ಥವಿಲ್ಲ. ಏಕೆಂದರೆ ಅವರು ಅಲ್ಲಿ ಇದ್ದರೂ ಕೂಡ ಕರ್ನಾಟಕದ ಬಗ್ಗೆ ವಿಶೇಷ ಪ್ರೊಜುಡೀಸ್ ಉಳಿದೇ ಇತ್ತು. ಇದ್ದರೂ ಕೂಡ rightly or wrongly, any person after all human feelings sensitivity and all that, it is but natural. ಆದುದರಿಂದ ಅಂಥ ಅಧಿಕಾರ ಸ್ಥಾನದಲ್ಲಿ ಇವತ್ತು ನಮಗೆ ನ್ಯಾಯ ಸಿಗುತ್ತದೆ, ಇಲ್ಲ ಎಂಬುದು ಯಾವಾಗ ಸಂದೇಹಾಸ್ಪದವಾಗುತ್ತದೆ ಅದು ಯಾರಿಗೂ ಸರಿಯಲ್ಲ. I think when the Chairman has resigned, on the similar lines, perhaps we must take it up that it may not be appropriate. The people will have doubt with regard to other members because they always think that the Chairman has gone because of the allegation ಈ ಭಾವನೆ ಉಳಿದ ಸದಸ್ಯರಲ್ಲೂ ಕೂಡ ಉಳಿದುಕೊಂಡಿರುತ್ತದೆ. So, you must prevail upon the Government of India to reconstitute the entire Tribunal.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ನಿನ್ನೆ ಗಮನಿಸಿದಿರೋ ಇಲ್ಲವೋ ಗೊತ್ತಿಲ್ಲ. ನಾನು ಒಂದು ಸಲಹೆ ಕೊಟ್ಟೆ; ಮುಖ್ಯಮಂತ್ರಿಗಳು ತಾವು ಇರಲಿಲ್ಲ. ಇವತ್ತು ಯಾವುದೋ ಒಂದು ಕಾರಣಕ್ಕೆ ಟ್ರಿಬ್ಯುನಲ್ ಛೇರ್ಮನ್ನರು ರಾಜೀನಾಮೆ ಕೊಟ್ಟಿದ್ದಾರೆ, ಇನ್ನೂ ಕೆಲವರು ರಾಜೀನಾಮೆ ಕೊಟ್ಟಿದ್ದಾರೆ. ಅವತ್ತಿನಿಂದ ನಮ್ಮ ಬೇಡಿಕೆ ಏನು ಕೇಂದ್ರ ಸರ್ಕಾರಕ್ಕೆ ಅಂದರೆ, ನ್ಯಾಷನಲ್ ಪಾಲಿಸಿ ಫ್ರೇಂ ಮಾಡದೇ ಯಾವುದೇ ಟ್ರಿಬ್ಯುನಲ್,

ಯಾವುದೇ ಸುಪ್ರೀಂ ಕೋರ್ಟ್ ನದಿ ವಿವಾದವನ್ನು ಬಗೆಹರಿಸುವುದಕ್ಕಾಗುವುದಿಲ್ಲವೆಂದು ಅವತ್ತಿನಿಂದ ಒಟ್ಟಾರೆ ಎಲ್ಲರ ಅಭಿಪ್ರಾಯ. ಇವತ್ತಿನ ನಮ್ಮ ದೇಶದ ಪ್ರಧಾನಮಂತ್ರಿಗಳು ಮುಖ್ಯಮಂತ್ರಿಗಳಾಗಿದ್ದಾಗಲೂ ಅದೇ ಅಭಿಪ್ರಾಯ ವ್ಯಕ್ತಪಡಿಸಿದ್ದರು. ನಾವೆಲ್ಲ ಒಂದಾಗಿ ಇವತ್ತು ಪ್ರಧಾನಿಯವರಿಗೆ ಒತ್ತಡ ತಂದು ಸುಪ್ರೀಂ ಕೋರ್ಟಿಗೆ ಕನ್‌ವಿನ್ಸ್ ಮಾಡಿ ನ್ಯಾಷನಲ್ ವಾಟರ್ ಪಾಲಿಸಿ ಫ್ರೇಂ ಮಾಡುವವರೆಗೆ ಈ ಟ್ರಿಬ್ಯುನಲ್ ಮತ್ತೆ ರಚನೆ ಮಾಡುವುದಕ್ಕೆ ಹೋಗಬೇಡಿ ಎಂಬ ಒತ್ತಾಯವನ್ನು ನಾವು ಪ್ರಧಾನಿಯವರ ಮೂಲಕ ತರಬೇಕಾಗುತ್ತದೆ. ತಮಿಳ್ನಾಡಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಬಹಳ ಸಂಬಂಧ ಇರುವುದರಿಂದ ಮಾತುಕತೆ ಮೂಲಕ ಈ ಸಮಸ್ಯೆಯನ್ನು ಬಗೆಹರಿಸೋಣ, ನಂತರ ವಾಟರ್ ಪಾಲಿಸಿ ಫ್ರೇಂ ಮಾಡೋಣ. ಈ ಟ್ರಿಬ್ಯುನಲ್ ಇಲ್ಲದೆ ಇದ್ದ ಕಾಲದಲ್ಲೂ ನಿಮಗೆ ನಾವು ಸಮಯಕ್ಕೆ ಸರಿಯಾಗಿ ನೀರು ಕೊಟ್ಟುಕೊಂಡು ಬಂದಿದ್ದೇವೆ. ಈ ರೀತಿ ಕನ್‌ವಿನ್ಸ್ ಮಾಡುವುದಕ್ಕೆ ನಮ್ಮಿಂದ ಪ್ರಯತ್ನ ಬೇಕು. ಅವರು ರೀ-ಕಾನ್‌ಸ್ಟಿಟ್ಯೂಟ್ ಮಾಡಿ ಅಂದರು, ಅದು ಬೇಡ, ಈ ಸಲಹೆ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಟ್ರಿಬ್ಯುನಲ್ ಮಾಡುವುದಕ್ಕೆ ಹೊರಡುವಂಥದ್ದು ಸರಿಯಲ್ಲ. ಕರ್ನಾಟಕ ರಾಜ್ಯದ ಅಭಿಪ್ರಾಯವನ್ನು ಪ್ರಧಾನಿಯವರಿಗೆ ತಿಳಿಸುವುದರಿಂದ, ಸುಪ್ರೀಂ ಕೋರ್ಟನ್ನು ನಾಳೆ ಕನ್‌ವಿನ್ಸ್ ಮಾಡಬಹುದು. ನಾಳೆ ಸುಪ್ರೀಂ ಕೋರ್ಟ್ ಮುಂದೆ ನಾವು ಹೋದಾಗ ಹೇಗೂ ಟ್ರಿಬ್ಯುನಲ್ ಅಧ್ಯಕ್ಷರು ರಾಜೀನಾಮೆ ಕೊಟ್ಟಿದ್ದಾರೆ, ನ್ಯಾಷನಲ್ ವಾಟರ್ ಪಾಲಿಸಿ ಫ್ರೇಂ ಮಾಡುವ ಸಂದರ್ಭ ಬರುತ್ತಿದೆ ಎಂಬುದನ್ನು ಸುಪ್ರೀಂ ಕೋರ್ಟ್ ಗಮನಕ್ಕೆ ತರುವುದಕ್ಕೆ ಸಾಧ್ಯವಾದರೆ ಹೆಚ್ಚು ಅನುಕೂಲವಾಗಬಹುದೆಂದು ನನ್ನ ಅಭಿಪ್ರಾಯ.

ಶ್ರೀ ಎಂ.ವೀರಪ್ಪಮೊಯಿಲಿ:- ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರ ಹೇಳಿದರು, ಪ್ರಧಾನಿಯವರ ಹತ್ತಿರ ಹೇಳಿ, ಸಂಬಂಧ ಚೆನ್ನಾಗಿದೆ, ಆದುದರಿಂದ ರೀ-ಕಾನ್‌ಸ್ಟಿಟ್ಯೂಟ್ ಮಾಡುವುದು ಬೇಡ, ಗೈಡ್‌ಲೈನ್ಸ್ ಕೊಡಿ ಎಂದು. ಅದು ಬಹುಶಃ ಚರ್ಚೆಗೆ ಇರಬೇಕಾದ ವಿಚಾರ ಅಲ್ಲ. May be, we will discuss about it. ಆದರೆ ಇವತ್ತು ನಾನು ಹೇಳುವುದೇನೆಂದರೆ we have to take our own precautions so far as our State is concerned. ಮುಂದೆ ಟ್ರಿಬ್ಯುನಲ್ ರಿ-ಕಾನ್‌ಸ್ಟಿಟ್ಯೂಟ್ ಮಾಡುವಾಗ, ನಾವು ಹೇಳುವುದು ಗೈಡ್‌ಲೈನ್ಸ್ ಫೈನಲೈಸ್ ಆಗದೆ, ಟ್ರಿಬ್ಯುನಲ್ ಯಾವುದೇ ರೀತಿಯಾದ ನ್ಯಾಯವಾದ ತೀರ್ಪಿಗೆ ಬರಲಿಕ್ಕೆ ಸಾಧ್ಯವಿಲ್ಲ ಎಂಬುದೇ ನಮ್ಮ ಒಂದು ನಿಶ್ಚಲ ನಿಲುವು. ಸುಪ್ರೀಂ ಕೋರ್ಟ್ ಒಂದು ಆದೇಶ ಕೊಡಬಹುದು. ತಕ್ಷಣ ಟ್ರಿಬ್ಯುನಲ್ ಅನ್ನು ರೀ ಕಾನ್‌ಸ್ಟಿಟ್ಯೂಟ್ ಮಾಡಿ ಎಂದು ಹೇಳಬಹುದು, ಛೇರ್ಮನ್ ಅಪಾಯಿಂಟ್ ಮಾಡಬಹುದೆಂದು ಹೇಳಬಹುದು. ಆದರೆ ತಾವು ದಯಮಾಡಿ ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ, ಟ್ರಿಬ್ಯುನಲ್ ಅನ್ನು ರೀ-ಕಾನ್‌ಸ್ಟಿಟ್ಯೂಟ್ ಮಾಡುವಾಗ ಬರೀ ಜಡ್ಜ್‌ಗಳನ್ನು ಮಾತ್ರ ಹಾಕಬೇಡಿ; ಇರಿಗೇಷನ್ ಎಕ್ಸ್‌ಪರ್ಟ್ಸ್ ಹಾಕಬೇಕಾಗುತ್ತದೆ, ಅಗ್ರಿಕಲ್ಚರಲ್ ಸೈಂಟಿಸ್ಟ್ಸ್ ಹಾಕಬೇಕಾಗುತ್ತೆ, ಜಡ್ಜಸ್

ಕೂಡ ಇರಲಿ. ಏಕೆಂದರೆ ಸರಿಯಾದ ಒಂದು ಮಾಹಿತಿ ಇರತಕ್ಕ ಒಂದು ವಾಸ್ತವವಾದ, ಒಂದು ತಾಂತ್ರಿಕ ಮತ್ತು ಕೃಷಿ ವಿಧಾನಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಸರಿಯಾಗಿ ತಿಳಿದುಕೊಂಡ ಪರಿಣಿತರು ಕೂಡ ಅಂಥ ಟ್ರಿಬ್ಯುನಲ್‌ಗಳಲ್ಲಿ ಇದ್ದಾಗ ಮಾತ್ರ ಒಂದು ನಿಷ್ಪಕ್ಷಪಾತವಾದ ತೀರ್ಪು ದೊರೆಯುತ್ತದೆ. ಸರಿಯಾದ ತೀರ್ಮಾನವನ್ನು ನಾವು ನಿರೀಕ್ಷೆ ಮಾಡುವುದಕ್ಕಾಗುತ್ತದೆ. ಹಿಂದೆ ಎಲ್ಲಾ ಇಂಥ ಟ್ರಿಬ್ಯುನಲ್‌ಗಳಿಗೆ ಬರೀ ಜಡ್ಜಸ್ ನೇಮಕ ಮಾಡಬಹುದು ಎಂದು ಇತ್ತು. ಆದರೆ, ಬದಲಾಗತಕ್ಕ ವೈಜ್ಞಾನಿಕವಾದ ನೀರಿನ ಹಂಚುವಿಕೆಯಲ್ಲಿ, ವೈಜ್ಞಾನಿಕವಾಗಿ ನೀರನ್ನು ಉಪಯೋಗ ಮಾಡುವುದರಲ್ಲಿ ಅನೇಕ ವಿಧಾನಗಳು ಇವತ್ತು ಬದಲಾಗತಕ್ಕ ಸಂದರ್ಭದಲ್ಲಿ ಶಾಸ್ತ್ರೀಯವಾಗಿ ಮತ್ತು ವೈಜ್ಞಾನಿಕವಾಗಿ ಈ ವಿಚಾರಗಳನ್ನು ನಾವು ಗಮನದಲ್ಲಿ ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ಬಹುಶಃ ಪರಿಣತರು ಅಂಥ ಟ್ರಿಬ್ಯುನಲ್‌ಗಳಲ್ಲಿ ಇರತಕ್ಕ ಅವಶ್ಯಕತೆ ಇದೆ. Whatervr be the relationship between you and the Prime Minister, that is immaterial. But as a State you will have to write to the Hon'ble Prime Minister and impress upon this point that while reconstituting it, you will have to reconstitute it with the specific members, with the experts. ಇನ್ನೊಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಅಪೇಕ್ಷಿಪಡುವುದೇನೆಂದರೆ, ತಾವು 5 ಟಿಎಂಸಿ. ನೀರನ್ನು ಬಿಟ್ಟಿದ್ದೀರಿ. ಸುಪ್ರೀಂ ಕೋರ್ಟಿನವರಿಗೆ ಏನು ತರಾತುರಿ ಇಲ್ಲ, ಆದರೆ ನಮ್ಮ ಸರ್ಕಾರಕ್ಕೆ ಬಹಳ ತರಾತುರಿ 5 ಟಿಎಂಸಿ ನೀರು ಬಿಟ್ಟು ಕೊಡಲಿಕ್ಕೆ. ಸುಪ್ರೀಂ ಕೋರ್ಟಿನವರು ಹೇಳಿದ್ದಾರೆ, ನಾವು ಬಹಳ ಎಮರ್ಜೆಂಟ್ ಆಗಿ ಕೂಡಲೇ ಇದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಆ ಕೇಸನ್ನು ಮುಂದುವರಿಸಿದ್ದೇವೆ ಎಂದು. may be there is also a mention of release of 5 T.M.C., ... but that alone is not the reason. There are so many other reasons.

SRI M.C.NANAIAH:- I don't say...

SRI M.VEERAPPA MOILY:- That may be one of the reasons.

SRI M.C.NANAIAH:- But that has contributed for the order of the Supreme Court to some extent.

SRI M.VEERAPPA MOILY:- Even otherwise, they would not have taken up for the reasons mentioned here... What has gone into their mind, we cannot know. That is subjective, it is not objective. But in substance,

they are not in a hurry to advance the case, hear it and dispose it of, in substance. Whatever may be the other reasons, may be which is a dominant reason, which is not a dominant reason, that is not the matter which we can discuss.

ಆದುದರಿಂದ ಇವತ್ತು 5 ಟಿಎಂಸಿ ನೀರನ್ನು ತಾವು ಬಿಡುಗಡೆ ಮಾಡಿದಂತ ಸಂದರ್ಭದಲ್ಲಿ ಬಾಕಿ ವಿಚಾರ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ತಮ್ಮನ್ನು 8ನೇ ತಾರೀಖಿಗೆ ಏಕೆ ಸಭೆ ಕರೆದಿರಿ ಎಂದು ಕೇಳಲಿಲ್ಲ. ಆಮೇಲೆ ಅದೇ ದಿವಸ ಆದೇಶ ಕೊಟ್ಟಿರಿ. ರಾತ್ರಿ ನೀರು ಹೋಯಿತು ಎಂದು ಅನೇಕರು ಬಂದು ನನಗೆ ಹೇಳಿದರು. ಆದರೆ ಇವತ್ತು ವಿಚಾರಗಳು ಸ್ಪಷ್ಟವಾಗಲಿಲ್ಲ ನಂಜೇಗೌಡರೆ, ಬಹಳ ಅಸ್ಪಷ್ಟ. ಹತ್ತನೇ ತಾರೀಖಿನ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ವರದಿ ಬಂದಿದೆ:

"The Karnataka Government commenced simultaneous release of Cauvery water from Kabini and Krishnarajasagar Resorvoir today for the standing crops of Tamil Nadu amidst tight Police scarcity. The State Government ordered the Irrigation Department Officials to release Cauvery water this morning who in turn commences releases from Kabini Reservoir. They opened two crush gates of the Krishnaraja Sagar this evening."

ತಾವು ಇಲ್ಲಿ ಎಲ್ಲಾ ಏನು ಅಭಿಪ್ರಾಯ ಕೊಟ್ಟಿದ್ದೀರಿ? ಕಬಿನಿಯಿಂದ ಬಿಡುಗಡೆ ಮಾಡಿದ್ದೇವೆ ಎಂದು. ಮತ್ತೊಂದು ಕಡೆ ವರದಿಯಾಗಿದೆ. ಅಲ್ಲಿ ಸಾಕಷ್ಟು ಸ್ಥಳೀಯ ಜನರ ಅಭಿಪ್ರಾಯ ಕೂಡ ಬೇರೆ ಇದೆ. ಕೆ.ಆರ್.ಸಾಗರದಲ್ಲಿ 8ನೇ ತಾರೀಖಿಗೆ ಅದರ ಹೈಟ್ 91 ಇದ್ದದ್ದು 9ನೇ ತಾರೀಖಿಗೆ ಅದು 90 ಆಗಿದೆ. ಒಂದು ಫುಟ್ ಹೈಟ್ ಕಡಿಮೆಯಾಗಿದೆ. ದಯಮಾಡಿ ತಾವು ಹೇಳಬೇಕು ಏನು ಎಂದು. ನನಗೆ ಗೊತ್ತಿಲ್ಲ ಅದು.

ಶ್ರೀ ಜೆ.ಹೆಚ್.ಪಟೇಲ್:- ನೀರು ಬಿಟ್ಟಿದ್ದಾರೆ. ಅದು ನಮ್ಮ ರೈತರಿಗೆ ಬಿಟ್ಟಿದ್ದಾರೆ.

ಶ್ರೀ ಎಂ.ವೀರಪ್ಪಮೊಯಿಲಿ:- ನಮ್ಮ ರೈತರಿಗೆ ಬಿಟ್ಟಿದ್ದಾರೆ ಎಂದು ಹೇಳುತ್ತೀರಿ. ಆದರೆ ಇವತ್ತು ಈ ವರದಿ ಸರಿಯಿಲ್ಲ ಎನ್ನತಕ್ಕದ್ದು ತಮ್ಮ ಅಭಿಪ್ರಾಯ ಇದ್ದರೆ ಅದು ತಮ್ಮ ಮಾಹಿತಿಗೆ ಒಳಪಟ್ಟಿದ್ದು, ದಯಮಾಡಿ ಹೇಳಿ. Meanwhile Irrigation Department has commenced simultaneous releases from K.R.Sagar Reservoir around 3.00 this afternoon. Reservoir recorded an inflow of 900 million cusecs

against the outflow release of 1100 TMc. According to Irrigation Department sources, it has been decided to descharge 2 TMC ft water from Kabini Reservoir, one TMC ft each from Harangi, Hemavathi, K.R.Sagar reservoirs recorded release of 5 TMC ft of water." ಇಲ್ಲಿ ಮಾನ್ಯ ನೀರಾವರಿ ಸಚಿವರು ಮತ್ತು ಇತರರಿಂದ ಏನು ಅಭಿಪ್ರಾಯ ಒಡಮೂಡಿ ಬಂತು ಅಂದರೆ 5 ಟಿ.ಎಂ.ಸಿ. ಕಬಿನಿಯಿಂದ ಬಿಡುಗಡೆ ಮಾಡುತ್ತೇವೆ ಎಂದು ಒಂದು ಅಭಿಪ್ರಾಯ. ಪತ್ರಿಕೆಗಳಲ್ಲಿ ಮತ್ತು ಸ್ಥಳೀಯವಾಗಿ ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳಿಂದಲೇ ಬಂದ ವರ್ತಮಾನದ ಪ್ರಕಾರ ಇದು, ಯಾವರೀತಿ ಇದನ್ನು ರೀಕನ್‌ಸೈಲ್ ಮಾಡುತ್ತೀರಿ? ವಿರೋಧಾಭಾಸ, ಕಾಂಟ್ರಡಿಕ್ಟರಿ ಸ್ಟೇಟ್‌ಮೆಂಟ್, ಕಾಂಟ್ರಡಿಕ್ಟರಿ ಫ್ಯಾಕ್ಟ್ಸ್ ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಸ್ಥಳೀಯವಾಗಿ ಅಭಿಪ್ರಾಯ ಇದೆ. ಸ್ಥಳೀಯವಾಗಿರತಕ್ಕ ನೀರಾವರಿ ಇಲಾಖೆಯವರು ಹೇಳುತ್ತಾರೆ. ತಾವು ದಯಮಾಡಿ ಇದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಎಲ್ಲಿಂದ ತಾವು ಬಿಡುತ್ತೀರಿ? ಹೇಗೆ ಬಿಡುತ್ತೀರಿ? ನೀರು ಎಲ್ಲಿದೆ? ಬರೀ 900 ಕ್ಯೂಸೆಕ್ಸ್ ಇನ್‌ಫ್ಲೋ ಇರುವಾಗ ಕೆ.ಆರ್.ಸಾಗರದಲ್ಲಿ 1200 ಕ್ಯುಸೆಕ್ಸ್ ಔಟ್‌ಫ್ಲೋ, ಅದು ನಮ್ಮ ರೈತರಿಗೆ ಹೋಗುವುದಿದ್ದರೆ of course it is welcome ಇವತ್ತು ನಮ್ಮಲ್ಲಿ ನೀರು ಇಲ್ಲ ಎಂದು ನಮ್ಮ ಸಭೆಯಲ್ಲಿ ಹೇಳಿದ್ದೀರಿ. ಅದಕ್ಕೆ ಇನ್ನೊಂದು ಪ್ರೂಫ್ ಯಾವುದು ಎಂದು ಹೇಳಿದರೆ ನಿಮ್ಮ ನೀರಾವರಿ ಇಲಾಖೆ. ಕೆ.ಆರ್.ಎಸ್. ಮತ್ತು ಕಬಿನಿಯಲ್ಲಿ ಕಾರಿಫ್‌ಗೆ ನೀರು ಬಿಡುವುದಕ್ಕೆ ಹತ್ತು ಹನ್ನೆರಡು ದಿವಸ ತಡಮಾಡಿದರು. ಅಲ್ಲಿ ನೀರಿದ್ದರೆ ತಡ ಏತಕ್ಕೆ ಮಾಡಬೇಕಾಗಿತ್ತು? ನೀರು ಇಲ್ಲದ ಕಾರಣ ಅಲ್ಲಿ ತಡ ಮಾಡಿದ್ದಾರೆ. 10-12 ದಿವಸ ಕಬಿನಿ ಮತ್ತು ಕೆ.ಆರ್.ಸಾಗರದಿಂದ ನಮ್ಮ ರೈತರಿಗೆ ನೀರು ಬಿಡಲಿಕ್ಕೆ ಅವರು ತಡಮಾಡಿದ್ದಾರೆ. ಅಂದರೆ ಅಲ್ಲಿ ನೀರಿಲ್ಲ. ಜೂನ್‌ನಲ್ಲಿ.....

ಶ್ರೀ ಹೆಚ್.ಸಿ.ಮಹದೇವಪ್ಪ:- ಆ ರೈತರೇ ನೀರು ಬಿಡುವುದನ್ನು ಒಂದು ವಾರ ಮುಂದಕ್ಕೆ ಹಾಕಿ ಎಂದು ಹೇಳಿದ್ದರು.

ಶ್ರೀ ಎಂ.ವೀರಪ್ಪ ಮೊಯಿಲಿ:- ತಾವು ಹೇಳಿ. ಆದರೆ ಅಲ್ಲಿ ರೈತರು ಹೇಳಿದ್ದಾರೋ ಇಲ್ಲವೋ ಎಂಬುದನ್ನು ಪುಟ್ಟಣ್ಣಯ್ಯನವರು ನಮಗೆ ಹೇಳಬೇಕು. ನನಗೆ ಗೊತ್ತಿದ್ದಮಟ್ಟಿಗೆ ಇಲ್ಲ.

ಶ್ರೀ ಹೆಚ್.ಸಿ.ಮಹದೇವಪ್ಪ:- ಕಬಿನಿಯದು ನಾನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಕಬಿನಿಯಿಂದ ಯಾರು ಬೇಕಾದರೂ ನೀರು ತೆಗೆದುಕೊಂಡು ಹೋಗಬಹುದು ಮಹದೇವಪ್ಪನವರ ಪ್ರಕಾರ. ನಮ್ಮ ಕಬಿನಿಯಿಂದ ನೀರು ಬಿಟ್ಟಿದ್ದಾರೆ ಎಂದು ಹೇಳುತ್ತಾರೆ. ಯಾರು ಬೇಕಾದರೂ ಬಾಗಿಲು ತೆಗೆದು ನೀರು ತೆಗೆದುಕೊಂಡು ಹೋಗಬಹುದು.

ಶ್ರೀ ಹೆಚ್.ಸಿ.ಮಹದೇವಪ್ಪ:- ನಾನು ಹಾಗೆ ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಕಬಿನಿ ಅಂದರೆ, ನಮಗೆ ಅನ್ಯಾಯವಾಗಿದೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಕಬಿನಿ ಮತ್ತು ಕೆ.ಆರ್.ಸಾಗರದಿಂದ ನೀರು ಬಿಡುವುದಕ್ಕೆ 10-12 ದಿವಸ ತಡಮಾಡಿದ್ದೀರಿ. ಅಂದರೆ ರೈತರು ಬೇಡ ಅಂತ ಹೇಳಿದ್ದರೋ? ನೀವು ಅಲ್ಲಿ ವಿಚಾರಿಸಿ ಹೇಳಿ. ದಯಮಾಡಿ ಅದನ್ನು ಜಸ್ಟಿಫೈ ಮಾಡಲಿಕ್ಕೆ ಹೋಗಬೇಡಿ.

ಶ್ರೀ ಹೆಚ್.ಸಿ.ಮಹದೇವಪ್ಪ:- ನಿಧಾನವಾಗಿ ಬಿಡಿ ಎಂದು ರೈತರು ಹೇಳಿದರು.

ಶ್ರೀ ಎಂ.ವೀರಪ್ಪ ಮೊಯಿಲಿ:- ಪತ್ರಿಕೆಯವರು ಹೇಳುವುದೆಲ್ಲಾ ಸತ್ಯಕ್ಕೆ ದೂರ, ಅಲ್ಲಿ ಇರತಕ್ಕ ರೈತರು ಹೇಳತಕ್ಕದ್ದು ಸತ್ಯಕ್ಕೆ ದೂರ, ಅಲ್ಲಿ ಇರತಕ್ಕ ರೈತ ಪ್ರತಿನಿಧಿಗಳು ಹೇಳತಕ್ಕದ್ದು ಸರಿಯಿಲ್ಲ, ಆದರೆ ತಾವು ಹೇಳುತ್ತೀರಿ ರೈತರೇ ಹೇಳಿದರು ಬೇಡ ಈಗ ನೀರು ಬಿಡುವುದು, 10-12 ದಿವಸದ ಮೇಲೆ ಬಿಡಿ ಎಂದು. ಇದನ್ನು ನಂಬುವವರು ಯಾರು?

ಶ್ರೀ ಹೆಚ್.ಸಿ.ಮಹದೇವಪ್ಪ:- ಕಬಿನಿ ಡ್ಯಾಮ್‌ನಲ್ಲಿ ಆಗತಾನೇ ಬೆಳೆ ತೆಗೆದುಕೊಂಡ ಮೇಲೆ ಇನ್ನೂ ರೈತರು ಭೂಮಿ ಸಿದ್ಧ ಮಾಡಿಕೊಂಡಿಲ್ಲ. ಒಂದು ವಾರ ಮುಂದೆ ಹಾಕಿ ಎಂದು ಹೇಳಿದರು. ನನ್ನ ಹತ್ತಿರವೇ ಮಾತನಾಡಿದ್ದಾರೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಕೊಳ್ಳೇಗಾಲಕ್ಕೆ ಸಂಬಂಧಪಟ್ಟಂತೆ ಜುಲೈ 10ನೇ ತಾರೀಖಿಗೆ ನೀರು ಬಿಡಬೇಕೆಂದು ತಾವು ಐ.ಸಿ.ಸಿ.ಯವರು ನಿರ್ಣಯ ಮಾಡಿದ್ದೀರಿ. ಆದರೆ ಇದಕ್ಕಲ್ಲ. ಉಳಿದ ಕ್ರಾಪ್‌ಗೆ ನೀರು ಬಿಡಬೇಕಿತ್ತು, ಬಿಡಲಿಲ್ಲ ಅಂತ ಹೇಳಿ. ಕಾರಿಫ್ ಆಪರೇಷನ್‌ಗೆ. ಇದು ಮಾಡಲಿಲ್ಲ. You have delayed it. You have decided to release only on 10th July. ಜುಲೈ 10ನೇ ತಾರೀಖಿಗೆ ನೀವು ಕಬಿನಿಯಲ್ಲಿ ಬಿಡಬೇಕು ಅಂತ ನೀವು ನಿರ್ಣಯ ಮಾಡಿದ್ದೀರಿ. ಅವರಿಗೆ ನೀರು ಬೇಕಾಗಿತ್ತು. You have postponed the Khariff operation. There is no reason except the water. ಕಬಿನಿ ರಿಸರ್ವಾಯರ್‌ನಲ್ಲಿ ನೀರಿಲ್ಲ. ಜೂನ್‌ನಲ್ಲಿ ಸ್ವಲ್ಪ ಸೈಕ್ಲೋನ್ ಎಫೆಕ್ಟ್‌ನಿಂದ ನೀರು ಬಂತು. ಆದರೆ ಇವತ್ತೂ ಕೂಡ ವೈನಾಡು ಭಾಗದಲ್ಲಿ ಮಳೆ ಬರಲಿಲ್ಲ. ಜುಲೈನಲ್ಲಿ ನೀರು ಇಲ್ಲವೇ ಇಲ್ಲ. 20-25 ದಿವಸದಿಂದ ಕೊಡಗಿನಲ್ಲಿ ಮಳೆ ಬರಲಿಲ್ಲ, ವೈನಾಡಿನಲ್ಲೂ ಕೂಡ 10-15 ದಿವಸದಿಂದ ಮಳೆ ಬರಲಿಲ್ಲ. ಕಬಿನಿಗಾಗಲೀ ಕೆ.ಆರ್.ಸಾಗರಕ್ಕಾಗಲೀ ಇನ್‌ಫ್ಲೋ ಎಲ್ಲಿಂದ ಬರಬೇಕು? ಆದ್ದರಿಂದ ತಮಗೆ ಭಯ ಇತ್ತು. ನಿಮ್ಮ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಒಂದು ಭಯ ಏನೆಂದರೆ ನಾವು ಇಷ್ಟು ಬೇಗನೆ ಬಿಡುಗಡೆ ಮಾಡಿದರೆ.... ಮಳೆ ಬರಲಿಲ್ಲ, ಇವತ್ತು ನೀರೂ ಹರಿಯುತ್ತಿಲ್ಲ. ಆದ್ದರಿಂದ ನಾವು ನೀರನ್ನು ಬಿಡುಗಡೆ ಮಾಡಬಾರದು ನಮ್ಮ ಭಾಗದ ರೈತರಿಗೆ ಎಂದು ಯೋಚನೆ ಬಂತು.

ಆದರೆ ತಮಿಳುನಾಡಿನ ರೈತರ ವಿಚಾರ ಬಂದಾಗ, ಈ ಯೋಚನೆ ಇಲ್ಲ ನಿಮಗೆ. This is what I am going to tell. ನಮ್ಮ ರೈತರ ಬಗ್ಗೆ ಬಂದಾಗ ಇದೆಲ್ಲಾ ಆಲೋಚನೆ, ಲೆಕ್ಕಾಚಾರ ಹಾಕಿದಿರಿ. ಆದರೆ ತಮಿಳುನಾಡಿನ ರೈತರ ಬಗ್ಗೆ ಬಂದಾಗ ಕೇಳಿದ ಕೂಡಲೇ ಬಿಟ್ಟುಬಿಟ್ಟಿರಿ. ಯಾವ ಯೋಚನೆ ಕೂಡ ಮಾಡಲಿಲ್ಲ, ನಮ್ಮ ಜೊತೆಯೂ ಯೋಚನೆ ಮಾಡಲಿಲ್ಲ. ಅಥವಾ ರೈತರ ಬಗ್ಗೆ ಕೂಡ ಯೋಚನೆ ಮಾಡಲಿಲ್ಲ. ನೀರಾವರಿ ಇಲಾಖೆಯವರ ಅಭಿಪ್ರಾಯ ಕೂಡ ತಾವು ಕೇಳಲಿಲ್ಲ ಅಂತ ಹೇಳಿದರೆ ಅದು ಅತಿಶಯೋಕ್ತಿ ಆಗುವುದಿಲ್ಲ. ಏಕೆಂದರೆ ಜುಲೈ 10ನೇ ತಾರೀಖಿನ ಟೈಮ್ಸ್ ಆಫ್ ಇಂಡಿಯಾದಲ್ಲಿ ಕೂಡ ಹೇಳಿದ್ದಾರೆ.

"The proposed release of 5 TMC ft water to Tamilnadu by the Karnataka Government, might affect standing crops in the region, If rains fail to occur in the next few days in the upper catchment area of cauvery river, say the officials in Irrigation Department. As per current schedule, the Irrigation Department has promised to provide water to standing crops in the Ayacut areas of four dams in the region for at least 120 days. According to Irrigation Department sources, the authorities are expected to provide water to the standing paddy and sugar cane crops in 1.96 lakh acres in the Ayacut areas of K.R.Sagar Dam."

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಸಭಾಧ್ಯಕ್ಷರೆ, ಅಲ್ಲಿ ಜನ, ರೈತರು ಏನು ಬೆಳೆದಿದ್ದಾರೆ ಏನು ಬಿಟ್ಟಿದ್ದಾರೆ ಎನ್ನುವುದನ್ನು ದಿವಸ ನೋಡುವವರು ಮಹದೇವಪ್ಪನವರು. ಟೈಮ್ಸ್ ಆಫ್ ಇಂಡಿಯಾದೊಳಗೆ ಕ್ರಾಪ್ ನೋಡುವವರು ಮೊಯಿಲಿಯವರು.

ಶ್ರೀ ಎಂ.ವೀರಪ್ಪ ಮೊಯಿಲಿ:- ಇದು ಮೈಸೂರು ರಿಪೋರ್ಟ್. ಜರ್ನಲಿಸ್ಟ್ ಅಲ್ಲಿಗೆ ಭೇಟಿ ಕೊಟ್ಟು ವರದಿ ಮಾಡಿದ್ದಾರೆ. ತಮಗೆ ಮಹದೇವಪ್ಪನವರು ಹೇಳುವುದೇ ವೇದವಾಕ್ಯವಾದರೆ ನಮ್ಮ ಆರ್ಗ್ಯುಮೆಂಟ್ ಇಲ್ಲ. ಆದರೆ ನಾವೂ ರೈತರ ಪ್ರತಿನಿಧಿಗಳಿದ್ದೇವೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಅವರು ಅಲ್ಲಿನ ಪ್ರತಿನಿಧಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ನೀವಲ್ಲವಲ್ಲ.

ಶ್ರೀ ಎಲ್.ಆರ್.ಶಿವರಾಮೇಗೌಡ:- ನಾನಲ್ಲ. ಮಹದೇವಪ್ಪನವರು ಹೇಳುತ್ತಿರುವುದು

ಅಲ್ಲಿನ ರೈತರ ಪ್ರತಿನಿಧಿಯಾಗಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ನೀವು ಮಧ್ಯೆ ಬಾಯಿಹಾಕಬೇಡಿ. ಶಿವರಾಮೇಗೌಡರೆ, ನಿಮ್ಮ ಕೆಲಸ ಏನಿದೆಯೋ ಅದನ್ನು ನಡಸಿ. ನಾವು ಮಾತನಾಡುವಾಗ ನೀವು ಮಧ್ಯೆ ಬರಬೇಡಿ. ಅವರು ಮಂತ್ರಿಗಳು. ಮಾತನಾಡಬಹುದು.

ಶ್ರೀ ಎಲ್.ಆರ್.ಶಿವರಾಮೇಗೌಡ:- ನಿಮ್ಮ ಹೆಲ್ಪ್‌ಗೆ ನಾನು ಹೇಳುತ್ತಾ ಇದ್ದೇನೆ. ಅವರೂ ಅಲ್ಲಿನ ಪ್ರತಿನಿಧಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ಸುಮ್ಮನೆ ಯಾವುದನ್ನು ಮಾತನಾಡಬೇಕೋ ಅದನ್ನು ಮಾತನಾಡಿ. ಇಲ್ಲದೇ ಇದ್ದರೆ ಏನಾಗುತ್ತದೆ? ಬೇರೆ ಯಾವುದೋ ಶಬ್ಧ ಉಪಯೋಗ ಮಾಡಬೇಕಾಗುತ್ತದೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಹಾಗಾದರೆ ನಾವು ಮಾತನಾಡುವುದೇ ಬೇಡವೇ?

ಶ್ರೀ ಎಂ.ವೀರಪ್ಪ ಮೊಯಿಲಿ:- ನೀವೇ ಮಾತನಾಡಿ.

ಶ್ರೀ ಎಲ್.ಆರ್.ಶಿವರಾಮೇಗೌಡ:- ನಾನು ಹೇಳುತ್ತಿರುವುದು ಅಲ್ಲಿನ ಪ್ರತಿನಿಧಿಗಳಾಗಿ ಮಹದೇವಪ್ಪನವರು ಹೇಳುತ್ತಿದ್ದಾರೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಅಧಿಕಪ್ರಸಂಗತನ ಬೇಡ.

ಛೇರ್ಮನ್:- ಶಿವರಾಮೇಗೌಡರೆ, ಮಂತ್ರಿಗಳು ಮಾತನಾಡಲಿ. ನೀವು ಮಾತನಾಡಬೇಡಿ.

ಶ್ರೀ ಎಲ್.ಆರ್.ಶಿವರಾಮೇಗೌಡ:- ನಾವೂ ಮಾತನಾಡಬೇಕಾಗಿದೆ.

ಛೇರ್ಮನ್:- ಶಿವರಾಮೇಗೌಡರೆ, ನೀವು ಮಾತನಾಡಬೇಡಿ. ಮಂತ್ರಿಗಳು, ನಾಯಕರು ಮಾತನಾಡುತ್ತಾರೆ. ಅವರು ಮಾತನಾಡಲಿ. ನೀವು ಕುಳಿತುಕೊಳ್ಳಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಂತ್ರಿಗಳು ಏನೋ ಮಾತನಾಡುತ್ತಾರೆ, ಮಾತನಾಡಲಿ. ನನಗೇನೂ ಯೋಚನೆ ಇಲ್ಲ. ಆದರೆ ಬೇರೆಯವರೆಲ್ಲಾ ಮಧ್ಯೆ ಮಾತನಾಡಿದರೆ I cannot go on yielding for everybody. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳು ಹೇಳತಕ್ಕದ್ದು ಎಲ್ಲಾ ಸುಳ್ಳು, ಸರ್ಕಾರದ ವಕ್ತಾರರಿಂದ ಬಂದಂಥದ್ದೇ ಸತ್ಯ ಎಂದು ಅದೇ ಇವತ್ತು ರೂಢಿಯಾಗಬೇಕಾದರೆ ವಾಟಾಳ್ ನಾಗರಾಜ್ ಅವರೇ ಅದೂ ಒಂದು ಆಗಲಿ. ಆದರೆ ಇವತ್ತು ಈ ವರದಿಗಳ ಬಗ್ಗೆ ಬರೀ ಪತ್ರಿಕೆ ನೋಡಲಿಲ್ಲ. ನಾವೂ ಅಲ್ಲಿ ವಿಚಾರ ಮಾಡಿದ್ದೇವೆ. ಯಾರು ಹೇಳಿದ್ದಾರೆ? ನಾನು ಹೇಳಲಿಲ್ಲ, ನೋ ನೋ ಮಂತ್ರಿಗಳು ಹೇಳಿದ್ದೇ ಸರಿ.

ಶ್ರೀ ಎಸ್.ಎಸ್.ಪಾಟೀಲ್:- ನಾವು ಹಾಗೆ ಹೇಳುವುದಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- ಇಲ್ಲ ಇಲ್ಲ ಹಾಗೆಯೇ ಇರಲಿ ತೊಂದರೆಯಿಲ್ಲ. ನೀವು ಹೇಳಿದ್ದೇ ಸರಿ. ನಮ್ಮ ಬಾಯಿ ಚಟಕ್ಕೆ ಇದನ್ನು ಓದಿ ಹೇಳುತ್ತೇನೆ. ದಯಮಾಡಿ ಒಂದು ತಿಳಿದುಕೊಳ್ಳಬೇಕು, ನಾವು ಇಲ್ಲಿ ಎದ್ದುನಿಂತು ಮಾತನಾಡಿದಾಗ ಬರೀ ಪತ್ರಿಕೆ ನೋಡುವುದಿಲ್ಲ. ನಮ್ಮ ಫೋನ್ ಚೆಕ್‌ಅಪ್ ಮಾಡಿ. ನಾನು 10-15 ಫೋನ್ ಮಾಡಿದ್ದೇನೆ. ಈಗಲೂ ಫೋನ್ ಮಾಡಿಕೊಂಡು ಬಂದೆ. We want to be very sure on facts. ಬರೀ ಪತ್ರಿಕೆ ನೋಡಿ ಮಾತನಾಡುವುದಿಲ್ಲ. ನಾನು 10-15 ಸಾರಿ ಫೋನ್ ಮಾಡಿದ್ದೇನೆ, ಈಗಲೂ ಕೂಡ ಫೋನ್ ಮಾಡಿಕೊಂಡು ಬಂದೆ. ನಾವು ಎಲ್ಲಾ ಪ್ರತಿನಿಧಿಗಳ ಜೊತೆ ಮಾತನಾಡುತ್ತೇವೆ. ರೈತರ ಜೊತೆಯಲ್ಲಿ ಮಾತನಾಡಿ ನಾವು ಇವತ್ತು ಬಂದು ಹೇಳಿದ್ದೇವೆ. ಬರೀ ಪತ್ರಿಕೆಯೆಂದು ಹೇಳಬೇಡಿ. ಆದರೆ ಪತ್ರಿಕೆ ಹೇಳುವುದೆಲ್ಲ ಸುಳ್ಳು ಎಂದು ಹೇಳುವಂಥದ್ದು ಅಲ್ಲ, ನೀವು ಹೇಳುವುದು ಸುಳ್ಳು ಎಂದು ಹೇಳುವುದಿಲ್ಲ. ನಾನು ಮಾನ್ಯ ಮಹಾದೇವಪ್ಪನವರಿಗೆ ಆ ಆಕ್ಷೇಪಣೆ ಎತ್ತಲಿಲ್ಲ. May be, he mey be correct. ಆದರೆ ಇವತ್ತು ಸಾರ್ವತ್ರಿಕವಾಗಿ ರೈತರಿಗೆ ನೀರು ಬೇಕು ನೀರನ್ನು 10-12 ದ್ಥಿವಸ ಕೊಡಲಿಲ್ಲ. ಇವತ್ತು ನೀರಾವರಿ ಮತ್ತು ಕೃಷಿ ಇಲಾಖೆಯ ಅಧಿಕಾರಿಗಳು ಈ ಅಭಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ನೀರು ಕೊಡಬಾರದು, ಕೊಟ್ಟರೆ ನಮ್ಮ ಸ್ಟ್ಯಾಂಡಿಂಗ್ ಕ್ರಾಪ್ಸ್‌ಗೆ ಅನಾಹುತವಾಗುತ್ತದೆ ಎಂಬ ಭಾವನೆ, ಬರೀ ಪತ್ರಿಕೆಯ ಮುಖಾಂತರ ಅಲ್ಲ ಆ ಭಾಗದ ಜನರನ್ನು ಕೂಡ ವಿಚಾರಿಸದಾಗ ಈ ಅಭಿಪ್ರಾಯ ಒಡಮೂಡಿಕೊಂಡು ಬಂದಿದೆ. "Apart from this, the irrigation authorities have issued a notification asking the farmers of Kabini dam Ayacat area to take up cultivation and promised them for supply of water for 131 days begining on July 7th." ಈ ಅಷ್ಯೂರೆನ್ಸನ್ನು ಇವತ್ತು 5 ಟಿಎಂಸಿ, 10 ಟಿಎಂಸಿ ಬಿಡುಗಡೆ ಮಾಡಿದರೆ, 131 ದಿವಸ ನೀವು ಈ ಬೆಳೆಗಳಿಗೆ ನೀರು ಕೊಡತಕ್ಕ ಗ್ಯಾರಂಟಿ ಮಾಡುತ್ತೀರೋ? ಏನು ಮಾನ್ಯ ನೀರಾವರಿ ಸಚಿವರು ಉತ್ತರ ಕೊಡುವಾಗ ಹೇಳಿದರು ಈಗ ನೀರು ನಮ್ಮಲ್ಲಿ 30 ಟಿಎಂಸಿ ಇದೆ ನಮಗೆ ಬೇಕಾದದ್ದು 24 ಟಿಎಂಸಿ 5 ಟಿಎಂಸಿ ನಾವು ಕೊಡಬಹುದು ಅಂತ ಹೇಳಿ ಅದು ಯಾವ ಲೆಕ್ಕಚಾರ ಅದು? ಲೆಕ್ಕಚಾರ ಮಾಡಬೇಕಾದದ್ದು 131 ದಿವಸಕ್ಕೆ. ಮಳೆ ರಾತ್ರಿ ಬೆಳಗಾದರೆ ಬರುವುದಿಲ್ಲ. ಮಳೆಗಾಲ ಹೋದಮೇಲೆ ನೀರು ನಿಲ್ಲಿಸಬೇಕಾಗುತ್ತದೆ. ಇದು ಇವತ್ತಿನ ಪ್ರಶ್ನೆಯಲ್ಲ. ಇದು ನಾಳೆಯ ಪ್ರಶ್ನೆ 131 ದಿವಸಗಳ ಒಂದು ಪ್ರಶ್ನೆಯನ್ನು ಒಂದು ವಿಚಾರವನ್ನು ನಮ್ಮ ಮುಂದಿಟ್ಟುಕೊಂಡು ನೀರು ಬಿಡುಗಡೆ ಮಾಡಬೇಕೇ ಹೊರತು, ಇವತ್ತು ನೀರು ಇದೆ ನಾಳೆ ನೀರು ಇದೆ 31ನೇ ತಾರೀಖು ಜುಲೈವರೆಗೆ ನೀರು ಇದೆಯೆಂದು ವಿಚಾರ ಮಾಡಿ ನೀರು ಬಿಡುಗಡೆ ಮಾಡತಕ್ಕಂತಹ ಯಾವ ಧೋರಣೆಯನ್ನು ತಾವು ವ್ಯಕ್ತಪಡಿಸುತ್ತಾ ಇದ್ದೀರಿ, ಇದರ ಬಗ್ಗೆ ನನ್ನ ಆಕ್ಷೇಪಣೆಯನ್ನು ಇವತ್ತು ಮಾಡುತ್ತಿದ್ದೇನೆ. What is the guarantee?

ಎಂ.ಸಿ ನಾಣಯ್ಯ:- ಮಾನ್ಯ ಸದಸ್ಯರು 5 ಟಿಎಂಸಿ ನೀರು ಬಿಟ್ಟಿರತಕ್ಕ ಬಗ್ಗೆ ಮಾತನಾಡುತ್ತಾ ಇದ್ದೀರಿ. ಪತ್ರಿಕೆಯಲ್ಲಿ ಇರಿಗೇಷನ್ ಅಥಾರಿಟಿಯವರು ಜುಲೈ 7ರಿಂದ 131ದಿವಸಗಳವರೆಗೆ ನಾವು ಈ ನೀರನ್ನು ಕೊಡಲಿಕ್ಕೆ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ ಎಂದು ಹೇಳಿ, ನಿಮ್ಮ ಸ್ಟೋರೇಜ್ ಎಲ್ಲಿದೆ ನಿಮ್ಮ ಸ್ಟೋರೇಜ್ 131 ದಿವಸಗಳವರೆಗೆ ಇರಬೇಕೆಂದು ಹೇಳತಕ್ಕ ವಾದ ನಿಮ್ಮದು. ತಾವೇ ಮುಖ್ಯಮಂತ್ರಿಯಾಗಿದ್ದೀರಿ, ಟ್ರಿಬ್ಯುನಲ್ ಡಿಸಿಷನ್ ಬಂತು. ಟ್ರಿಬ್ಯುನಲ್ ಡಿಸಿಷನ್ ಬಂದಮೇಲೆ ಟ್ರಿಬ್ಯುನಲ್‌ಗೂ ನಾವು ಹೋಗಿದ್ದೆವು. ಹಾಗೆ ಹೋದಂತಹ ಸಂದರ್ಭದಲ್ಲಿ ಟ್ರಿಬ್ಯುನಲ್‌ನಲ್ಲಿ ಕೂಡ ಈ ಡಿಸ್ಟ್ರೆಸ್ ಫಾರ್ಮುಲ ವರ್ಕ್ ಔಟ್ ಮಾಡಿದಿರಿ. ನಮ್ಮ ಕಾಲದಲ್ಲಿಯೂ ಕೂಡ ಡಿಸ್ಟ್ರೆಸ್ ಫಾರ್ಮುಲವನ್ನು ಟ್ರಿಬ್ಯುನಲ್ ಮುಂದೆ ಕೊಟ್ಟಿದ್ದೆವು. ಕೊಟ್ಟಮೇಲೆ ಡಿಸ್ಟ್ರೆಸ್ ಫಾರ್ಮುಲಕ್ಕೆ ಅನುಗುಣವಾಗಿ ಡಿಸ್ಟ್ರೆಸ್ ಬಂದಾಗ change of circumstance ಬಂದಾಗ pro-rata sharing of water ಎಂದು ಹೇಳತಕ್ಕ ಕಾನ್‌ಸೆಪ್ಟನ್ನು, ನಾವು ಒಪ್ಪಿಕೊಂಡಿದ್ದೇವೆ, ಟ್ರಿಬ್ಯುನಲ್ ನೀಡಿರತಕ್ಕ ತೀರ್ಮಾನಕ್ಕನುಗುಣವಾಗಿ ಆ ಕೆಲಸವನ್ನು ಮಾಡಿದ್ದೇವೆ. ಈಗ ನಾವು ಮಾಡುತ್ತಿರತಕ್ಕದ್ದು ಅಷ್ಟೆ. 15 ಟಿಎಂಸಿ ನೀರನ್ನು ಕೇಳಿರತಕ್ಕ ಸಂದರ್ಭದಲ್ಲಿ 15 ಟಿಎಂಸಿ ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳಿ, 5 ಟಿಎಂಸಿ ನೀರನ್ನು ಕೊಡಲಿಕ್ಕೆ ನಾನು ಹೇಳುತ್ತೇನೆ ಈ ಡಿಸ್ಟ್ರೆಸ್ ಫಾರ್ಮುಲವನ್ನು ಸ್ವಲ್ಪಮಟ್ಟಿಗೆ ಬಹಳ ಸೈಂಟಿಫಿಕ್ ಆಗಿ ವರ್ಕ್ ಮಾಡದಿದ್ದರೂ ಕೂಡ pro-rata sharing of basis ಮಾಡಿರತಕ್ಕದ್ದು ಕೂಡ ತಾವು ಸ್ವಲ್ಪಮಟ್ಟಿಗೆ ಗಮನ ಹರಿಸಿಯೆಂದು ನಾನು ಹೇಳುತ್ತಿದ್ದೇನೆ. ನೀವು ಕೊಡುವುದೇ ಇಲ್ಲವೆಂದಾಯಿತು, ನೀರೇ ಬಿಡುವುದಿಲ್ಲವೆನ್ನುವ ಪರಿಸ್ಥಿತಿ ನಿರ್ಮಾಣವಾದರೆ, ಟ್ರಿಬ್ಯುನಲ್ ಮುಂದೆ ಹೇಳತಕ್ಕ ಪರಿಸ್ಥಿತಿ, ಟ್ರಿಬ್ಯುನಲ್ ಆರ್ಡರ್ ಸುಪ್ರೀಂಕೊರ್ಟ್‌ಗೆ 15 ಟಿಎಂಸಿ ಕೊಡಬೇಕೆಂದು ಮಾಡಿರತಕ್ಕ ಅರ್ಜಿಯ ಬಗ್ಗೆ, ನಾವು ಸುಪ್ರೀಂಕೋರ್ಟ್‌ಗೆ ಏನು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ? Ultimately if there is any diminition of water and change of circumstances Tribunal in their clarificatory order have made it specifically clear : "Well, come before us if there is any distress - for pro rata sharing of distress and pro rata sharing of water." This is what the Tribunal has said and that has been done by you while you were the Chief Minister. That was the beginning of it and subsequently we have followed it now. On the 9th, we have filed the petition before the Tribunal relating to distress sharing, distress sharing of water and the pro-rata sharing of water.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸಾಕಷ್ಟು

ಚರ್ಚೆಯಾಗಿದೆ. ಪುನಃ ಅದನ್ನು ಬಳಸಿಕೊಂಡು ಚರ್ಚೆ ಮಾಡುವುದಕ್ಕೆ ಅಪೇಕ್ಷಿಪಡುವುದಿಲ್ಲ. Distress formula in not a formula given by the State Government. Distress formula is a formula given by the Tribunal, in their clarificatory order. We have not agreed for it. Interim order, we have not agreed for it, because the House itself has passed a resolution that it is incapable of implementation. Don't divert the subject.

SRI M.C.NANAIAH:- You were the Chief Minister for two years. Let us not forget about it. You were the Chief Minister of the State for a period of two years.

SRI M.VEERAPPA MOILY:- Please don't twist it.

SRI M.C.NANAIAH:- My point is that the interim order of the Tribunal was rendered on 29th June, 1991. I think we have appeared before the Tribunal. We have already filed our statement. Cross-examination of the witnesses has taken place. I think while you were the Chief Minister, all these things have taken place. Now you say 'We have not accepted the Tribunal order and we should not follow it and we should not have followed it.' Well, I think, while you were the Chief Minister, what had gone in the Tribunal, kindly tell us. Kindly enlighten.

SRI M.VEERAPPA MOILY:- We have already enlightened on this matter number of times - not once, hundred times. We don't want to waste the time. The question is, my responsibility, we own it. But, at the same time what is the resolution of the House? It is incapable of implementation.

SRI M.C.NANAIAH:- You must also bear it in mind what had taken place and how the Government reacted and how the Government decided in respect of the Tribunal order while you were the Chief Minister?

SRI M.VEERAPPA MOILY:- I am quite conscious of it, every bit of it, every word of it. Need not be reminded of that. That is why in 1993, when Mr.Shukla came here, he asked us to release water. We did not release. Yesterday, a part of it, I have said. In a bad year total inflow 333.5 TMC ಆದರೆ ನೀವು ತಮಿಳುನಾಡಿಗೆ, ಕೇರಳಕ್ಕೆ, upstream of Mettur dam 211 ಟಿಎಂಸಿ ಕೊಟ್ಟರೆ, ಕರ್ನಾಟಕಕ್ಕೆ ಉಳಿಯುವುದು ಎಷ್ಟು ಗೊತ್ತೆ? ನಿಮಗೆ? 121.77 ಟಿಎಂಸಿ. Suppose this year is a bad year, ನಮಗೆ ಬ್ಯಾಡ್ ಇಯರ್ ಆಯಿತು. ಇಲ್ಲಿಯವರೆಗೆ ಬ್ಯಾಡ್ ಇಯರ್. It is not a good year. When this is a bad year, are you content with 121 TMC? ಸುಮಾರು 8-9 ಲಕ್ಷ ಎಕರೆಗೆ ಇವತ್ತು ಕಾರೀಫ್ ಬೆಳೆ ನಡೆಯಬೇಕಾಗುತ್ತದೆ. ನಮ್ಮ ಬೇಡಿಕೆ ನಿಜವಾಗಿ ನಮ್ಮ ಕರ್ನಾಟಕ ರಾಜ್ಯದ ಯೋಜನೆಗಳ ಬೇಡಿಕೆ 407.7 ಟಿಎಂಸಿ ಇರುವಾಗ, when it is a bad year where the Tribunal has not made provision for the bad year or the modification order has not made provision for the bad year. When we are facing the bad year as against the requirement of Karnataka to the extent of 407.7 TMC of water, whether the government will be in a position to stand up and say' It is enough, we have 121.77 TMC and we will release the water, because we have to obey the Tribunal order.' ಎಂದು ಹೇಳತಕ್ಕ ವಾದವನ್ನು ತಮ್ಮ ಸರ್ಕಾರ ಮಾಡುವುದು ಇದ್ದರೆ I have no answer for it. The people will answer for it. It is now, in all probability, may be a bad year where you will be left with 121 TMC if you release. ನೀವು ಕಣ್ಣುಮುಚ್ಚಿಕೊಂಡು ಬಿಡುಗಡೆ ಮಾಡಿ. ಹಾಗಾದರೆ 9 ಲಕ್ಷ ಎಕರೆ ಕಾರಿಫ್ ಬೆಳೆಯಲ್ಲಿ ಬಹುಶಃ 2ಲಕ್ಷ ಎಕರೆಗೂ ಕೂಡ ನೀರು ಇಲ್ಲದಿರತಕ್ಕ ಪರಿಸ್ಥಿತಿ ಉದ್ಭವವಾದರೆ ಇದಕ್ಕೆ ಯಾರು ಹೊಣೆ?

4. 10 ಪಿ.ಎಂ.

ಇದು Merchant of Vinnesse ಕಥೆಯಲ್ಲ. For the pound of flesh, can you have a pound of flesh without shedding the blood? Supreme Court ಹೇಳುತ್ತದೆ. alright, you have a pound of flesh, you take it. Tamil Nadu will say, yes. Can you perform a miracle as the Law Minister or in the

State Government that I am going to have the pound of flesh of people of Karnataka or the farmers without shedding the blood? If you adopt an action like this by releasing 5 tmc. 10 tmc or 15 tmc in the name of the tribunal order, I am telling you are shedding the blood of the farmers of Karnataka. This is where we have to be cautious. ತಾವು ದಯವಿಟ್ಟು ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಅದಕ್ಕಾಗಿ ಸಾಕಷ್ಟು ಕನ್ಸಲ್ಟೇಶನ್ ಈ ಬಗ್ಗೆ ಆಗುತ್ತದೆ, ಸಾಕಷ್ಟು ಸಮಾಲೋಚನೆಯಾಗುತ್ತದೆ. ಇಡೀ ಕರ್ನಾಟಕದ ಜನರು, ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇವತ್ತು ಮುಂದುವರೆಯಬೇಕಾದಂಥ ಕಾಲದಲ್ಲಿ ತಾವು ಎಲ್ಲವನ್ನೂ ಕೂಡ ಕೈಬಿಟ್ಟು ಏಕಮುಖವಾಗಿ... you want to give a pound of flesh to the TamilNadu at the cost of the blood and flesh of the people of Karnataka. That is what we are going to condemn. ಇದನ್ನು ತಾವು ಮಾಡುವುದಕ್ಕೆ ಬರುವುದಿಲ್ಲ. ಡಾ: ಜಯಲಲಿತಾ ಅವರ ಹೇಳಿಕೆಯನ್ನು ತಾವು ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಅವರು ಏನು ಹೇಳುತ್ತಿದ್ದಾರೆ? This is very important. ಇದನ್ನು ನಿನ್ನೆ ನಾನು ಹೇಳಿದ್ದೆ. ಏನೆಂದರೆ ಇಂಟರಿಮ್ ಆರ್ಡರ್ ಆದಮೇಲೆ in addition to 1.63 lakh hectares of Kuruvai crop ಒಂದು ಲಕ್ಷ - kuruvai cropನ್ನು ಹೆಚ್ಚುವರಿಯಾಗಿ ಅವರು ಮಾಡಿದ್ದಾರೆ. It is reported from the Agriculture Dept. of TamilNadu. That means there is guaranted water of 205TMC. ಯಾವಾಗ ಟ್ರಿಬ್ಯುನಲ್ ಆದೇಶ ಅವರಿಗೆ ಕೊಟ್ಟಿದೆ, ಅವರು ಆ ಧೈರ್ಯದಿಂದ ಮಾಡಿದ್ದಾರೆ. I have said this. Thereafter you have not pursued. ಮತ್ತೆ ಹೆಚ್ಚು ಎಷ್ಟು ಜಮೀನನ್ನು ಅವರು ಸೇರಿಸಿದ್ದಾರೆ ಎಂಬುದು ನನ್ನ ಹತ್ತಿರ ಮಾಹಿತಿ ಇರಲಿಲ್ಲ. I have got the details now. Dr.Jayalalitha has further said that every year Kuruvai crop is raised in about 6 lakh acres in the delta region. That means as on today ಒಂದೆ ಒಂದು ಲಕ್ಷ 63 ಹೆಕ್ಟೇರ್ ಇದ್ದರೆ, 93ರಲ್ಲಿ ಒಂದು ಒಂದು ಲಕ್ಷಕ್ಕಿಂತಲೂ ಹೆಚ್ಚು ಹೆಕ್ಟೇರ್ ಸೇರಿಸಿದರು. ಈಗ ಪುನಃ ಸುಮಾರು ಒಂದು ಲಕ್ಷ ಹೆಕ್ಟೇರ್ ಹೆಚ್ಚು ಎಂದರೆ - after the interim order they must have added 2 lakh hectares in addition to 1.63 lakh hectares for the Kuruvai crop. ದಯಮಾಡಿ ಇದನ್ನು ಗಂಭೀರವಾಗಿ ತಾವು ಆಲೋಚನೆ ಮಾಡಬೇಕಾಗುತ್ತದೆ. ಹೆಚ್ಚುವರಿ 5 ಟಿ.ಎಂ.ಸಿ. ನೀರು ಏನು ಕೊಡುತ್ತೀರಿ, ಅವರ ಪಾಪದ ಕೊಡಕ್ಕೆ ನೀರು ಸುರಿಯತಕ್ಕಂಥ ಕೆಲಸ ಮಾಡುತ್ತೀರೇ ಹೊರತು ಬೇರೆ ಯಾವುದೇ ಪ್ರಶ್ನೆ ಗಂಭೀರವಾಗಿ ಇಲ್ಲ. ಇದನ್ನು ತಾವು

ವಿಶೇಷವಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ಇದನ್ನು ಜಯಲಲಿತಾ ಅವರು exaggerated ಆಗಿ ಪತ್ರಿಕೆಯಲ್ಲಿ ಹೇಳಿದ್ದಾರೋ ಗೊತ್ತಿಲ್ಲ. But it is a matter which has to be examined. It is a very serious matter to be examined. May be you have to bring it to the notice of the Supreme Court. ಆದ್ದರಿಂದ ಇವತ್ತು 205 ಟಿ.ಎಂ.ಸಿ. ಎಂದು ಏನು ಹೇಳುತ್ತಿದ್ದೀರಿ, ಅವರು ಹೆಚ್ಚುವರಿ ನೀರನ್ನು 50 ಟಿ.ಎಂ.ಸಿ. ಏನು ಹೆಚ್ಚು ಇವತ್ತಿದೆ, ಅದೂ ಕೂಡ ಬ್ಯಾಡ್ ಈಯರ್‌ನಲ್ಲಿ, ಸರ್ಪ್ಲಸ್ ವರ್ಷದಲ್ಲಿ ಅಲ್ಲ, bad and average. Even in an average year the total inflow will be 503 tmc. ಆದರೆ ನಾವು ತಮಿಳುನಾಡಿಗೆ upstream of - ಮೆಟ್ಟೂರು ಮತ್ತು Kerala ಒಟ್ಟು 211 ಆದರೆ, what remains is only 292 tmc. Whereas Tamilnadu will get 448 tmc of water in an average year, not bad year. ನಮಗೆ 292 ಸಿಕ್ಕಿದೆ, as against our demand of 407 tmc. ಇದು ಏನು ನ್ಯಾಯ? It cannot be done by the arithmatic of the Supreme Court or the Tribunal or the government. ಅಲ್ಲಿ ನೀರನ್ನು ಇವತ್ತು ಹಂಚಿಕೊಳ್ಳುತ್ತಿದ್ದೇವೆ. ನಮ್ಮ ಭಾಗದ ಜನರಿಗೆ ಇರಬೇಕಾದುದನ್ನು ಅಪಹರಿಸಿಕೊಂಡು ತಾವು ನೀರು ಕೊಡುವುದಕ್ಕೆ ಆಗುವುದಿಲ್ಲ. I know it must have pained you to release 5 tmc of water. I don't think it is with pleasure you have released. ಎಲ್ಲಾ ವಿಚಾರಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳದೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ತಾವು ಹೇಳಿದಿರಲ್ಲ with pain he might have released ಅಂತ pain with pain - ಅಂತಿದ್ದರೆ ಯಾವುದಾದರೂ ಒತ್ತಾಯ ಮೇರೆಗೆ ಬರುತ್ತಿತ್ತು. ಇದು ಅವರು ಕೇಳುವುದಕ್ಕೆ ಮುಂಚೇನೆ ಪ್ಲೀಸ್‌ನಿಂದಲೇ ಕೊಟ್ಟಿದ್ದುದು.

ಶ್ರೀ ಜೆ.ಹೆಚ್.ಪಟೇಲ್:- ಪೇನ್ ಯಾವಾಗ ಎಂದರೆ, ನಮ್ಮ ಜನರಿಗೆ ಬಿಟ್ಟು ನಾವು ಬೇರೆಯವರಿಗೆ ವ್ಯರ್ಥವಾಗಿ ಸಹಾಯ ಮಾಡುವುದಕ್ಕೆ ಹೋಗಿದ್ದರೆ, ಅದು ಪೇನ್ ಆಗುತ್ತಿತ್ತು. ಆದರೆ ನಮ್ಮವರಿಗೆ ತೊಂದರೆ ಆಗದೇ ಇದ್ದುದರಿಂದ, ನಮಗೆ ಪೇನ್ ಏನೂ ಆಗಲಿಕ್ಕಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- ನಾನು ಇಷ್ಟೆಲ್ಲ ಹೇಳಿ, ಇಡೀ ರಾಮಾಯಣ ಕೇಳಿ ರಾಮ ಸೀತೆಗೆ ಏನು ಆಗಬೇಕು ಎಂದು ಹೇಳಿದರೆ...... ಇದು ಬಹಳ ಕಷ್ಟ. ಜೆ.ಹೆಚ್.ಪಟೇಲರೇ.... ಏಕೆಂದರೆ ನಾನೇನು ಹೇಳಿದೆ? while releasing the water the total requirement for the entire khariff season, ಈ ತಿಂಗಳ ಬೇಡಿಕೆಯನ್ನು ನೀವು ನೋಡುವುದು.

SRI J.H.PATEL:- I do appreciate your view because you are interested in safegaurding our crop. ಅದಕ್ಕೆ ನಾನೇನು ಹೇಳಿದೆ? ನಮಗೂ ಅಷ್ಟೇ ಇಂಟರೆಸ್ಟ್ ಇದೆ. ತೊಂದರೆ ಆಗುವಹಾಗಿದ್ದರೆ, ಪೇಸ್ ಅಲ್ಲ, ಏನಾದರೂ ನಾವು ಕೊಡುತ್ತಿರಲಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- ಅಂದರೆ ಈ ಸೀಸನ್‌ನಲ್ಲಿ ಸುಮಾರು 465 ಟಿ.ಎಂ.ಸಿ. ನಮಗೆ ಬರುತ್ತಿತ್ತು ಎಂದು ಆಶ್ವಾಸನೆ ಮೇಲೆ ಮಾಡುತ್ತಿದ್ದೀರೋ? Suppose you are left with only 121 tmc of water after implementing the distress formula whatever it may be, are you happy as the Leader of the

(ಶ್ರೀ ಎಂ.ಬಸಪ್ಪ ಅವರು ಮಾನ್ಯ ಅಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

House and Hon'ble Chief Minister of Karnataka. You have to ensure not this question 24 tmc which required for this month of July, but you must be interested to ensured 407 tmc of water for the entire season in the basin. Now there is no rain in July. Though it maynot be a bad year, it will be defintely an average year. Worst comes worst, it may be an average year.

ಆ ಸೂಚನೆ ನಮಗೆ ಕಾಣುತ್ತಾ ಇರತಕ್ಕಂಥ ಸಂದರ್ಭದಲ್ಲಿ ಇಲ್ಲ, 30 ಟಿ.ಎಂ.ಸಿ ನೀರಿದೆ, 24 ಟಿ.ಎಂ.ಸಿ. ಜುಲೈಗೆ ಸಾಕು ಎಂದು ಹೇಳಿ ಬರೀ ಒಂದೊಂದೇ ತಿಂಗಳ ವ್ಯವಹಾರ ಮಾಡುವುದಿದ್ದರೆ ಇವತ್ತು 131 ದಿವಸಗಳಿಗೆ ಆ ಬೇಸಿಸ್‌ನಲ್ಲಿ ನೀರನ್ನು ಪೂರೈಕೆ ಮಾಡತಕ್ಕ,ಥ ಮಾಂತ್ರಿಕ ಶಕ್ತಿ ನಮ್ಮ ಜೆ.ಹೆಚ್.ಪಟೇಲರಿಗೆ ಇರುವುದಿದ್ದರೆ These are the days of mantrik. If you have also started believing mantriks and they have advised him to release this water, I have no word to say. But, for any rational human being ಇದು ಆವರೇಜ್ ಈಯರ್‌ಗೆ ಆಗುತ್ತದೆ ಅಥವಾ ಬ್ಯಾಡ್ ಈಯರ್‌ಗೆ ಆಗಬಹುದು. Therefore, it is not the question of protecting the right, but it is a question of protecting the standing khariff crop for 131 days. ಆದ್ದರಿಂದ 131 ದಿವಸಗಳಿಗೆ ಕಾರಿಫ್‌ನ್ನು ರಕ್ಷಣೆ ಮಾಡತಕ್ಕಂಥ, ಆ ದೃಷ್ಟಿಕೋನ ಇಲ್ಲಿ ಇಲ್ಲ, ಇವತ್ತು ನೀರು ಇದೆ. ನಾಳೆ ವಿಚಾರ ನಾಳೆ ನೋಡೋಣ ಎಂದು ರಾಜ್ಯದ ವ್ಯವಹಾರವನ್ನು ಈ ರೀತಿಯಲ್ಲಿ ನಡಸತಕ್ಕಂಥ ವಿಚಾರ ನಡೆದರೆ ರೈತರಿಗೆ ಆಘಾತವಾಗುತ್ತದೆ. ಅದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಜೆ.ಹೆಚ್.ಪಟೇಲ್:- ಸ್ವಾಮಿ, ಈಗ ನಮ್ಮಲ್ಲಿ ಸಾಕಷ್ಟು ನೀರು ಇದೆ. ಇನ್ನು ನಾಲ್ಕುವರೆ ತಿಂಗಳಿಗೆ ಆಗುವಷ್ಟು ನೀರು ಇದೆ ಅದಕ್ಕಾಗಿ ಹೆಚ್ಚಿಗೆ ಬಿಟ್ಟಿದ್ದೇವೆಂದು ನಾವು ಹೇಳಿಲ್ಲ. ನಮ್ಮಲ್ಲಿರತಕ್ಕಂಥ ಈ ನೀರು 15 ದಿವಸ ಅಥವಾ ಮಳೆ ಬರುತ್ತದೆ ಎಂದು ಆಸೆಯಿಂದಲೇ ಹೋಗುವುದು. ಮಳೆ ಬರುವುದಿಲ್ಲ ಎಂದರೆ ನಾನು ಬಿಡುವುದಕ್ಕೆ ಆಗುವುದಿಲ್ಲ. ಮಳೆ ಬಂದಾಗ ನೀರು ತಾನಾಗಿಯೇ ಹರಿದುಹೋದರೆ ಅದು ನಮ್ಮ ಲೆಕ್ಕಕ್ಕೆ ಸಿಗುವುದಿಲ್ಲ. ಅದು ಓವರ್‌ಫ್ಲೋ ಆದರೆ ನಮ್ಮ ಲೆಕ್ಕಕ್ಕೆ ಸಿಗವುದಿಲ್ಲ. ಈಗ ಒಂದು 5 ಟಿ.ಎಂ.ಸಿ. ಕೊಟ್ಟು ಮತ್ತೆ ನಮ್ಮಜಲಾಶಯ ಭರ್ತಿಯಾದರೆ ಅದು ನಮ್ಮ ಲೆಕ್ಕಕ್ಕೆ ಸಿಗುತ್ತದೆ. ಆ ಬುದ್ಧಿವಂತಿಕೆ ಮಾಡಬಾರದು ಎಂದು ನೀವು ಹೇಳಿದರೆ ನಾನು ಒಪ್ಪುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ತಾನಾಗಿ ಹೋಗತಕ್ಕಂಥ ನೀರು ಕೊಟ್ಟಿದ್ದಲ್ಲ. ನಮಗೆ ಇರತಕ್ಕಂಥ ಕೊರತೆಯ ನೀರನ್ನು ಬಿಟ್ಟುಕೊಟ್ಟಿದ್ದೀರಿ. ಆದ್ದರಿಂದ ನೀರಿನ ವಿಚಾರದಲ್ಲಿ ಚೆಲ್ಲಾಟ ಆಡಬಾರದು. ಅದು ರೈತರ ಜೀವನದಲ್ಲಿ ಆಡತಕ್ಕಂಥ ಚೆಲ್ಲಾಟ. ಇಷ್ಟು ಮಾತ್ರ ಸೂಕ್ಷ್ಮವಾಗಿ ಮಾನ್ಯ ಸಭಾನಾಯಕರಿಗೆ ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ):- ಮಾನ್ಯ ಅಧ್ಯಕ್ಷರೇ, ಮೊನ್ನೆಯಿಂದ ಕಾವೇರಿ ವಿಚಾರ ಚರ್ಚೆಯಾಗುತ್ತಾ ಇದೆ. ನಾವೇನು ಸಂತೋಷಪಡಬೇಕೋ ದುಃಖಪಡಬೇಕೋ ನನಗೆ ಅರ್ಥವಾಗುತ್ತಾ ಇಲ್ಲ. ನೇರವಾಗಿ ಹೇಳತಕ್ಕಂಥ ಮಾತು. ಎಷ್ಟೋ ವಿಚಾರಗಳು ಪ್ರಸ್ತಾಪವಾಗದಿರತಕ್ಕಂಥಾದ್ದು ಪ್ರಸ್ತಾಪವಾಗಿದೆ. ಎಷ್ಟೋ ವಿಚಾರಗಳು ಪ್ರಸ್ತಾಪವಾಗಬೇಕಾದ್ದು ಪ್ರಸ್ತಾಪವಾಗಿಲ್ಲ. ಈ ಮಧ್ಯೆ ಸರ್ಕಾರ ಎಡವುತ್ತಲೇ ಇದೆ. ಈಗ ತಾನೆ ಒಂದು ಟೆಲಿಪ್ರಿಂಟರ್ ನ್ಯೂಸ್ ಬಂತು. "Supreme Court today declined to grant an urgent hearing on an application by Tamil Nadu Government." ಎಂದು ಅದಕ್ಕೆ ಕಾರಣ ಕೊಡಬೇಕಾದರೆ, 5 ಟಿ.ಎಂ.ಸಿ ನೀರು ಬಿಟ್ಟಿರುವುದನ್ನೂ ಕಾರಣಕೊಟ್ಟಿದ್ದಾರೆ. One of the reasons. ಮುಖ್ಯಮಂತ್ರಿಗಳು 8ನೇ ತಾರೀಖು ಒಂದು ಸಭೆ ಕರೆದರು. ನಮ್ಮೆಲ್ಲರನ್ನೂ ಕರೆದಿದ್ದರು, ಅಲ್ಲಿ ಒಂದು ಅಂಡರ್‌ಸ್ಟಾಂಡಿಂಗ್‌ಗೆ ಬಂದಿದ್ದೆವು. ಇದು ಸಂಪೂರ್ಣವಾಗಿ ರಹಸ್ಯವಾಗಿರಬೇಕು ಎಂದು ನಾವೂ ಕೆಲವು ಸಲಹೆಗಳನ್ನು ಕೊಟ್ಟೆವು. ಆ ಸಲಹೆಗಳನ್ನು ಅಂಗೀಕರಿಸಿ, ಅದರಂತೆ ನಡೆದುಕೊಂಡು, ಪರಿಣಾಮ ಏನಾಗುತ್ತದೆ ಪುನಃ ನಮಗೆ ತಿಳಿಸಿ ಎಂದು ಹೇಳಿದೆವು. ಬಹುಶಃ ಅವರು ತಿಳಿಸಿಬಿಟ್ಟಿದ್ದರೆ, ಈ ಚರ್ಚೆಗೆ ಅವಶ್ಯಕತೆ ಇರುತ್ತಿರಲಿಲ್ಲ. ಅದೇನೋ ಚೀಟಿ ಕಳುಹಿಸಿದ್ದರಂತೆ, ಖರ್ಗೆಯವರಿಗೆ ಅದು ನಮಗೆ ಯಾರಿಗೂ ಗೊತ್ತಾಗಲಿಲ್ಲ. ಅದು ಎಲ್ಲರಿಗೂ ಗೊತ್ತಾಗಿಬಿಟ್ಟಿದ್ದರೆ, ಬಹುಶಃ ಚರ್ಚೆ ಆಗದೇ ಇರಬಹುದಿತ್ತು ಅಥವಾ ನಿಮ್ಮ ಚೇಂಬರಿನಲ್ಲಿ ಆಗಬಹುದಿತ್ತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮೊನ್ನೆ 8ನೇ ತಾರೀಖು ಸಾಯಂಕಾಲ ವಿಧಾನ

ಸಭೆ ಮುಗಿಯುವುದಕ್ಕಿಂತ ಮುಂಚೆ 6 ಗಂಟೆಗೆ ಒಂದು ಚೀಟಿ ಮೇಲೆ ಬರೆದು ಕಳುಹಿಸಿದ್ದರು. I am intending to release 5 TMC FT of water ಎಂದು ಅದರ ಮೇಲೆ, ನಾನೇನು ಬರೆದೆ ಎಂದರೆ, ನೀವು 5 ಟಿ.ಎಂ.ಸಿ ನೀರನ್ನು ಬಿಟ್ಟರೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕ್ರಿಯೇಟ್ ಆಗುತ್ತದೆ, ಇದರ ಜವಾಬ್ದಾರಿಯನ್ನು ನೀವೇ ಹೊರಬೇಕಾಗುತ್ತದೆ. ನಾವು ಯಾರೂ ಬಿಡುವುದಕ್ಕೆ ಒಪ್ಪುವುದಿಲ್ಲ ಎಂದು ನಾನು ಬರೆದು ಕಳುಹಿಸಿದೆ. ಮರು ದಿವಸ ರಾತ್ರಿ ನೀರನ್ನು ಬಿಟ್ಟೇಬಿಟ್ಟಿದ್ದಾರೆ.

ಶ್ರೀ ಹೆಚ್.ಎನ್.ನಂಜೇಗೌಡ:- ಇವರು ನಮ್ಮ ಪರವಾಗಿ, ಪವರ್ ಆಫ್ ಅಟಾನಿರ ತೆಗೆದುಕೊಂಡು, ಉತ್ತರ ಕೊಟ್ಟರು. ಅವರಿಗೆ ನಮ್ಮದೇನು ಜಮಾ ಖರ್ಚಿಗೆ ಬರಲಿಲ್ಲ. ಚರ್ಚೆ ಮಾಡಬೇಕಾಗುತ್ತದೆ, ಒಂದು ರೀಯಲೈಸ್ ಮಾಡಿಕೊಳ್ಳಬೇಕು. ನನಗೆ ದಿನದಿಂದ ದಿನಕ್ಕೆ ಜ್ಞಾನಾರ್ಜನೆ ಹೆಚ್ಚಾಗಬೇಕಲ್ಲ. Now I have reached a stage where I have understood e.g. in a sower peripheral State like TamilNadu, any lower peripheral State as a matter of fact, they cannot claim to have a free run of the riverflow. Run of the river scheme ಎಂದು ಹೇಳುತ್ತಾರೆ. They cannot 100 ಪರ್ಸೆಂಟ್ ನಮಗೇ ಬರಬೇಕೆಂದು ಅವರು ಹೇಳುವುದಕ್ಕಾಗುವುದಿಲ್ಲ. ಅದೇ ರೀತಿ, Let it be any upper peripheral States, they cannot have the cease of the river flow. ನಾವು ಒಂದು ತೊಟ್ಟು ಬಿಡುವುದಿಲ್ಲ, ಎಲ್ಲಾ ಕಟ್ಟಿಕೊಂಡು ಬಿಡುತ್ತೇವೆ. ಎಂದು ಇದನ್ನು ಮೇಲಿನ ರಾಜ್ಯಗಳೂ ಹೇಳುವುದಕ್ಕಾಗುವುದಿಲ್ಲ. ಯಾವುದೋ ಓಬಿರಾಯನ ಕಾಲದಲ್ಲಿ, ನೂರಾರು ವರ್ಷಗಳ ಹಿಂದೆ ಡೆವಲಪ್ ಆಗದೇ ಇದ್ದಾಗ, ನಮಗೆ run of the river free ಇತ್ತು, 100 ಪರ್ಸೆಂಟ್ ನಮಗೇ ಬರುತ್ತಿತ್ತು. ಅದನ್ನು ಬಿಡಿ ಎಂದು ಕೆಳಗಿನ ರಾಜ್ಯಗಳವರೂ ಹೇಳುವುದಕ್ಕಾಗುವುದಿಲ್ಲ. We are living in a modern society where technology has advanced, science has advanced and dam technology has come to be there in all parts of the World. ಈಗ ಚಿಂತನೆಯೇ ಬೇರೆಯಾಗಿದೆ; ಆ ಪ್ರಶ್ನೆ ಬೇರೆ. ಇಲ್ಲೇನೆಂದರೆ, ಈ ಸರ್ಕಾರಕ್ಕೆ ಒಂದು ಸ್ಟಾಂಡ್ ಬೇಕು. ಅಥವಾ ಮುಖ್ಯಮಂತ್ರಿಗಳು ನೋ ಸ್ಟಾಂಡೇ ನಮ್ಮ ಸ್ಟಾಂಡ್ ಎಂದರೆ, ನಾವೇನೂ ಅಬ್ಜಕ್ಷನ್ ಹಾಕುವುದಿಲ್ಲ. ಸರ್ಕಾರ ಅಂದಮೇಲೆ ಒಂದು ನಿಲುವು ಬೇಕಾಗುತ್ತದೆ. ಒಂದು ಸ್ಟಾಂಡ್ ಬೇಕಾಗುತ್ತದೆ. ಹಿಂದೆ ಚೆನ್ನಬಸಪ್ಪನವರು ಇದ್ದಾಗ, ಅವರ ಮುಖಂಡತ್ವದಲ್ಲಿ ನಾವು ಅವರು ಇದ್ದಾಗ ಎರಡು ಮಾರ್ಗಗಳ ಬಗ್ಗೆ ಹೇಳಿದ್ದೆವು. ಯಾವುದಾದರೊಂದು ವಾಟರ್ ಡಿಸ್‌ಪ್ಯೂಟ್‌ಗೆ, ಎರಡು ಮಾರ್ಗಗಳು ಇವೆ. ಒಂದು ಮಾರ್ಗ ಏನು, ರಾಜಿಯಲ್ಲಿ ಬಗೆಹರಿಸಿಕೊಳ್ಳತಕ್ಕಂಥಾದ್ದು, ರಾಜಿ ಬಗ್ಗೆ ಮಾತುಕತೆಗೆ ಬಂದಾಗ ನಾವೇನು ಹೇಳಿದೆವು. denove consideration ಎಂದು ಹೇಳಿದ್ದೆವು. Definite stand ಹಳೆಯದನ್ನೆಲ್ಲಾ ಬಿಟ್ಟು, 24ನೇ ಅಗ್ರಿಮೆಂಟ್ ಇಲ್ಲ.

ಮತ್ತೊಂದು ಇಲ್ಲ; ಮಗದೊಂದು ಇಲ್ಲ. denove consideration ಹೊಸದಾಗಿ ಕುಳಿತು ಎಲ್ಲವನ್ನೂ ಆಲೋಚನೆ ಮಾಡಬೇಕು. ತದನಂತರ ಲೀಗಲ್ ರೆಮಿಡಿ ಏನು, ಲೀಗಲ್ ರೆಮಿಡಿ ಎಂದರೆ, without national water policy how can there be a remedy? we don't have guidelines? ಕುರುಡನ ಕೈಯಲ್ಲಿ ದೊಣ್ಣೆ ಇದ್ದಹಾಗೆ, ಈ ಜಡ್ಜಗಳ ವ್ಯವಹಾರ. ಜ್ಯುಡಿಷಿಯಲ್ ಆಕ್ಟಿವಿಸಂ ನಾವು ಲೆಕ್ಕಹಾಕಿಕೊಂಡರೆ, ಇಂತಹ ಗೈಡ್‌ಲೈನ್ಸ್ ಇದ್ದೇ ಕೆಲವಾರು ಕೇಸಸ್‌ನಲ್ಲಿ ಏನೇನೋ ಆಗುತ್ತದೆ. ಮೊನ್ನೆ ನನಗೆ ಆಶ್ಚರ್ಯವಾಯಿತು. ಹೈಕೋರ್ಟ್ ಒಂದು ತೀರ್ಮಾನ ಕೊಟ್ಟರು. ಒಂದು ಬಿಲ್ಡಿಂಗ್ ಕಟ್ಟಿ ಎಂದು ಆರ್ಡರ್ ಮಾಡುತ್ತಾರೆ, ಇದು ಒಬ್ಬ ಎಕ್ಸಿಕ್ಯುಟಿವ್ ಇಂಜಿನಿಯರ್ ಮಾಡಬೇಕಾದ ಆರ್ಡರ್ಸ್, ಒಂದು ರೋಡ್ ಮಾಡಿ ಎಂದು ಹೇಳಿದರೆ ನಾವು ಎಲ್ಲಿಗೆ ಹೋಗುತ್ತಾ ಇದ್ದೇವೆ ಎಂದು ಗೈಡ್‌ಲೈನ್ಸ್ ಇರುತ್ತದೆ. ಜ್ಯುಡಿಷಿಯಲ್ ಆಕ್ಟಿವಿಸಂ ಎಂಬ ಹೆಸರಿನಲ್ಲಿ ಏನೇನೋ ಮಾಡಿಕೊಂಡು ಹೋಗುತ್ತಾರೆ. ಇನ್ನು ಗೈಡ್‌ಲೈನ್ಸೇ ಇಲ್ಲದೇ, ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸೇ ಇಲ್ಲದೇ, ಟ್ರಿಬ್ಯುನಲ್ ಮುಂದೆ ಹೋಗುತ್ತಾರೆ. ಅದು ಕೂಡದು ಎಂದು, ಅದೇ ಒಂದು ಖಚಿತವಾದ ಸ್ಟಾಂಡ್ ಇತ್ತು.

(ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಾಮನಿ ಅವರು ಅಧ್ಯಕ್ಷಪೀಠದಲ್ಲಿ ಉಪಸ್ಥಿತರಾದರು)

ಇಲ್ಲಿ ಏನಾಗಿದೆ ಎಂದರೆ, ಸರ್ಕಾರ ಯಾವಾಗಲೂ ಡೆಫಿನೆಟ್ ಸ್ಟಾಂಡ್ ತೆಗೆದುಕೊಂಡ ಹಾಗೆ ನನಗನಿಸಿಲ್ಲ. ಎಲ್ಲಾ ನಮ್ಮ ಕೇಸ್ ಕೆಡಿಸಿರುವವರೇ, ನನಗೇನೂ ಮುಲಾಜಿಲ್ಲ ಹೇಳುವುದಕ್ಕೆ. ಈಗ ನೋಡಿ, ಒಂದೆರಡು ನಿರ್ಣಯಗಳನ್ನು ಸುಮ್ಮನೆ ಪ್ರಾಸಂಗಿಕವಾಗಿ ಓದುತ್ತೇನೆ. ಈ ಸಭೆಯಲ್ಲಿ 6-7-91ರಲ್ಲಿ ಮೊದಲನೇ ನಿರ್ಣಯ.

"This House unanimously urges the Government to reject the Interim Order dated 25-6-91 of the Cauvery Water Disputes Tribunal as it adversely affects the interest of the State and does not meet the legal, factual and practical aspects. In this background, until a national water policy is formulated and an appropriate amendment is brought to the Inter-State water disputes Act, 1956, and the Tribunal is given clear guidelines, this House unanimously urges the Central Government to stay all further proceedings concerning the Cauvery water dispute before the Tribunal.

ಅಂದರೆ, ಜೂನ್‌ನಲ್ಲಿ ಟ್ರಿಬ್ಯುನಲ್ ಆರ್ಡರ್ ಕೊಟ್ಟರು, ಜುಲೈನಲ್ಲಿ ಈ ಸಭೆಯಲ್ಲಿ

ತೀರ್ಮಾನ ತೆಗೆದುಕೊಂಡರು. ಇತ್ತೀಚಿಗೆ, ಪುನಃ ನಿಮ್ಮ ಸರ್ಕಾರ ಬಂದಮೇಲೆ, 28ನೇ ಡಿಸೆಂಬರ್ 1995 ಅದರಲ್ಲಿ ನೀವೇನು ಹೇಳಿದ್ದೀರಿ. ಇನ್ನೊಂದು ನಿರ್ಣಯ ಮಾಡಿದಿರಿ. ಅದನ್ನು ಮಾಡಿಸಿದಾಗ ನಾನು ಈ ಸಭೆಯಲ್ಲಿ ಇರಲಿಲ್ಲ. ಇದು ಮಾಡಿಸಿದಾಗ ಇದ್ದೆ. ''ಅಂತರಾಜ್ಯ ಜಲವಿವಾದದಂಥ ಸೂಕ್ಷ್ಮ, ಗಂಭೀರ ಹಾಗೂ ವ್ಯಾಪಕ ಪರಿಣಾಮಗಳನ್ನುಂಟುಮಾಡುವ ವಿವಾದಗಳನ್ನು ಸಂಬಂಧಿಸಿದ ರಾಜ್ಯಗಳ ಮುಖ್ಯಮಂತ್ರಿಗಳು ಕರೆದು, ಚರ್ಚಿಸಿ, ಸೌಹಾರ್ದಯುತವಾದಂಥ, ಸರ್ವಸಮರ್ಪಕವಾದಂಥ ನಿರ್ಣಯಕ್ಕೆ ಬರುವುದು ಕಾರ್ಯಸಾಧುವು ಹಾಗೂ ಅಪೇಕ್ಷಣೀಯವೆಂದು ಭಾವಿಸಿ, ಈ ವಿವೇಕಯುತವಾದ ನೀತಿಯನ್ನು ಇಲ್ಲಿಯವರೆಗೂ ಅನುಸರಿಸಿಕೊಂಡು ಬಂದಿರುವುದು ಇತ್ತೀಚಿನ ಇತಿಹಾಸ. ರಾಷ್ಟ್ರೀಯ ಜಲನೀತಿಯ ಮಾರ್ಗದರ್ಶನವೇ ನಮಗೆ ಲಭ್ಯವಿಲ್ಲದಿರುವಾಗ, ಅಂತಹ ರಾಷ್ಟ್ರೀಯ ಜಲನೀತಿಯ ಮಾರ್ಗಸೂಚಿಯನ್ನು ರೂಪಿಸಬೇಕಾದ ಅನಿವಾರ್ಯತೆ ಹಾಗೂ ಅಗತ್ಯತೆ ಇದೆಯೆಂದು ಮನಗಂಡು, ಕೇಂದ್ರಸರ್ಕಾರದ ಜಲಸಂಪನ್ಮೂಲ ಸಚಿವರ ಅಧ್ಯಕ್ಷತೆಯಲ್ಲಿ ಇತ್ತೀಚಿಗೆ ಸೇರಿದ ಸಭೆಯಲ್ಲಿ ರಾಷ್ಟ್ರದ ನೀರಾವರಿ ಮಂತ್ರಿಗಳು ತೆಗೆದುಕೊಂಡ ನಿರ್ಣಯವನ್ನು ಸ್ವಾಗತಿಸುತ್ತಾ ಶೀಘ್ರವಾಗಿ ಅಂತಹ ಮಾರ್ಗಸೂಚಿಯನ್ನು ರೂಪಿಸಬೇಕೆಂದು ಈ ಸದನವು ಅತ್ಯಂತ ಕಳಕಳಿಯಿಂದ ಒತ್ತಾಯಪಡಿಸುತ್ತದೆ.'' ಇಂತಹ ಭಾವನಾತ್ಮಕ ಹಾಗೂ ಜಟಿಲ ಸಮಸ್ಯೆಗಳನ್ನು ನ್ಯಾಯಾಲಯದ ವ್ಯಾಪ್ತಿಯ ಹೊರಗಡೆ ಬಗೆಹರಿಸುವುದು ಒಳ್ಳೆಯದು. 6-7-91ರಂದು ಈ ಸದನವು, 25-6-91ರಂದು ಕಾವೇರಿ ಜಲವಿವಾದದ ಬಗ್ಗೆ ಟ್ರಿಬ್ಯುನಲ್ ಮಾಡಿದ ತೀರ್ಪು, ರಾಜ್ಯದ ಹಿತಕ್ಕೆ ಬಾಧಕವೂ ಅನುಷ್ಠಾನಗೊಳಿಸಲಾರದ ತೀರ್ಮಾನವಾಗಿರುವುದರಿಂದ, ಈ ಸದನವು ತೀರ್ಪನ್ನು ತಿರಸ್ಕರಿಸಬೇಕೆಂದೂ, ಹಾಗೂ ರಾಷ್ಟ್ರೀಯ ಜಲನೀತಿಯ ಮಾರ್ಗಸೂಚಿಗಳನ್ನು ರೂಪಿಸುವವರೆಗೆ ಎಲ್ಲಾ ವಿವಾದಗಳ ಇತ್ಯರ್ಥಗಳನ್ನು ಸ್ಥಗಿತಗೊಳಿಸಬೇಕೆಂದೂ ತೆಗೆದುಕೊಂಡಿರುವ ನಿರ್ಣಯಕ್ಕೆ ಈ ಸದನವು ಬದ್ಧವಾಗಿದೆ.''

ರಾಜ್ಯ ರಾಜ್ಯಗಳ ನಡುವಿನ ಇಂತಹ ಗಂಭೀರವಾದ ವಿವಾದಗಳನ್ನು ಸರ್ವಸಮ್ಮತವಾಗಿ ಬಗೆಹರಿಸಲು ಪ್ರಧಾನ ಮಂತ್ರಿಗಳು ಸಂಬಂಧಿಸಿದ ಮುಖ್ಯಮಂತ್ರಿಗಳನ್ನು ಕರೆದು ಚರ್ಚಿಸಿ ನ್ಯಾಯ ಸಮ್ಮತವಾದ ಹಾಗೂ ಸರ್ವಸಮ್ಮತವಾದ ತೀರ್ಮಾನವನ್ನು ತೆಗೆದುಕೊಳ್ಳುವುದು ಹೆಚ್ಚು ಸಮಂಜಸವೂ ಕಾರ್ಯಸಾಧುವೂ ಎಂದು ಈ ಸಭೆಯು ಕೇಂದ್ರ ಸರ್ಕಾರವನ್ನು ಈ ನಿರ್ಣಯದ ಮೂಲಕ ಸರ್ವಾನುಮತದಿಂದ ಒತ್ತಾಯಿಸುತ್ತದೆ.'' ಎಂದು ಹೇಳಿ ಈ ಸದನ ಸರ್ಕಾರಕ್ಕೆ ಒಂದು ಸೂಚನೆ ಕೊಟ್ಟಿದೆ. 91ರ ಜುಲೈನಲ್ಲಿ ಟ್ರಿಬ್ಯುನಲ್ ಛೇರ್ಮನ್ ರಾಜೀನಾಮೆ ಕೊಟ್ಟಿದ್ದಾರೆ. ಮಾನ್ಯ ಸಭಾನಾಯಕರು ಇದನ್ನು ಗಮನಿಸಬೇಕು. Inter State River Disputes Act. Section, 4, sub-section (2)

'The Tribunal shall consist of a chairman and two other Members nominated in this behalf by the Chief Justice of

India from among persons who at the time of such nomination are judges of the Supreme Court or of a High Court....

ಅಂದರೆ ಟ್ರಿಬ್ಯುನಲ್ ರಚನೆ ಆಯಿತು ಎನ್ನಬೇಕಾದರೆ ಛೇರ್ಮನ್‌ರು ಇರಬೇಕು. ಛೇರ್ಮನ್ ಇಲ್ಲದೆ ಟ್ರಿಬ್ಯುನಲ್ ಹೇಗೆ ಇರುತ್ತದೆ? When the Chairman is not there how can there be a Tribunal. ನೀವು ಏನು ಮಾಡಿದ್ದೀರಿ. ನಿನ್ನೇ ಅವರು ಓದುತ್ತಿದ್ದರು. ನಾನು ಪತ್ರಿಕೆಯಲ್ಲಿ ನೋಡಿದೆ. 'State ask Disputes Tribunal to define distress formula' ನೀವು ಅಲ್ಲಿಗೆ ಹೋಗಿ ಅರ್ಜಿಕೊಡುತ್ತೀರೋ? ಟ್ರಿಬ್ಯುನಲ್‌ನ್ನು ಸ್ಥಗಿತಗೊಳಿಸಿ ಅಂತ ಒಂದು ಕಡೆ ಹೇಳುತ್ತಿದ್ದೇವೆ. ಈಗ ಒಂದು ರೀತಿ ನ್ಯಾಚುರಲ್ ಡೆತ್ ಬಂದಿದೆ, ಅದು ಟೆಂಪರರಿ ಡೆತ್ ಇರಬಹುದು.

ಶ್ರೀ ಕೆ.ಎನ್.ನಾಗೇಗೌಡ:- ಒಂದು ನಿನ್ನೆಯೂ ಅವರು ಟೈಮ್ಸ್ ಆಫ್ ಇಂಡಿಯಾ ತೋರಿಸಿ ಹೇಳಿದರು. 1993ನೇ ಡಿಸ್ಟ್ರೆಸ್ ಫಾರ್ಮುಲಾ ಬಗ್ಗೆ ವರ್ಕ್‌ಔಟ್ ಮಾಡಿ ನಾವು ಕೊಟ್ಟಾಗ ತಮಿಳುನಾಡು ಒಪ್ಪಲಿಲ್ಲ. ಕೊನೆಗೆ ಟ್ರಿಬ್ಯುನಲ್ ಮುಂದೆ ಹೋಗಬೇಕು ಅಂತ ತೀರ್ಮಾನ ಆಯಿತು 1995ರಲ್ಲಿ ರಿಜಿಸ್ಟ್ರಾರ್ ಮುಂದೆ ಹೋದಾಗ ಅವರು ಆಗುವುದಿಲ್ಲ ಎಂದು ಹೇಳಿದ ಮೇಲೆ ಫುಲ್ ಟ್ರಿಬ್ಯುನಲ್ ಕೊಡಬೇಕು ಅಂತ ಬಂತು. ಸೇಮ್ ಥಿಂಗ್ ಕಂಟಿನ್ಯೂ ಆಗಿ 9ನೇ ತಾರೀಖು ದಿವಸ ಅದನ್ನೇ ನಾವು ಟ್ರಿಬ್ಯುನಲ್‌ಗೆ ಕೊಟ್ಟಿದ್ದೇವೆ. ಛೇರ್ಮನ್ ಇಲ್ಲ ಅಂತ ಹೇಳಿ ಹಿಯರಿಂಗ್ ಡೇಟ್ ಫಿಕ್ಸ್ ಆಗಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ:- ನಾನು ಹೇಳುವುದೇ ಬೇರೆ. ಅದು ಕೋಮಾದಲ್ಲಿದೆ ಅಂತ ಇಟ್ಟುಕೊಳ್ಳಿ, ಸತ್ತುಹೋಗಿಲ್ಲ. ಛೇರ್ಮನ್ ಇಲ್ಲವಲ್ಲ. It is not constituted now. ಆಯಿತೇ ಟ್ರಿಬ್ಯುನಲ್ ಅನ್ನು ಸ್ಥಗಿತಗೊಳಿಸಿ ಅಂತ ನಾವು ವಾದ ಮಾಡುತ್ತಿರಬೇಕಾದರೆ ಆ ಟ್ರಿಬ್ಯುನಲ್ ಮುಂದೆ ನೀವು ಅರ್ಜಿ ಕೊಡುತ್ತೀರಲ್ಲ! ಇಲ್ಲದಿದ್ದರೆ ಒಂದು ಮಾತು ಹೇಳಿ. ಡೆಫನೆಟ್ ಸ್ಟ್ಯಾಂಡ್‌ನ್ನು ಗೌರ್ನಮೆಂಟ್ ತೆಗೆದುಕೊಳ್ಳಬೇಕು. ಇಲ್ಲ ನೀವು ಹೇಳಿಬಿಡಿ. 100% we are going by the decision of the Tribunal. ಸುಮ್ಮನೆ ತೌಡು ಕುಟ್ಟುವ ವ್ಯವಹಾರ ಬೇಡ. ನಾನು ಬೇಕಾದರೆ ನೂರೆಂಟು ಅಂಕಿಅಂಶಗಳನ್ನು ಇಟ್ಟುಕೊಂಡಿದ್ದೇನೆ. ತೌಡು ಕುಟ್ಟುವ ವ್ಯವಹಾರ ಮಾಡುವುದು ಬೇಡವೇ ಬೇಡ. ಅದನ್ನು ಹೇಳಿಕೊಂಡು ಇದನ್ನು ಹೇಳಿಕೊಂಡು ಹೋಗುವುದು ಬೇಡ. ಏಕೆಂದರೆ.

ಶ್ರೀ ಜೆ.ಹೆಚ್.ಪಟೇಲ್:- ಟ್ರಿಬ್ಯುನಲ್ ಆಗಬೇಕೆಂದು ಆರ್ಡರ್ ಇಶ್ಯೂ ಮಾಡಿದಾಗ ಹೆಡ್ ಆಫ್ ದಿ ಟ್ರಿಬ್ಯುನಲ್ ಯಾರು? ಮೊನ್ನೆ ಅವರು ರಾಜೀನಾಮೆ ಕೊಟ್ಟಾಗ Tribunal automatically ceases to exist. ಎಂದು ಏನಾದರೂ ಇದೆಯೇ? ಆಗಿಲ್ಲ.

SRI H.N.NANJEGOWDA:- Wihtout the Chairman there cannot be a Tribunal.

SRI J.H.PATEL:- When Chairman has resigned it automatically ceases to exist. ಅಂತ ಅರ್ಥ ಬರುವ ರೀತಿಯಲ್ಲಿ ಇದ್ದರೆ, ನಾನು ತಮ್ಮ ವಾದವನ್ನು ಅಪ್ರಿಷಿಯೇಟ್ ಮಾಡುತ್ತೇನೆ. ಹಾಗಿದ್ದರೆ ನಾವು ಹೋಗಿ ಅವರಿಗೆ ಅರ್ಜಿ ಹಾಕುವ ಅವಶ್ಯಕತೆ ಇಲ್ಲ.

SRI H.N.NANJEGOWDA:- No, no, until a new Chairman is appointed the Tribunal cannot function.

SRI M.P.PRAKASH:- Suppose a Presiding Officer is not there either he is on leave or otherwise not posted, the court functions and all other applications connected with that will be filed....

ಶ್ರೀ ಹೆಚ್.ಎನ್.ನಂಜೇಗೌಡ:- ನಾನು ಹೇಳುತ್ತಿರುವುದು ನಾನು ಆಕ್ಟ್ ಏಕೆ ಓದಿದೆ? ಡೆಫೆನೆಟ್ ಆಗಿ ಹೇಳಿದರೆ. It will consist of a Chairman and two other Members and they will be nominated. When the Chairman is not there Tribunal is not there. That is all my point. ಈಗ ನೀವು ಏನು ಹೇಳುತ್ತಿದ್ದೀರಿ ಅಂದರೆ, ತಮಿಳುನಾಡಿನವರು ಹೇಳುವ ವಾದ ಹೇಳುತ್ತಿದ್ದೀರಿ. ಅವರು ಈ ವಾದ ಹೇಳಿದರೆ ನಾನು ಮೆಚ್ಚಿಕೊಳ್ಳುತ್ತಿದ್ದೆ. ಏಕೆಂದರೆ ಅವರಿಗೆ ಬೇಕು ಟ್ರಿಬ್ಯುನಲ್. ನಾವು ಬೇಡ ಬೇಡ ಅಂತ ಕುಳಿತಿದ್ದೇವೆ ಅವತ್ತಿನಿಂದ ಉದ್ದಕ್ಕೂ ಸರಿಯಾಗಿ ಯಾರೂ ಕೇಸ್ ಹ್ಯಾಂಡಲ್ ಮಾಡಿಲ್ಲ ಅಂತ ಏಕೆ ಹೇಳಿದೆ ಅಂದರೆ ನಾನು ಎರಡು ಉದಾಹರಣೆಯನ್ನು ಕೊಡುತ್ತೇನೆ ಮಾನ್ಯ ಅಧ್ಯಕ್ಷರೇ, ಈಗ ಇದರಿಂದ ಏನಾಗುತ್ತದೆ ಅಂದರೆ, some people at some point of time they attempted to buy political protection out of this issue. Of course, some of us also have attempted to play to the gallery. Let us .be frank. ಮೆರಿಟ್ ಮೇಲೆ ನಾವು ಹೋಗುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ನಾವು ಸ್ವಲ್ಪ ನಮ್ಮ ಆತ್ಮಶೋಧನೆಯನ್ನೂ ಸಹ ಮಾಡಿಕೊಳ್ಳಬೇಕಾಗುತ್ತದೆ. Karunanidhi- he wanted to buy political protection. he used V.P.Singh ಟ್ರಿಬ್ಯುನಲ್ ಅಪಾಯಿಂಟ್ ಮಾಡಿಸಿದರು. ಆದರೆ ಫೇಲ್ ಆದರು. ಜಯಲಲಿತಾರವರು ಅಧಿಕಾರಕ್ಕೆ ಬಂದರು. ಜಯಲಲಿತಾ ಮಾಡಬಾರದ್ದೆಲ್ಲಾ ಮಾಡಿ ಆಯಿತು. it never helped. She wanted to buy political protection out of theis issue but she failed. ಏನಂತೀರಿ ಖರ್ಗೆಯವರೆ, ಅಂದರೆ,

ದುರ್ದೈವದ ಸಂಗತಿ ಉದ್ದಕ್ಕೂ ತಮಿಳುನಾಡಿನಲ್ಲಿ ಆಗಲಿ ಕರ್ನಾಟಕದಲ್ಲಿ ಆಗಲಿ ಯಾರು ಅಧಿಕಾರದಲ್ಲಿ ಇದ್ದರೋ always they were interested to buy political protection out of this issue or gain political alienates. ಇನ್ನು ಅದು ಆಗದೇ ಇದ್ದರೆ ಏನು ಮಾಡುವುದು?

SRI J.H.PATEL:- There is a slight amendment. Those who were there before and those who played the role of opposition they wanted to get protection out of this issue.

SRI H.N.NANJEGOWDA:- We also attempted to play to the gallery. I also admit that... ನಾನು ಇಲ್ಲ ಎಂದು ಹೇಳಲೇ ಇಲ್ಲವಲ್ಲ! ಈಗ ಮಾನ್ಯ ಅಧ್ಯಕ್ಷರೇ ನೋಡಿ ಸುಪ್ರೀಂ ಕೋರ್ಟ್ ಆರ್ಡರ್ ಡೇಟೆಡ್ 26-4-91 ಈ ಟ್ರಿಬ್ಯುನಲ್ ನೇಮಕ ಆಯಿತಲ್ಲ ಟರ್ಮ್ಸ್ ಆಫ್ ರೆಫರೆನ್ಸ್ ಏನು ಅಂದರೆ, ಜುಲೈ 6, 86ನೇ ಇಸವಿಯಲ್ಲಿ ತಮಿಳುನಾಡು ಸೆಕ್ರೆಟರಿಯವರು ಒಂದು ಲೆಟರ್ ಬರೆದರು. ಅದು 12-14 ಪೇಜು ಇದೆ. ಅದನ್ನೇ ಟರ್ಮ್ಸ್ ಆಫ್ ರೆಫರೆನ್ಸ್ ಎಂದು ಹಾಕಿಬಿಟ್ಟರು. ಅದೂ ಒಂದು ಇಶ್ಯೂ. even framing that letter whether that could form terms of reference. ಅಷ್ಟಕ್ಕೆ ಮಾಡುವುದು ಸರಿಯೋ ಏನೋ ಅಂತ ಹೇಳಿ. ಕೊನೆಗೆ ಏನಾಯಿತು ಸಹಾಯ್ ಎನ್ನತಕ್ಕಂಥ ಜಡ್ಜ್ ಬರೆದರು.

'I agree with brother Kasibal J. that under the constitutional set up it is one of the primary responsibility of this court to determine the jurisdiction power and limits of any tribunal or authority created under a statute. But I have reservation on other issues including the constitution of letter dated 6th July 1986.

ಅವರು ಹೇಳುತ್ತಾರೆ ರಿಜರ್ವೇಶನ್ ಅಂತ ಹೇಳಿ.

Howerve, it is not necessary to express any opinion on it since what started as an issue of profound constitutional and legal importance fizzled out when the State's of Karnataka and Kerala stated through their Counsels that they were agreeable for determination of the application for interim direction on merits'...

ಇದನ್ನು ಹೇಳದೇ ಇದ್ದಿದ್ದರೆ, ಸುಪ್ರೀಂ ಕೋರ್ಟ್ ತೀರ್ಮಾನ ಖರ್ಗೆಯವರೇ ಬೇರೆ

ಬರುತ್ತಿತ್ತು.

even about the constrution of that letter thery had reservations What started as profound constitutional and legal importances fizzled out...

SRI N.C.NANAIAH:- Of the three Judges that was the observation of Judges Sahai. The other two Judges did not say anything about it. He differed with other two judges. Constitution of the Tribunal he agrees. Constitution of the Tribunal this Judge agree with other Judges, relating to that particular letter of TamilNadu he had his own reservations.

SRI H.N.NANJEGOWDA:- Not the constitution, to determine the jurisdiction power and limits of Tribunal of authority. ಈ ಜಡ್ಜ್ ಏನು ಹೇಳುತ್ತಾರೆ ಅಂದರೆ, 'It may aslo be noted that at the fag end of the argument it was submitted before us on behalf of the State of Karnataka that they were agreeable to proceed with CP on merits before the Tribunal on the terms that all State parties agree with all questions arising out of or connected with or with relevant ನಾನು ಏಕೆ ಇದನ್ನು ಹೇಳುತ್ತೇನೆ ಅಂದರೆ, ಆಗ ನೀವು ಇದ್ದಿರಿ ಅಂತ ಹೇಳುತ್ತಿಲ್ಲ. ಯಾರು ಇದ್ದರೋ ಅವರು ಸರಿಯಾಗಿ ಮಾಡಲಿಲ್ಲ. ಆಮೇಲೆ ಅದು ಹೋಗಲಿ, ಇಂಟೀರಿಯಂ ಆರ್ಡರ್ ಬಂತೇ? 3-4-92ರಲ್ಲಿ ಕ್ಲಾರಿಫಿಕೇಟರಿ ಆರ್ಡರ್ ಬಂತು. ನಾಣಯ್ಯನವರಿಗೆ ನೆನಪು ಇರಬೇಕು, ನಾನು ಸದಸ್ಯ ಅಲ್ಲದಿದ್ದರೂ ನನ್ನನ್ನು ಸಹ ಆ ಸಭೆಗೆ ಕರೆದರು. ಕೃಷ್ಣಾದಲ್ಲಿ ಸಭೆ ಆಯಿತು. one technical expert was also asked to give the opinion ನಾನು ಏನು ಮಾಡಿದ್ದೇ ಅವತ್ತು how this calrificatory order was based on mathematical errors. ಒಂದು ನೋಟ್ ಮಾಡಿಕೊಂಡು ಹೋಗಿ ಸರ್ಕ್ಯುಲೇಟ್ ಮಾಡಿದ್ದೆ. ತಮಗೂ ನೆನಪು ಇರಬೇಕು. absolutely based on arithametical errors.

4.40 ಪಿ.ಎಂ.

ಆವತ್ತು ಏನಾಯಿತೆಂದರೆ, ನಾಣಯ್ಯನವರು ಅದಕ್ಕೆ ಸಪೋರ್ಟ್ ಮಾಡಿಯೇ ಮಾಡಿದರು, ಬಿಳಿಗೊಂಡಲದಲ್ಲಿ 180 ಬಿಟ್ಟರೆ ಆಯಿತು, ಆಚೆಗೆ 25 ಇದೆ, ನಮಗೆ ಕಡಿಮೆ ಆಯಿತು, ನಾನು ಹೇಳಿದೆ ಬಿಳಿಗೊಂಡದಲ್ಲಿ 180 ಬಿಟ್ಟರೂ ಆಯಿತು ಅಥವಾ

ಕಾಂಪ್ಲಿಯೆನ್ಸ್ ಆಫ್ ಕಬಿನಿ, ಕಾವೇರಿದು 160 ಬಿಟ್ಟರೂ ಆಡ್ ಆಗುತ್ತಾ ಹೋಗುತ್ತದೆ. ಕೆ.ಆರ್.ಎಸ್.ಗೆ 100 ಬಿಟ್ಟರೂ ಅಷ್ಟೇ ಆಗುತ್ತದೆ ಎಂದು. ಆದರೆ ಮೊಯಿಲಿಯವರು ಏನು ಮಾಡಿದರು? ಅವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಅವರು ಏನು ಮಾಡಿದರೆಂದರೆ ಇದು ಭಾರಿ ಫಸ್ಟ್ ಕ್ಲಾಸ್ ಎಂದು ಪಬ್ಲಿಕ್ ಸ್ಟೇಟ್‌ಮೆಂಟೂ ಬಂದು ಬಿಡ್ತು. ಅಲ್ಲಿ ವಾದವೇ ವಾದ ಈ ಕ್ಲಾರಿಫಿಕೇಟರ್ ಆರ್ಡರ್ ನಮಗೆ ಅಡ್ವಾಂಟೇಜ್ ಆಗಿದೆ, ಇಂಟರೀಂ ಆರ್ಡರ್ ನಮಗೆ ನಾಲ್ಕು ಒದೆ ಕೊಟ್ಟಿದೆ, ಕ್ಲಾರಿಫಿಕೇಟರಿ ಆರ್ಡರ್ ನಮಗೆ ನಲವತ್ತು ಒದೆ ಕೊಟ್ಟಿತು, ಅದನ್ನು ಇವರು ಸ್ವಾಗತ ಮಾಡಿದರು, ಅಷ್ಟೇ ಅಲ್ಲ ಟೆಕ್ನಿಕಲ್ ಪರ್ಸನ್ಸ್ ಕೈಯಲ್ಲೂ ಹೇಳಿಸಿದ್ದಾರೆ. ನಾವು ಕ್ರಾಸ್ ಎಕ್ಸಾಮಿನ್ ಮಾಡಿದೆವು, ನೀವು ಬಾಳೆ ಕುಂದ್ರಿಯವರನ್ನು ಕೇಳಿದಿರಿ, ಅವರು ಒಂದೇ ಮಾತಿನಲ್ಲಿ ಇನ್ನೊಬ್ಬ ಟೆಕ್ನಿಕಲ್ ಪರ್ಸನ್‌ಗೆ ತೋರಿಸಿ, I don't know what is wrong with him, why he is doing like this, It is only arithmetical errors. ನಾವು ಟ್ರಿಬ್ಯುನಲ್ ಮುಂದೆಯೂ ಅರ್ಜಿ ಹಾಕಿದ್ದೆವು, ನಾನು ಏಕೆ ಹೇಳುತ್ತೇನೆಂದರೆ, ಸರ್ಕಾರಗಳು ಈ ಬಗ್ಗೆ ಎಷ್ಟು ಬೇಜವಾಬ್ದಾರಿಯಿಂದ ನಡೆದುಕೊಂಡಿವೆಯೆಂದರೆ, ನನಗೆ ಆಶ್ಚರ್ಯವಾಗುತ್ತದೆ. ಅರ್ಥಮಿಟಿಕಲ್ ಎರರ್ ಇದೆಯೆಂದು ಹೇಳಿದೆವು, ನಮ್ಮ ಕೋ.ಚನ್ನಬಸಪ್ಪನವರೂ ಬಂದಿದ್ದರು, ಪ್ರೊಫೆಸರ್ ಚಂದ್ರಶೇಖರ್ ಬಂದಿದ್ದರು, ನಮ್ಮ ಬಾರ್ ಅಸೋಸಿಯೇಷನ್ ಪ್ರೆಸಿಡೆಂಟ್ ಬಂದಿದ್ದರು, ಅಲ್ಲಿ ನಾನು ಹೇಳಿದೆ don't think it is heroic on your part to perpetuate your errors, that is what I told them. You have committed arithmetic errors and based your judgement on arithmetical errors. ಒಂದು ಕಡೆ ಬಿಳಿಗೊಂಡಲದಲ್ಲಿ 227 ಇದೆ ಎಂದು ಹೇಳುತ್ತಾರೆ, ಅಲ್ಲಿಂದ ಮೆಟ್ಟೂರ್‌ಗೆ 25 ಆಡ್ ಆಗುತ್ತದೆ, ಅಂದರೆ ಅಲ್ಲಿ 205 ಇದೆ, ಇಲ್ಲಿ 227 ಇದೆ, 25 ಆಡ್ ಆದರೆ ಆವರೇಜ್ ಜಾಸ್ತಿಯಾಗಬೇಕು ತಾನೆ? On no year it was more at Mettur it is always more in Biligondlu. ಅವರು ಏನು ಮಾಡಿದರು? ಗ್ರಾಸ್‌ಗೆ 500 ಅನ್ನೇ ಇಟ್ಟುಕೊಂಡರು, ಅಂದರೆ ಅದು ಮೆಟ್ಟೂರ್ ರೀಡಿಂಗ್, ನೆಟ್ ಇದಕ್ಕೆ ಬಿಳಿಗುಂಡ್ಲು ತೆಗೆದುಕೊಂಡುಬಿಟ್ಟು 227 ಪ್ಲಸ್ 25 ಒಟ್ಟು 252 ಆದರಿಂದ ನೀವು ಉಪಯೋಗ ಮಾಡಿರುವುದೇ 248, ನಾವು 252 ಬಿಡಲಿ ಎಂದು ಹೇಳಬೇಕಾಗಿತ್ತು ಆ್ಯಸ್ ಎ ಕನ್‌ಸೆಷನ್ ಟೆಂಪೊರರಿಯಾಗಿ 205 ಬಿಡಿ ಎಂದು ಹೇಳಿದ್ದೇವೆ. ಇದನ್ನು ಬಹಳ ಚೆನ್ನಾಗಿ ಹೇಳುತ್ತಾರೆ, ಅದನ್ನೇ ನಾನು ಓದುತ್ತೇನೆ, ಏಕೆಂದರೆ ಇದನ್ನೆಲ್ಲಾ ನಾವು ನೆನಪಿಸಿಕೊಳ್ಳಬೇಕಾಗುತ್ತದೆ, ಅವರು ಇನ್ನೊಂದು ಹೇಳುತ್ತಾರೆ, ಗ್ರಾಸ್ ಫಿಗರ್ಸ್ ಕೊಟ್ಟಿರುವವರೂ ನಾವೆ, ನಮ್ಮ ಗ್ರಹಚಾರ ನೋಡಿ ಗ್ರಾಸ್ ಫಿಗರ್ಸ್ ಮೆಟ್ಟೂರಿನಿಂದ ಕೊಟ್ಟಿರುವವರೂ ಕರ್ನಾಟಕ ಗೌರ್ನಮೆಂಟ್‌ನವರೆ, ಬಿಳಿಗೊಂಡಲದಿಂದ ಕೊಟ್ಟಿರುವುದೂ ಕರ್ನಾಟಕ ಗೌರ್ನಮೆಂಟ್‌ನವರು, ಟ್ರಿಬ್ಯುನಲ್ ಮುಂದೆ ಅವರು ಏನು ಹೇಳುತ್ತಾರೆಂದರೆ "As mentioned above at Biligundlu 227 TMCft would be the average annual flow

according to the recordings made at the place by the CWC Gajinasite. To this figure if we add another 25 TMCft. as a contribution from the catchment area in Tamilnadu above Mettur Reservoir the aggregate would come to 252 TMCft. If we subtract 252 TMCft. from the yield of 500 TMCft.".. ಅಂದರೆ ಮೆಟ್ಟೂರಲ್ಲಿ ಗ್ರಾಸ್ 47 ಆಯಿತು, 21 ಪ್ಲಸ್ 47 ಅಲ್ಲಿ 547 ಗ್ರಾಸ್ ಆಗಬೇಕಾಗಿತ್ತು. ಅಲ್ಲಿಗೆ, ಅವರು ಕನ್ವೀನಿಯಂಟ್ ಆಗಿ ಅದನ್ನು ತೆಗೆದುಕೊಂಡರು, ಆಮೇಲೆ ನಮ್ಮ ಮೇಲೆ ಹಾಕುತ್ತಾರೆ ಸಬ್‌ಮಿಟೆಡ್ ಬೈ ಕರ್ನಾಟಕ ಎಂದು ಹೇಳಿಬಿಟ್ಟು "As per the statement of Karnataka the balance would be 248 TMCft. Therefore, according to the figures supplied by the State of Karnataka itself the average annual appropriation by the State of Karnataka would be approximately in the range of 248 TMCft. and not 314 TMCft. as claimed by...."

ಶ್ರೀ ಜೆ.ಹೆಚ್.ಪಟೇಲ್:- ಆ್ಯಕ್ಚುಯಲಿ ನಾವು 500 ಎಂದು ಹೇಳಿದ್ದನ್ನು 47 ಲೆಕ್ಕದಲ್ಲಿ ಸಿಕ್ಕುತ್ತದೆ ಅನುಕೂಲವಾಗುತ್ತದೆಂದು.

ಶ್ರೀ ಹೆಚ್.ಎನ್.ನಂಜೇಗೌಡ:- ಗ್ರಾಸ್ ಅಲ್ಲಿ ತೆಗೆದುಕೊಂಡರು. We are questioning the figures of Mettur because those figures were furnished by Tamilnadu. ತಮಿಳುನಾಡಿನದು ನಾವೇ ತೆಗೆದುಕೊಂಡಿರುವುದು, ನಾವು ತೆಗೆದುಕೊಂಡು ಟ್ರಿಬ್ಯುನಲ್‌ಗೆ ಕೊಟ್ಟಿರುವುದು. ಗ್ರಾಸ್ ಅಲ್ಲಿಯದೇ ಇಟ್ಟುಕೊಳ್ಳಬೇಕು. ನೆಟ್ ಆಗಿ ಬಿಳಿಗೊಂಡಲು ತೆಗೆದುಕೊಂಡ ಮೇಲೆ ಅದನ್ನೇ ಬೇಸ್ ಮಾಡಿ ಮೆಟ್ಟೂರಿನದು ಗ್ರಾಸ್ ಲೆಕ್ಕ ಹಾಕಬೇಕು. ಆಗ ಅದು 547 ಆಗಬೇಕು. ಅದು ಅರ್ಥಮಿಟಿಕ್ ಎರರ್ ಎಂಬುದರಲ್ಲಿ ಅನುಮಾನವೇ ಇಲ್ಲ. ಕೊನೆಗೆ ಟ್ರಿಬ್ಯುನಲ್‌ನವರು ನಮಗೆ ಏನು ಹೇಳಿದರೆಂದರೆ, Mr.Gowda we are not questioning your facts. But, let your Government furnish the same thing. We cannot recognise individuals ಎಂದು ಅವರು ಹೇಳಿದ ಮಾತನ್ನು ಹೇಳುತ್ತೇನೆ, ಅವತ್ತು ನಮ್ಮ ಅಡ್ವೋಕೇಟ್ ಜನರಲ್‌ರವರೂ ಇದ್ದರು. But, let your Government furnish the same thing. We cannot recognise individuals. Supposing 1000 individuals file applications when are you going to dispose them off. That is our problem, let your Government file this. For which I said, if my Government is inefficient do you mean to say that the

inhabitants have to suffer? ಎಂದು ಕೇಳಿದೆ. ಈ ಅರ್ಥಮಿಟಿಕಲ್ ಎರರ್ ಅನ್ನು ತಿದ್ದಿ ಎಂದು. ಇಲ್ಲಿಯವರೆಗೂ ಮೆಮೋ ಹಾಕಲಿಲ್ಲ. ಇದು ಯಾವ ರೀತಿ ನಡೆದುಕೊಂಡು ಬಂದಿದೆ ಎಂದು ನಾನು ಕೆಲವನ್ನು ಇಲ್ಲಿ ಹೇಳಿದೆ. ಇದರಲ್ಲಿ 24ನೇ ಇಸವಿಯವರೆಗೆ ಒಂದು ಇಶ್ಯೂ ಇತ್ತು, 24ರಿಂದ ಸ್ವತಂತ್ರ ಬರುವವರೆಗೂ ಒಂದು ಇಶ್ಯೂ ಇತ್ತು, ಸ್ವತಂತ್ರ ಬಂದ ಮೇಲೆ 1972ನೇ ಇಸವಿಯವರೆಗೂ ಅದು ಒಂದು ಅಂಕ, 1972ನೇ ಇಸವಿ ಆದ ಮೇಲೆ ಒಂದು ಅಂಕ. 1972ರಲ್ಲಿ ಏನಾಯಿತೆಂದರೆ, ಆಗ ದೇವರಾಜ ಅರಸ್‌ರವರು ಮುಖ್ಯಮಂತ್ರಿಯಾಗಿದ್ದರು, ನಾನು ಇನ್‌ಚಾರ್ಜ್ ಇರಿಗೇಷನ್ ಮಂತ್ರಿಯಾಗಿದ್ದೆ, ಆಗ ನೀವು ಕೆ.ಆರ್.ಎಸ್.ಗೆ ಕಟ್ಟೆ ಕಟ್ಟಿಬಿಡುತ್ತೀರಿ, ಜೂನ್ ತಿಂಗಳಲ್ಲಿ ಇಂಥಾ ಜಾಗದಲ್ಲಿ ಆರೂವರೆ ಎತ್ತರದಲ್ಲಿ ನೀರು ಹರಿಯಬೇಕು, ಜುಲೈ ತಿಂಗಳಲ್ಲಿ ಏಳೂವರೆ ಅಡಿ ಹರಿಯಬೇಕು, ಆಗಸ್ಟ್ ತಿಂಗಳಲ್ಲಿ 8 ಅಡಿ ಹರಿಯಬೇಕು, ಆ ತರಹ ನೀರು ಹರಿಯಬೇಕಾದರೆ ಕೆ.ಆರ್.ಎಸ್.ನಿಂದ ಡಿಸ್‌ಚಾರ್ಜ್ ಇಷ್ಟು ಇರಬೇಕೆಂದು ಲೆಕ್ಕ ಹಾಕಿಬಿಟ್ಟಿದ್ದರು, ಅದನ್ನು ಅನುಸರಿಸಿಕೊಂಡೇ ಬಂದಿದ್ದರು ಪಾಪ. ಅದಕ್ಕೆ ನಮ್ಮ ಹೆಚ್.ಎಂ.ಚೆನ್ನಬಸಪ್ಪನವರು ಒಂದು ಮಾತನ್ನು ಹೇಳುತ್ತಿದ್ದರು, ಇದಕ್ಕೆ ನಮ್ಮ ಮಹಾರಾಜರು ಸೈನ್ ಹಾಕಿಬಿಟ್ಟಿದ್ದಾರೆ, ನಾವು ಅನುಸರಿಸದೆ ಹೋದರೆ ಅವರಿಗೆ ಅವಮಾನವಾಗುತ್ತದೆಂದು ಹೇಳುತ್ತಿದ್ದರು. ದೇವರಾಜ ಅರಸ್ ಮುಖ್ಯಮಂತ್ರಿಯಾಗಿದ್ದಾಗ ತಮಿಳುನಾಡಿನ ಸೂಪರಿಂಟೆಂಡಿಗ್ ಇಂಜಿನೀಯರ್ ಮತ್ತು ಎಕ್ಸಿಕ್ಯುಟಿವ್ ಇಂಜಿನೀಯರ್‌ಗಳನ್ನು ಕೆ.ಆರ್.ಎಸ್.ನಲ್ಲಿ ಇಟ್ಟು ಅವರು ದಿನಾ ಸೂಪರ್ ವೈಸ್ ಮಾಡಿ ರೆಕಾರ್ಡ್ ನೋಡುತ್ತಿದ್ದರು. ಈಗಲೂ ಇಟ್ಟಿದ್ದಾರೋ?

SRI K.N. NAGEGOWDA:- Even, today, they have got their own office.

ಶ್ರೀ ಹೆಚ್.ಎನ್.ನಂಜೇಗೌಡ:- ಅದು ಬೇರೆ, ಅವರು ದಿನ ಬಂದು ಚೆಕ್ ಮಾಡುತ್ತಿದ್ದರು. ಆಗ ನಾವು ಒಂದು ಸ್ಟ್ಯಾಂಡ್ ತೆಗೆದುಕೊಂಡೆವು, ಲಿಮಿಟ್ ಫ್ಲೋ ತಪ್ಪು ಆಗಬಾರದೆಂದು ಹೇಳುತ್ತೀರಿ, ಲಿಮಿಟ್ ಫ್ಲೋ ತಪ್ಪಾಗುವುದಕ್ಕೆ ನಾವು ಕಾರಣವೇ? ನೀವು ಆಮೇಲೆ ಮೆಟ್ಟೂರ್ ಡ್ಯಾಮ್ ಕಟ್ಟಲಿಲ್ಲವೇ, ಭವಾನಿ ಡ್ಯಾಮ್ ಕಟ್ಟಲಿಲ್ಲವೇ? ಅಮರಾವತಿ ಡ್ಯಾಮ್ ಕಟ್ಟಲಿಲ್ಲವೇ? ನೋಯಲ್ ಡ್ಯಾಮ್ ಕಟ್ಟಲಿಲ್ಲವೇ? ಪುಲ್ಲಬಂಗಾಡಿ ಬೆಡ್ ರೆಗ್ಯುಲೇಟರ್ಸ್‌ನ್ನು ಅವರೇ ಹಾಕಿಕೊಳ್ಳಲಿಲ್ಲವೇ? ಎಲ್ಲಾ ಮಾಡಿದ ಮೇಲೆ ನಾವು ಏಕೆ ಬಿಡಬೇಕು? ಅವರ ವಾದ ಇದ್ದದ್ದು. ಲಿಮಿಟ್ ಫ್ಲೋ ಮೇಲೆ. 1986ನೇ ಇಸವಿಯಲ್ಲಿ ಬರೆದ ಲೆಟರ್‌ನಲ್ಲೂ ಅದೇ ಇರುವುದು. ಅವರೇ ಮಾಡಿದ್ದಾರಲ್ಲಾ ಕಾರಣವ? ಆಗ ನಾವು ಬಿಡುವುದಿಲ್ಲವೆಂದು ಹೇಳಿದೆವು. ಆಮೇಲೆ ನಮ್ಮನ್ನು ಅವರು ರಾಜೀಗೆ ಕರೆದರು. 1972ರ ಮೇ 29, 30 ಎರಡು ದಿನ ಮಾತುಕತೆ ಆಯಿತು, ದೇವರಾಜ ಅರಸ್‌ರವರು, ಕರುಣಾನಿಧಿಯವರು ಅಚ್ಚುತಮೆನನ್‌ರವರು ಅದರಲ್ಲಿ ಭಾಗವಹಿಸಿದ್ದರು. ಇದೇ ಕರುಣಾನಿಧಿಯವರು ಇನ್ನೂ ಬದುಕಿದ್ದಾರೆ, ಒಂದು ರೀತಿ ಡೀನೋ ಕನ್ಸಿಡರೇಷನ್ ಅಂತೆ, ಅದು ಅವತ್ತು ಆಗಿ ಹಳೆಯದೆಲ್ಲಾ ಬಿಟ್ಟು ರಾಜೀ

ಮಾಡಿಕೊಳ್ಳಬೇಕು, ಅದಕ್ಕೆ ಅನುಕೂಲವಾಗುವ ಹಾಗೆ ಫ್ಯಾಕ್ಟ್ ಫೈಂಡಿಗ್ ಕಮಿಟಿ ಮಾಡಬೇಕು ಎಂದು ಇವೆಲ್ಲಾ ಅವತ್ತು ಆಯಿತು. ಅದಾದ ಮೇಲೆ ಒಂದು ಹಂತ. 1974ನೇ ಇಸವಿ ಆಯಿತು, ಆಮೇಲೆ ಟ್ರಿಬ್ಯುನಲ್ ಬಂತು, ಇವತ್ತು ಯಾರ್‍ಯಾರು ಅಪರಾಧ ಮಾಡಿದ್ದಾರೋ ಅವರೆಲ್ಲಾ ಇವತ್ತು ಹುತಾತ್ಮರಾಗಿದ್ದಾರೆ. ವೀರೇಂದ್ರಪಾಟೀಲರ ಕಾಲಿಗೆ ಬಹಳ ಜನ ಅಡ್ಡ ಬೀಳಲಿಲ್ಲ. ಎಷ್ಟೆಲ್ಲಾ ಹೇಳಿದರು ಟ್ರಿಬ್ಯುನಲ್‌ಗೆ ಒಪ್ಪಿಕೊಳ್ಳಬೇಡಿ ಅದಕ್ಕೆ ನ್ಯಾಷನಲ್ ವಾಟರ್ ಪಾಲಿಸಿ ಮಾಡಲಿ ಎಂದು. ಸ್ಟ್ಯಾಟುಟರಿ ಗೈಡ್‌ಲೈನ್ಸ್ ಇಲ್ಲದೇ ನೀರು ಹಂಚಿಕೆ ಮಾಡುವುದು ಅಂದರೆ, ನೀವು ಕುರುಡನ ಕೈಗೆ ದೊಣ್ಣೆಯನ್ನು ಕೊಟ್ಟ ಹಾಗೆ ಮಾಡಿದರೆ, ಆತನು ತಲೆಗೆ ಹೊಡೆಯಬಹುದು, ಕಣ್ಣಿಗೆ ಹೊಡೆಯಬಹುದು, ಮೈಗೆ ಹೊಡೆಯಬಹುದು. ಆದ್ದರಿಂದ ಒಂದು ಗೈಡ್‌ಲೈನ್ಸ್ ಬೇಕಾಗುತ್ತದೆ. ನ್ಯಾಶನಲ್ ವಾಟರ್‌ಪಾಲಿಸಿ ಮಾಡಿ, ಆಮೇಲೆ ಟ್ರಿಬ್ಯುನಲ್ ಮಾಡಿ ಎಂದು ಹೇಳಿದರು, ಈ ಸಭೆಯಲ್ಲಿಯೂ ಕೂಡ ಎಲ್ಲರೂ ಒತ್ತಾಯ ಮಾಡಿದರು. ನಾನು ಆ ಸಮಯದಲ್ಲಿ ಸದಸ್ಯನಾಗಿರಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ:- ಮೊನ್ನೆ ಸುಪ್ರೀಂ ಕೋರ್ಟ್‌ನವರು ಏನು ಜಜ್‌ಮೆಂಟ್ ಕೊಟ್ಟಿದ್ದಾರೆ ಅದು 16-4-96ರಲ್ಲಿ. ಮೊನ್ನೆ 'you should not proceed further' ಎಂದು ಪಿಟಿಶನ್ ಏನಿತ್ತು, ಆ ಪಿಟಿಶನ್‌ನ್ನು ಮೊನ್ನೆ ರಿಜೆಕ್ಟ್ ಮಾಡಿದ್ದಾರಲ್ಲ? ಹಾಗೆ ರಿಜೆಕ್ಟ್ ಮಾಡುವಾಗ ಅವರು ಒಂದು ವಿಚಾರ ಹೇಳಿದ್ದಾರೆ. ನ್ಯಾಶನಲ್ ವಾಟರ್ ಪಾಲಿಸಿ ಮಾಡಿ ಗೈಡ್‌ಲೈನ್ಸ್ ಅದು ಬರುವವರೆಗೆ ನಾವು ಕಾಯುವುದಕ್ಕೆ ಅವಶ್ಯಕತೆ ಇಲ್ಲ, ಆದರಿಂದ ಏನು ಅಷ್ಟು ವ್ಯತ್ಯಾಸವಾಗುವುದಿಲ್ಲ ಎನ್ನುವ ಮಾತನ್ನು ಅವರು ಹೇಳುತ್ತಾ ಇದ್ದರು. ಅಂದರೆ ಅವರು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ ಅಂದ ಹಾಗೆ ಆಗುತ್ತದೆಯಲ್ಲವೇ? ನ್ಯಾಶನಲ್ ವಾಟರ್ ಪಾಲಿಸಿ ಇದ್ದರೂ ಕೂಡ ನಾವು ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಅದೇನೂ ಬೈಂಡಿಂಗ್ ಆಗತಕ್ಕಂಥಾದ್ದೇನೂ ಅಲ್ಲ "Just we can see, but it is not a binding factor on us" ಎನ್ನುವ ಒಂದು ಅಭಿಪ್ರಾಯವನ್ನು ಅವರು ಕೊಟ್ಟಿದ್ದಾರೆ.

ಶ್ರೀ ಹೆಚ್.ಎನ್.ನಂಜೇಗೌಡ:- ಟ್ರಿಬ್ಯುನಲ್‌ರವರಿಗೆ National Water Resource Council ಏನು ಇದೆ ಇದು It is not a constitutional statutory body ಎಂದು ಹೇಳುತ್ತಾರೆ. ನಾವು ನ್ಯಾಶನಲ್ ವಾಟರ್ ಪಾಲಿಸಿ ಪ್ರೈಂಮಿನಿಸ್ಟರ್ ಅಧ್ಯಕ್ಷರಾಗಿ ರಾಷ್ಟ್ರದಲ್ಲಿರತಕ್ಕಂಥ ಎಲ್ಲಾ ಮುಖ್ಯಮಂತ್ರಿಗಳೂ ಸದಸ್ಯರಾಗಿ ಒಂದು ಪಾಲಿಸಿಯನ್ನು ಮಾಡುತ್ತಾರೆ. ಅದು ಅಷ್ಟಕ್ಕೇ ನಿಲ್ಲುವುದಿಲ್ಲವಲ್ಲ? That will be brought into force in the form of a statute. Statutory guidelines ಅಂತ ನಾವು ಕರೆಯುವುದು. Inter-State River Water Disputes Act ಅಮೆಂಡ್ ಮಾಡಿ ಎಂದು ತಾನೆ? ನ್ಯಾಶನಲ್ ವಾಟರ್ ಪಾಲಿಸಿ ಮಾಡಿ ಕೈಬಿಡುತ್ತಾರೆಯೇ? ಕೈಬಿಡಿ ಎಂದು ನಾವು ಹೇಳುವುದಿಲ್ಲ. ನ್ಯಾಶನಲ್ ವಾಟರ್‌ಪಾಲಿಸಿ ಮಾಡಿ it should be in the form of a statute and

accordingly the Inter-State Water Desputes Act should be amended incorporating all these guidelines to the Judges. ಆಗ ಎಷ್ಟಾದರೂ ಬರಲಿ. ಮಾನ್ಯ ವೀರೇಂದ್ರ ಪಾಟೀಲರು ಹೇಳಿಬಿಟ್ಟು ಒಪ್ಪದೇ ಇರುವುದಕ್ಕೆ ಸಾಧ್ಯವಿತ್ತು. ನಾವು ಅಲ್ಲಿಯವರೆಗೆ ತಳ್ಳಿಕೊಂಡು ಬಂದಿದ್ದೆವು. ಟ್ರಿಬ್ಯುನಲ್ ಮಾಡಬೇಕೆಂಬ ಬಗ್ಗೆ 1975ರ ಹೊತ್ತಿಗೆ ಮಾತುಕತೆ ಪ್ರಾರಂಭ ಮಾಡಿದರು. ಅಧಿಕೃತವಾಗಿ 1986ರಲ್ಲಿ ಲೆಟರ್ ಬರೆದರು. 1986ರ ಜೂನ್‌ನಲ್ಲಿ ಅವರು ಲೆಟರ್ ಬರೆದರು ಆಗಸ್ಟ್‌ನಲ್ಲಿ ನಾವು ಒಂದು ಮೆಮೋರಾಂಡಂ ಕೊಟ್ಟೆವು. ನೀವು ನ್ಯಾಶನಲ್ ವಾಟರ್ ಪಾಲಿಸಿ ಮಾಡಿಬಿಟ್ಟು ಸ್ಟ್ಯಾಚುಟರಿ ಗೈಡ್‌ಲೈನ್ಸ್ ಮಾಡಿ ನಮಗೇನೂ ಅಡ್ಡಿ ಇಲ್ಲ. ನಮಗೆ ಎಷ್ಟು ಬರುತ್ತದೆಯೊ? ಅಷ್ಟು ಬರಲಿ, ಜಾಸ್ತಿ ಬಂದರೆ ಜಾಸ್ತಿ ಇರಲಿ, ಕಡಿಮೆ ಬಂದರೆ ಕಡಿಮೆ ಬರಲಿ. ಅದು ಆಗಲಿಲ್ಲ. ಆಮೇಲೆ ನಿನ್ನೆ ಮಾನ್ಯ ಮೊಯಿಲಿಯವರು ಕೆಲವು ಫಿಗರ್ಸ್ ಕೊಟ್ಟರು. I thought we should rectify the figures i.es, national average of percentage of irrigation. ನ್ಯಾಶನಲ್ ಆವರೇಜ್ 32.5 ಪರ್‌ಸೆಂಟ್ ಇದೆ. ಆಂಧ್ರಪ್ರದೇಶದ್ದು 35.4 ಪರ್‌ಸೆಂಟ್ ಇದೆ. ತಮಿಳುನಾಡಿನದು 43.8 ಪರ್‌ಸೆಂಟ್ ಇದೆ. ಕರ್ನಾಟಕದ್ದು 18.7 ಪರ್‌ಸೆಂಟ್ ಇದೆ. ಇನ್ನೊಂದು ಅಂಕಿ-ಅಂಶವನ್ನು ನಾವು ನೆನಪು ಇಟ್ಟುಕೊಳ್ಳುವುದು ಒಳ್ಳೆಯದೆಂದು ಕಾಣುತ್ತದೆ. ಬರಪ್ರದೇಶವು ಒಟ್ಟು ರಾಷ್ಟ್ರದಲ್ಲಿರತಕ್ಕಂಥಾದ್ದು 4 ಕೋಟಿ 97 ಲಕ್ಷ ಹೆಕ್ಟೇರ್‌ಗಳು. ಕರ್ನಾಟಕದಲ್ಲಿ ಇರತಕ್ಕಂಥಾದ್ದು ಒಂದು ಕೋಟಿ 3 ಲಕ್ಷ ಹೆಕ್ಟೇರ್‌ಗಳು. ಅಂದರೆ ರಾಷ್ಟ್ರದ ಒಟ್ಟು ಭಾಗದಲ್ಲಿ ಶೇಕಡ 23 ಭಾಗ ಕರ್ನಾಟಕದಲ್ಲಿದೆ. ಆ ಮೇಲೆ ಬರಪ್ರದೇಶದಲ್ಲಿ ವಾಸ ಮಾಡುವ ಜನ. ಇಡೀ ರಾಷ್ಟ್ರದಲ್ಲಿ 4 ಕೋಟಿ 80 ಲಕ್ಷ ಜನರಿದ್ದಾರೆ. ಕರ್ನಾಟಕದಲ್ಲಿ ಒಂದು ಕೋಟಿ 15 ಲಕ್ಷ. ಅಂದರೆ ಬರಪ್ರದೇಶದಲ್ಲಿ ನಮ್ಮ ರಾಜ್ಯದಲ್ಲಿ ಶೇಕಡಾ 26ರಷ್ಟು ಇದ್ದಾರೆ. ಮಾನ್ಯ ಮೊಯಿಲಿಯವರು ಮೀಸೆ ತಿರುವಿಕೊಂಡು ಒಂದು ಅಂಕಿಅಂಶವನ್ನು ಹೇಳಿ ಹೊರಟು ಹೋದರು. ಹಾಗಾಗಿ ಇದು ನಮಗೆ ಕಷ್ಟ... ನಾವು ನೀರು ಬಿಡುವುದೇ ಇಲ್ಲ ಎಂದು ಹೇಳಿ ಏಕೆ ನೀರು ಬಿಡುತ್ತೀರಿ? 205 ಟಿಎಂಸಿಎಫ್‌ಟಿ ಬಿಡಿ ಎಂದು ಹೇಳಿದ್ದರು. 1991-92ರಲ್ಲಿ 34836 ಬಿಳಗುಂಡ್ಲದಲ್ಲಿ. ಮೆಟ್ಟೂರಿಗೆ ಹೋಗಿರುವುದು 365.6 1992-93ರಲ್ಲಿ ಬಿಳಗುಂಡ್ಲದಲ್ಲಿ 358.6, ಮೆಟ್ಟೂರಿನಲ್ಲಿ 383.6. 1993-94ರಲ್ಲಿ ಬಿಳಗುಂಡ್ಲು 230.4 ಟಿಎಂಸಿಎಫ್‌ಟಿ. ಮೆಟ್ಟೂರು 255.4 ಟಿಎಂಸಿಎಫ್‌ಟಿ. 1994-95ರಲ್ಲಿ ಬಿಳಗುಂಡ್ಲುದಲ್ಲಿ 396.2. ಮೆಟ್ಟೂರಿನಲ್ಲಿ 421.2 1995-96ರಲ್ಲಿ ಬಿಳಗುಂಡ್ಲುವಿನಲ್ಲಿ 197. ಮೆಟ್ಟೂರಿನಲ್ಲಿ 222. ಆದ್ದರಿಂದ ನೀರು ಏಕೆ ಬಿಡಬೇಕು? ಅದಾಗಿಯೇ ಹೋಗಿದೆಯಲ್ಲ? ಅವರಾದರೂ ಏಕೆ ಕೇಳಬೇಕು? ಫ್ಲಡ್ ಬಂದು ಮಳೆ ಜಾಸ್ತಿಯಾಗಿ ಅದೃಷ್ಟ ಚೆನ್ನಾಗಿತ್ತು. ಏಕೆಂದರೆ ಆ ಕ್ಲಾರಿಫಿಕೇಟರಿ ಆರ್ಡರ್‌ನ್ನು ಬಾಯಿ ತುಂಬ ಹೊಗಳಿ ಮಾತನಾಡಿದ್ದನ್ನು ನಾನು ಈ ಕಿವಿಯಲ್ಲಿಯೇ ಕೇಳಿದ್ದೇನೆ. ಮೀಟಿಂಗ್‌ನಲ್ಲಿ ಮೊಯಿಲಿಯವರು ಆ ಮಾತುಗಳನ್ನು ಆಡಿದರು. ನಾನು ಯಾರ ಮೇಲೆ ಆಪಾದನೆ ಮಾಡಬೇಕೆಂದು ಹೇಳುತ್ತಾ ಇಲ್ಲ. ಖಚಿತವಾಗಿ ಒಂದು ಸ್ಟ್ಯಾಂಡನ್ನು ನಾವು ಉದ್ದಕ್ಕೂ ತೆಗೆದುಕೊಳ್ಳಲಿಲ್ಲ. 1974ನೇ ಇಸವಿ

ಇಂದ ಒಂದೇ ಸಮನೆ ಇಡೀ ರಾಷ್ಟ್ರದಲ್ಲಿ ಪ್ರಚಾರವಾಯಿತು. ಕರ್ನಾಟಕದವರು ಭಂಡರು. ನೀರು ಬಿಡುವುದಿಲ್ಲ, ನೀರನ್ನು ಇಟ್ಟುಕೊಂಡು ಬಿಟ್ಟಿದ್ದಾರೆ, ತಮಿಳುನಾಡಿನವರನ್ನು ಸಾಯಿಸುತ್ತಿದ್ದಾರೆ, ಎಂದೆಲ್ಲಾ ಆಯಿತು. ಹೋದ ವರ್ಷ ಮಾತ್ರ ಇದು ತಿರುಗು-ಮುರುಗು ಆಯಿತು. ನಾನು ಯಾರನ್ನು ಹೊಗಳಬೇಕೆಂದಲ್ಲ, ಪರಿಸ್ಥಿತಿಯು ಆ ರೀತಿಯಾಗಿ ಬಂತು. ಹೋದ ಸಾರಿ ರಾಷ್ಟ್ರದಾದ್ಯಂತ National Press also came to our aid in telling the truth to the whole country. ಅವರು ಅನ್‌ರೀಸನಬಲ್ ಇದ್ದಾರೆ ಎಂದು ಹೇಳಿ. ಈ ವರ್ಷ ಇವರು ಐದು ಟಿಎಂಸಿ ನೀರು ಬಿಡಬೇಕಾದರೆ ಏನು ಮಾಡಿದರು? ನಾನೇನು ಅಂದುಕೊಂಡಿದ್ದೆ ಎಂದರೆ ನಾವು 8ನೇ ತಾರೀಖು ಕೆಲವು ಸಲಹೆಗಳನ್ನು ಕೊಟ್ಟೆವು. ನಾವು ನಿರೀಕ್ಷೆ ಮಾಡಿದ್ದೇನೆಂದರೆ, ಈಗಲೂ ನಿರೀಕ್ಷೆ ಮಾಡುವುದೇನೆಂದರೆ ಬದಲಾದಂಥ ರಾಜಕೀಯ ಪರಿಸ್ಥಿತಿಯಲ್ಲಿ, ನೀವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಏನಿತ್ತು? ಜಯಲಲಿತಾ ಮತ್ತು ನಾವು ಮುಖಮುಖಿ ನೋಡುವುದಕ್ಕೆ ತಯಾರಾಗಿರಲಿಲ್ಲ. ನಮಸ್ಕಾರ ಮಾಡಿದರೆ ಅವರು ನಮಸ್ಕಾರ ಮಾಡುವುದಕ್ಕೆ ತಯಾರಾಗಿದ್ದಿಲ್ಲ. ಒಮ್ಮೆ ಬಂಗಾರಪ್ಪನವರು ನಮಸ್ಕಾರ ಅಂದರೆ ಬೆನ್ನು ತಿರುಗಿಸಿಕೊಂಡ ಫೋಟೋ ಕೂಡ ಬಂತು. ಅಷ್ಟೊಂದು hospitality ಕೂಡ ಇರಲಿಲ್ಲ. ಅದರಲ್ಲಿಯೂ ಮಾನ್ಯ ನರಸಿಂಹರಾಯರಿಗೆ ಹೋದ ಸಾರಿ ಮನನ ಮಾಡಿಕೊಟ್ಟ ಮೇಲೆ ಅವರು ಒಂದು ಮಾತನ್ನು ಹೇಳಿದರು. ಅವರು ಕಾಗದ ಬರೆದಂಥ ಕಾಲದಲ್ಲಿ ಒಂದು ಕಮಿಟ್‌ಮೆಂಟನ್ನು ಕೊಟ್ಟರು.

"I propose to convene the Water Resources Council of which all the Chief Ministers are Members in early February to discuss and adopt the above policy guidelines (i.e., National water policy guidelines). I do believe that this is the only viable process by which complications such as we are dealing with could be obviated to a large extent making for smoother working of the water sharing mechanism and strengthening a sense of national integration through our river systerms."

ಅಧ್ಯಕ್ಷರು:- ಯಾವ ಡೇಟ್ ಅದು?

ಶ್ರೀ ಹೆಚ್.ಎನ್.ನಂಜೇಗೌಡ:- ನಮ್ಮ ಮುಖ್ಯಮಂತ್ರಿಯವರಿಗೆ ಅವರು ಬರೆದುದು 1-1-1996ರಲ್ಲಿ.

ಅಧ್ಯಕ್ಷರು:- ನಿಮ್ಮದೊಂದು ಮೀಟಿಂಗ್ ಆಗಿತ್ತಲ್ಲ ಡೆಲ್ಲಿಯಲ್ಲಿ? ಅದಕ್ಕೆ ನೀವೆಲ್ಲರೂ ಹೋಗಿದ್ದೀರಿ, ಅದು ಯಾವ ಡೇಟಿಗೆ ಆಗಿತ್ತು?

ಶ್ರೀ ಹೆಚ್.ಎನ್.ನಂಜೇಗೌಡ:- ಅದಾದ ಮೇಲೆ ಇದನ್ನು ಅವರು ಕಳುಹಿಸಿದರು. ಅವರು ನಮಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರು. ನಾನು ಪ್ರಧಾನ ಮಂತ್ರಿಗಳ ಸಮ್ಮುಖದಲ್ಲಿ, ಇರಿಗೇಷನ್ ಮಿನಿಸ್ಟರ್, ಲಾ-ಮಿನಿಸ್ಟರ್, ಸಿಡಬ್ಲ್ಯುಸಿ ಮೆಂಬರ್‌ರು, ಇರಿಗೇಶನ್ ಕಮಿಶನರ್‌ರು, - ಮುಂತಾಗಿ ಇಷ್ಟು ಜನ ಇದ್ದಂಥ ಕಾಲದಲ್ಲಿ ಅವರಿಗೆ ಮನದಟ್ಟು ಮಾಡಲು ಪ್ರಯತ್ನ ಪಟ್ಟೆ. ಅವರು ಅರ್ಥ ಮಾಡಿಕೊಂಡರು. He agreed that is the only viable suggestions. ನಾನು ನಿರೀಕ್ಷೆ ಮಾಡಿದ್ದೆ, ಈಗ ಬದಲಾದಂಥ ರಾಜಕೀಯ ಪರಿಸ್ಥಿತಿಯಲ್ಲಿ ಕರುಣಾನಿಧಿಯವರೇನು ಹಾಸ್ಟೈಲ್ ಆಟಿಟ್ಯೂಡ್ ತೆಗೆದುಕೊಂಡಂತೆ ನನಗೆ ಕಾಣಲಿಲ್ಲ. ಇವರು ನೀರೇ ಬಿಡುವುದಾಗಿದ್ದರೆ. ಮಾತುಕತೆ ಆಡಿ, ಕೋರ್ಟಿಗೆ ಹೋಗುವುದು ಬೇಡ, ನಾವು ಅಕ್ಕಪಕ್ಕದ ರಾಜ್ಯದ ಸ್ನೇಹಿತರುಗಳು ಎಂದು ಫ್ರೀಫೋನ್ ಮಾಡಬಹುದಿತ್ತು. ನಾನು ಈಗಲೂ I appeal to our counterparts in Tamilnadu including the Chief Minister of Tamilnadu, not to opt for legal remedies. It is an appeal. ನಾನ್ಯಾಕೆ ಈ ಮಾತು ಹೇಳುತ್ತಿದ್ದೇನೆಂದರೆ elsewhere in the world ಇಂಥ ತಕರಾರುಗಳಲ್ಲಿ ಲೀಗಲ್‌ರೆಮಿಡೀಸ್ ಕೊಟ್ಟಿದ್ದರೂ implementations have not become possible. It is not possible without the active co-operation of concerned parties, particularly the upper riparian States. If the upper riparian States do not co-operate, any legal decisions cannot be implemented. ಅದು ನೆವರ್ ಎಂಡಿಂಗ್ ತಲೆನೋವಾಗುತ್ತದೆ. ಪಂಜಾಬ್ ಹರಿಯಾಣ ಇವತ್ತಿಗೂ ಗಲಾಟೆ our Tamilnadu people have to understand this. It is the responsibility of the politicians and the men in Government and on the opposition to educate the people also. ಏಕೆಂದರೆ ಇವೆಲ್ಲ ಎಮೋಶನಲ್ ಇಶ್ಯೂಸ್ ಉರಿಯುವ ಬೆಂಕಿಗೆ ತುಪ್ಪ ಹಾಕಿದಂತೆ ಮಾಡುವುದಲ್ಲ. We have to educate the people also. ನಾನು ಮೊದಲೇ ಹೇಳಿದೆ ಅಧ್ಯಕ್ಷರೇ ನೀವಿಲ್ಲಿರಲಿಲ್ಲ Any lowest riparian State cannot opt to have the entire free run of the flow of a river and so also any upper riparian State cannot seize the river. ಒಂದು ತೊಟ್ಟೂ ಬಿಡುವುದಿಲ್ಲ ಅಂದರೆ ಇದು ಆಗುವುದಿಲ್ಲ ಈಗ. ಅವರು ಎಲ್ಲವನ್ನೂ ಕೇಳುವುದಕ್ಕಾಗುವುದಿಲ್ಲ ನಾವೆಲ್ಲ ಹಿಡಿಯುವುದಕ್ಕಾಗುವುದಿಲ್ಲ on these lines we have to educate the people also. ಅವರು ಹೇಳುತ್ತಿರುತ್ತಾರೆ, ನಾವು 760 ಟಿ.ಎಂ.ಸಿ. ಉಪಯೋಗಿಸಿದೆವು ಎಂದು ಹೌದು, ಯಾವ ಮೇಲಿನ ಸ್ಟೇಟ್‌ಗಳು ಡೆವಲಪ್ ಆಗಿರಲಿಲ್ಲವೋ ಎಲ್ಲವನ್ನೂ ಅವರೇ ಉಪಯೋಗಿಸಲಿ. ನೀವೆಷ್ಟು ಉಪಯೋಗಿಸುತ್ತೀರಿ ಅಂದರೆ ಅವರು ಅಂಕಿಅಂಶ ಕೊಡುವುದು, ನೋಡಬೇಕು 680

ಟಿಎಂಸಿ ಉಪಯೋಗಿಸಿರಬಹುದು ಅವರು ಅಂದರೆ ಲಗ್ಜುರಿಯಸ್ಸಾಗಿ ಒಂದು ಸಾವಿರ ಎಕರೆಗೆ ಒಂದು ಟಿಎಂಸಿ ಮಾಡಿದಿರಪ್ಪ, ಇಲ್ಲಿ ನಾವು ಹತ್ತೂವರೆ ಸಾವಿರ ಎಕರೆಗೆ ಒಂದು ಟಿಎಂಸಿ ಬಿಟ್ಟು ಕುಳಿತುಕೊಳ್ಳುವುದು, ಹಿಂದೆ ಉಪಯೋಗಿಸಿರಬಹುದು rear appropriation right ಎಂದು ನಾನು ಹೇಳುತ್ತಿರುತ್ತೇನೆ ಮಾನ್ಯ ನಾಣಯ್ಯನವರೇ, ಶೋಷಣೆ ಅವೆಲ್ಲ ಔಟ್‌ಡೇಟೆಡ್ rear appropriation, prescriptive rights, they are all outdated. Equitable distribution is the onlyway.

ಆಮೇಲೆ ಇನ್ನು ಹೆಚ್ಚಿಗೆ ನಾನು ಮಾತನಾಡುವ ಅವಕಾಶ ಮಾಡದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಷ್ಟು ಹೊತ್ತು ಹಿಂದಿನ ಸರ್ಕಾರಕ್ಕೆ ಬೈಯುವುದೇ ಆಯಿತು, ಈ ಸರ್ಕಾರಕ್ಕೆ ಯಾವಾಗ ಬೈಯುತ್ತೀರಿ, ಮುಗಿಸುತ್ತೇನೆ ಅಂತಿದ್ದೀರಿ.

ಶ್ರೀ ಎಚ್.ಎನ್.ನಂಜೇಗೌಡ:- ಸ್ವಲ್ಪ ತಡೆಯಿರಿ, ನಮಗೆ ಕಷ್ಟ ಏನೂ ಎಂದರೆ ಖರ್ಗೆಯವರೇ, ಜೆ.ಹೆಚ್.ಪಟೇಲರು ಮುಖ್ಯಮಂತ್ರಿಗಳು, ಅವರ ಕಂಡರೆ ಪ್ರೀತಿ ನನಗೆ ಏಕೆ ಅಂತ ಕೇಳಬೇಕು ನೀವು, ಏಕೆಂದರೆ ಅವರಿಗೆ ಹಿಂದೊಂದು ಹೇಳಿ ಮುಂದೊಂದು ಹೇಳಿ ಅಭ್ಯಾಸ ಇಲ್ಲ. ನೇರವಾಗಿ ಮಾತನಾಡುತ್ತಾರೆ, ಚೀಟಿ ಕಳಿಸಿ ನೀವೆಲ್ಲ ಸಹಾಯ ಮಾಡುತ್ತೀರಿ ಅಂತ ನಂಬಿಕೊಂಡು ನೀರು ಬಿಟ್ಟರು. ದೇವೇಗೌಡರಾಗಿದ್ದರೆ ಅಷ್ಟು ಸುಲಭವಾಗಿ ನೀರು ಬಿಡುವವರೇ ನಿಮ್ಮನ್ನೆಲ್ಲ ಕರೆದು ಕೂರಿಸಿ, ಕೊಳೆಹಾಕಿ ಸಧ್ಯ ಎದ್ದುಹೋದರೆ ಸಾಕಲ್ಲಪ್ಪ ಎನ್ನುವಷ್ಟು ಕೂರಿಸಿ, ಅಯ್ಯೋ ನಮ್ಮನ್ನು ಬಿಟ್ಟರೆ ಸಾಕು ಏನಾದರೂ ಮಾಡಿಕೊಳ್ಳೋ ಮಾರಾಯ ಅಂತ ಅನಿಸಿಕೊಂಡು ಆಮೇಲೆ ನೀರು ಬಿಡೋರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾವೆಷ್ಟು ಹೇಳಿದರೂ ಅವರು ನೀರು ಬಿಡುತ್ತಿರಲಿಲ್ಲ ಕೊನೆಯಲ್ಲಿ ನಿಮ್ಮದೊಂದು ಶಬ್ದ ಅವರ ಕಿವಿಯಲ್ಲಿ ಬಿದ್ದರೇ ಅವರು ನೀರು ಬಿಡುತ್ತಿದ್ದರು.

ಶ್ರೀ ಎಚ್.ಎನ್.ನಂಜೇಗೌಡ:- ಇವರನ್ನೂ ನಂಬಿ, ಏಕೆಂದರೆ ದುರುದ್ದೇಶ ಇಲ್ಲವಲ್ಲ....

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಪಟೇಲರು ನೀರು ಬಿಟ್ಟರು ಎನ್ನುತ್ತಾರೆ ಅಲ್ಲಿಂದ ಆದೇಶ ಕೊಟ್ಟವರು ಯಾರು?

ಶ್ರೀ ಜೆ.ಎಚ್.ಪಟೇಲ್:- ನಿಜವಾದ ಮಾತು, ಯಾರೂ ಆದೇಶ ಕೊಡಲಿಲ್ಲ, ಇದರಿಂದ ರಾಜ್ಯದ ಹಿತಕ್ಕೆ ಧಕ್ಕೆಯಾಗುವುದಿಲ್ಲ ಅದಕ್ಕಾಗಿ ಹೇಳುತ್ತೇನೆ, 8ನೇ ತಾರೀಖು ಬೆಳಿಗ್ಗೆ 9 ಗಂಟೆಗೆ ನಾವೆಲ್ಲ ಸೇರಿದ್ದೆವು, ಆಗ ಎಲ್ಲರೂ ಒಪ್ಪಿದ್ದರು, ಈಗ ನಮ್ಮವರೇ ಪ್ರಧಾನಮಂತ್ರಿಯಾಗಿರುವ ಕಾರಣ ರಾಜ್ಯದ ಹಿತ ಕಾಯುವ ಅಧಿಕಾರ ಅವರಿಗೆ

ವಹಿಸಿದ್ದೇವೆ, ನೀವು ಅವರ ಹತ್ತಿರ ಮಾತಾಡಿ ಅಂತ ಹೇಳಿದಿರಿ. ಆಮೇಲೆ ಸುಪ್ರೀಂ ಕೋರ್ಟಿಗೆ ಅವರು ಅರ್ಜಿ ಹಾಕುತ್ತಿದ್ದಾರೆ, ಅದಕ್ಕೆ ಮುಂದೆ ಏನಾದರೂ ಪ್ರಯತ್ನಮಾಡಿ ಸಂಧಾನ ಏನಾದರೂ ಆಗುತ್ತದೇನೋ ಎಂದು ಬೇರೆಯವರು ನನ್ನ ಹತ್ತಿರ ಮಾತಾಡಿದರು ನನಗೆ ಅಲ್ಲಿಗೂ ಗೊತ್ತಿರಲಿಲ್ಲ, ನಾಲ್ಕೂವರೆಗಂಟೆ ಇರಬಹುದು, ನಾನು ಮನೆಯಿಂದ ಬರುತ್ತಾ ಇದ್ದೆ ಆಗ ನನಗೆ ಮೆಸೇಜ್ ಬಂತು ಅವರು ಸುಪ್ರೀಂಕೋರ್ಟಿಗೆ ಹೋಗುತ್ತಾರೆ, ಆದರೆ 5 ಟಿಎಂಸಿ ನೀರು ನಾವು ಬಿಡುವುದು ಸೂಕ್ತ ಅಂತ ಒಬ್ಬರು ಹೇಳಿದರು.

(ಗೊಂದಲ)

ಲಾಯರ್ ಹತ್ತಿರ ಮಾತಾಡಿ ಬೊಮ್ಮಾಯಿಯವರು ನನಗೆ ಹೇಳಿದರು, ಇದರಲ್ಲಿ ಸೀಕ್ರೆಟಿಲ್ಲ, ಅದೇನು ದೊಡ್ಡ ಕ್ರೈಮಾ? in the interest of the State. ಆಮೇಲೆ ವಾಟರ್‌ಪೊಜಿಶನ್ ಹೇಗಿದೆ? ಅವರು 15 ಟಿಎಂಸಿ ಕೇಳಿದರೆ ನಾವು ಕೊಡುವುದಕ್ಕಾಗುವುದಿಲ್ಲ 40 ಕೇಳಿದರಂತೂ ನೀರೇ ಇಲ್ಲ, ಐದಾದರೆ ಏನು ಮಾಡಬಹುದು ಅಂತ ನಾನು ಬಂದು we have deciced to release 5 TMC of water ಎಂದು ಯಡಿಯೂರಪ್ಪನವರಿಗೆ ಒಂದು ಚೀಟಿ ಕಳಿಸಿದೆ, ಖರ್ಗೆಯವರಿಗೊಂದು ಚೀಟಿ ಕಳಿಸಿದೆ I did not want to keep it as a secret. ನೀವಿದ್ದಿದ್ದರೆ ನಿಮಗೂ ಹೇಳೇ ಹೇಳುತ್ತಿದ್ದೆ.

ಶ್ರೀ ಎಂ.ಶ್ರೀನಿವಾಸ್:- ನಾವು ವಿರೋಧಪಕ್ಷದವರಿಗೆ ಹೇಳಿ ನೀರು ಬಿಟ್ಟಿದ್ದೇವೆಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ, ನಾವು ಒಪ್ಪಲಿಲ್ಲವಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬೊಮ್ಮಾಯಿಯವರು ಮಾಹಿತಿ ಕೊಟ್ಟಿರು ಅದಕ್ಕೆ ನಾನು ನೀರು ಬಿಟ್ಟೆ ಅಂತ ಮುಖ್ಯಮಂತ್ರಿಗಳು ಹೇಳುತ್ತಾರೆ, ಅದು ಬಂದಿರಬಹುದು, ಸುಪ್ರೀಂಕೋರ್ಟ್ ಮುಂದೆ ಅವರು ಪಿಟಿಶನ್ ಹಾಕಿದ್ದಾರೆ, ಅದಕ್ಕೇನು ಮಾಡಬೇಕು ಎಂದು ತಿಳಿದುಕೊಂಡು ಅವರು ಸಲಹೆ ಕೊಟ್ಟಿರಬಹುದು, ಇದಲ್ಲದೇ ಮದರಾಸಿನಿಂದಲೂ ಇವರಿಗೆ ಫೋನ್ ಬಂತು, ನಿಮಗೆ ದಿಲ್ಲಿಯಿಂದ ಬಂತು ಇಲ್ಲಾಂತ ಹೇಳಬೇಡಿ. ಇವರೂ ಸ್ವಲ್ಪ ಮಾತನಾಡಿದ್ದಾರೆ ಅದನ್ನು ಪೂರ್ತಿ ಇಲ್ಲಿ ನಾನು ಹೇಳುವುದಿಲ್ಲ.

ಶ್ರೀ ಎಚ್.ಎನ್.ನಂಜೇಗೌಡ:- ಇದೇನು ಹೋಗಿ ನನ್ನ ಬುಡಕ್ಕೆ ಕೈಹಾಕುತ್ತಿದ್ದೀರಲ್ಲ, ನಾನು ಏನು ಹೇಳುವುದಕ್ಕೆ ಹೊರಟೆ ಅಂದರೆ ಜೆ.ಎಚ್.ಪಟೇಲರಿಗೆ ಸದುದ್ದೇಶದ ಅಭಾವ ಇಲ್ಲ That is all what I wanted to tell. ಅದರಲ್ಲಿ ಎಡವುತ್ತಾರೆ, ಆಗಲೇ ಎಡವಿಬಿಟ್ಟಿರು, ಎಡವುದಿಲ್ಲ ಅಂತಲೂ ನಾನು ಹೇಳುವುದಿಲ್ಲ, ನಾವು ಒಂದು ತೊಟ್ಟು ನೀರು ಬಿಡುವುದಿಲ್ಲ ಅಂದರು, ಟ್ರಿಬ್ಯುನಲ್‌ನಲ್ಲಿ ಭಾಗವಹಿಸುತ್ತೇನೆ ಅಂದರು, ಉಪಮುಖ್ಯಮಂತ್ರಿಗಳು ನಾವು ಭಾಗವಹಿಸುವುದಿಲ್ಲ ಬಹಿಷ್ಕಾರ ಹಾಕುತ್ತೇವೆ ಅಂದರು, ಆ ಕಾಂಟ್ರವರ್ಸಿಗಳನ್ನು ನಾವು ಏತಕ್ಕೆ ತೆಗೆದುಕೊಳ್ಳೋಣ. ಅದು ಬೇಡ. ನಾವು

ಒಂದನ್ನು ತಮಿಳುನಾಡಿಗೆ ಅರ್ಥಮಾಡಿಸಬೇಕಾಗಿದೆ. ಕೇಂದ್ರಸರ್ಕಾರಕ್ಕೂ ಅರ್ಥಮಾಡಿಸಬೇಕಾಗುತ್ತದೆ, ನಮ್ಮ ರಾಜ್ಯಕ್ಕೆ ಮಾರಕವಾಗುವ ತೀರ್ಮಾನ ಯಾರೇ ಕೊಡಲಿ ನಾವು ಅನುಷ್ಠಾನಕ್ಕೆ ತರುವುದಿಲ್ಲ, ಏಕೆ ತರಬೇಕು, ಇಲ್ಲ ಎಂದರೆ ಪಾಲಿಸಿ ಗೈಡ್‌ಲೈನ್ಸ್ ಮಾಡಲಿ.

5.10 ಪಿ.ಎಂ.

ಆದರಿಂದ ನಮಗೆ ಅನುಕೂಲವಾಗುತ್ತದೆಯೋ ಅನಾನುಕೂಲವಾಗುತ್ತದೆಯೋ ಆ ಮಾತು ಬೇರೆ. ಅನುಕೂಲವಾದರೂ ಸಂತೋಷ ಅನಾನುಕೂಲವಾದರೂ ಸಂತೋಷ ಪಡಬೇಕಾಗುತ್ತದೆ. Because there will be set statutory guidelines. A statutory guidelines for sharing of inter-state waters should be formulated and you are a Member of the National Resources Commission. ನೀವೇ ಇನ್‌ಷಿಯೇಟೀವ್ ತೆಗೆದುಕೊಂಡು ಬೇಗ ಮಾಡತಕ್ಕಂತಹ ದಿಸೆಯಲ್ಲಿ ಪ್ರಯತ್ನ ಪಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದು ಆಗಲೇಬೇಕು. ಅಲ್ಲಿಯವರೆಗೆ ನಿಮ್ಮ ಸ್ಟ್ಯಾಂಡ್ ಏನು ಎಂದು ನನಗೆ ಅರ್ಥವಾಗಿಲ್ಲ. ಮಾನ್ಯ ಖರ್ಗೆಯವರೇ ಸರಕಾರದ ಸ್ಟ್ಯಾಂಡ್ ಏನೆಂದು ಅರ್ಥವಾಗಿದೆಯೇ? ಸರಕಾರದ ಸ್ಟ್ಯಾಂಡ್ ಏನು ಎಂದು ಎನ್ನುವುದಕ್ಕೆ ಇನ್ನೂ ನಮಗೆ ಕನ್‌ಫ್ಯೂಷನ್ನೇ. ಬಂಗಾರಪ್ಪನವರಿದ್ದಾಗ ಮಾತ್ರ ಕನ್‌ಫ್ಯೂಷನ್ ಇರಲಿಲ್ಲ. Let us be frank. ಅವರಿದ್ದಾಗ ಖಚಿತವಾಗಿತ್ತು ನಿಲುವು. ಮೊಯಿಲಿಯವರು ಬಂದಾಗ ಕನ್‌ಫ್ಯೂಷನ್ನೇ. ಸಾಧ್ಯವಾದರೆ ಅವರು ಈಗಲೂ ಕನ್‌ಫ್ಯೂಸ್ ಮಾಡುತ್ತಾರೆ. ಪ್ರಶ್ನೆ ಬೇರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮುಂದೆ ಹೋಗಿ ಅಂದರೆ ಹಿಂದೆ ಬರುತ್ತೀರಿ. ಈಗೇನು ತಪ್ಪು ಮಾಡಿದ್ದಾರೆ ಅದಕ್ಕೆ ಸಲ್ಯೂಷನ್ ಏನು ಇದೆ ಅದರ ಮೇಲೆ ಮಾತನಾಡುವುದು ಬಿಟ್ಟು ತಿರುಗಿ ಮುರುಗಿ ಹಿಂದೆ ಮುಂದೆ ಬರುತ್ತಾರೆ.

ಶ್ರೀ ಜೆ.ಹೆಚ್.ಪಟೇಲ್:- ಬಹಲ ಸೂಕ್ಷ್ಮವಾದ ಮಾತುಗಳನ್ನು ಮೊದಲು ಹೇಳಿದಿರಿ. ನಾವು ಒಂದು ರಾಷ್ಟ್ರದಲ್ಲಿ ಬದುಕಬೇಕು. ನೀರಿನ ಮೇಲು ಭಾಗದವರು ನೀರಿನ ಕೆಳಭಾಗದವರು ಇವರು ಹಠ ಮಾಡುವುದು ಬೇಡ ಅವರೂ ಹಠ ಮಾಡುವುದಕ್ಕಾಗುವುದಿಲ್ಲ. ಈ ಹಿಂದೆ ಜಯಲಲಿತಾ ಅವರ ಮುಖವನ್ನೂ ಬಂಗಾರಪ್ಪನವರು ನೋಡಿದರೋ ಬಿಟ್ಟರೋ, ಅಂತೂ ಆಗ ರಾಜ್ಯಗಳ ಮಧ್ಯೆ ಒಂದು ರೀತಿ ವಿರಸ ಇತ್ತು, ಬರೀ ಸರಕಾರಗಳ ಮಧ್ಯೆ ಅಲ್ಲ. ಈಗ ಆ ವಿರಸ ಆಗಿದ್ದಂತಹ ದೆಹಲಿಯ ರಾಜಕೀಯ ಪರಿಸ್ಥಿತಿ ಈಗ ಇಲ್ಲ. ಇದನ್ನು ನಾವೆಲ್ಲರೂ ಗಮನಿಸಬೇಕು. ಟ್ರಿಬ್ಯುನಲ್ ಅನ್ನು ಬಾಯ್‌ಕಾಟ್ ಮಾಡುತ್ತೇವೆಂದು ಯಾವಾಗಲೂ ಯಾರೂ ಹೇಳಿಲ್ಲ. ಟ್ರಿಬ್ಯುನಲ್‌ಗೆ ಹೋಗಬೇಕೆಂದು ವಕೀಲರ ಅಡ್ವೈಸ್. ಟ್ರಿಬ್ಯುನಲ್ ಬಾಯ್‌ಕಾಟ್ ಮಾಡಿದರೆ ಅಥವಾ ಇವತ್ತು ನಾವು ಹೋಗಿ ನಮ್ಮ ಎವಿಡೆನ್ಸ್ ಕೊಡದಿದ್ದರೆ,

ultimately it may be damage legally. ಒಂದು ಸಲ ಜಡ್ಜ್‌ಮೆಂಟ್ ಬಂದ ಮೇಲೆ ಮತ್ತೆ ರಿಪೇರಿ ಮಾಡುವುದಕ್ಕಾಗುವುದಿಲ್ಲವೆಂದು ಲೀಗಲ್ ಒಪೀನಿಯನ್ ಕೊಟ್ಟರು; ಅದು ನಿಮಗೂ ಗೊತ್ತಿದೆ. ಅದಕ್ಕೋಸ್ಕರ ನಾನು ಹೇಳಿದೆ. We may not boycot it. ಟ್ರಿಬ್ಯುನಲ್ ಬಾಯ್‌ಕಾಟ್ ಮಾಡುತ್ತೇನೆಂದು ಅಲ್ಲ. ಟ್ರಿಬ್ಯುನಲ್‌ಗೆ ಹೋಗಿ ನೀವು ಇಂತಿಂಥಾದ್ದು ಮಾಡುವುದಾದರೆ, ಮಾಡಿ ಮಾಡದಿದ್ದರೆ ನಮ್ಮ ದಾರಿ ಬೇರೆ ಎಂದು ಹೇಳುವುದಕ್ಕಾದರೂ ಹೋಗಬೇಕಲ್ಲ. ಆ ಕಾರಣದಿಂದ ಟ್ರಿಬ್ಯುನಲ್ ಬಾಯ್‌ಕಾಟ್ ಮಾಡುವುದಿಲ್ಲವೆಂದು ಹೇಳಿದೆ. In other words ಟ್ರಿಬ್ಯುನಲ್‌ನಲ್ಲಿ ನಮ್ಮ ಮುಂದಿನ ವ್ಯವಹಾರಗಳು ಮುಂದಿನ ಹೆಜ್ಜೆ ಮೇಲೆ ಹೋಗುತ್ತದೆ. ಅಡ್ಜರ್ನ್‌ಮೆಂಟ್ ಕೇಳಬೇಕು ಎಂದು ಮೊದಲು ಹೇಳಿದರು. ಅಡ್ಜರ್ನ್‌ಮೆಂಟ್ ಕೇಳುವುದಕ್ಕಾದರೂ ಹೋಗಬೇಕಲ್ಲ. ಅಡ್ಜರ್ನ್‌ಮೆಂಟ್ ಕೊಡಿ ಎಂದು ಟ್ರಿಬ್ಯುನಲ್‌ಗೆ ಯಾರಾದರೂ ಬರೆಯುವುದಕ್ಕಾಗುತ್ತದೆಯೇ? ಮೊನ್ನೆ ತಾವು ಹೇಳಿದಿರಿ. ಅದು ಎಗ್ಸಿಸ್‌ಟೆನ್ಸ್‌ನಲ್ಲಿ ಲೀಗಲೀ ಇಲ್ಲ, ಆದರೂ ನಾವು ಅರ್ಜಿ ಹಾಕಿದ್ದೆವು. ಹಾಕದೆ ಡಿಫಾಲ್ಟರ್ ಆಗಬಾರದು. ಅವರೇನು ಮಾಡುತ್ತಾರೆ ಬಿಡುತ್ತಾರೆ ಅದು ಬೇರೆ. ನಮ್ಮ ಅರ್ಜಿ ಅವನು ಸತ್ತಿದ್ದಾನೆಂದಾದರೂ ಸತ್ತಿದ್ದಾನೆಂದರೂ ಖಾಯಂ ಆಗುತ್ತದೆ. ಇಲ್ಲಿ ಸದನದಲ್ಲಿ ಒಂದು ಅತ್ಯಂತ ಒಳ್ಳೆಯ ಮಾತನ್ನು ಅಂದರೆ ನಾವ್ಯಾರೂ ಇದನ್ನು ರಾಜಕೀಯ ಲಾಭ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬಾರದು ಎಂದು ಹೇಳಿದಿರಿ. ಯಾವ ಪಾರ್ಟಿ ಎಂದು ಅಲ್ಲ. ರಾಜ್ಯದ ಹಿತ ಇದು. ಪ್ರತಿಯೊಬ್ಬ ಕಾವೇರಿ ರೈತ ಇಲ್ಲಿರುವವರಿಗೂ ತಮಿಳುನಾಡಿನಲ್ಲಿರುವವರಿಗೂ ಅದು ಆಯಿತು. ಅಷ್ಟು ವಿಶಾಲವಾಗಿ ನಾವು ಆಲೋಚನೆ ಮಾಡಿದಂತೆ ತಮಿಳುನಾಡಿನವರೂ ಆಲೋಚನೆ ಮಾಡಬೇಕು. ಮಾಡದಿದ್ದರೆ ಅಲ್ಲಿ ಹಾಗೆ ನಾನು ಆಲೋಚನೆ ಮಾಡಿದ ಕೂಡಲೇ ನನಗೇನೋ ಸಂಚಕಾರ ಬರುತ್ತದೆಂದು ನಾನು ಮಾಡಿಯೇ ಮಾಡುತ್ತೇನೆ, ನಾನು ನಂಜೇಗೌಡರ ತಲೆ ತೆಗೆಯುತ್ತೇನೆಂದು ಆತ ಹೇಳಿದರೆ ಆತನ ಕೈಯ್ಯಲ್ಲೂ ಆಗುವುದಿಲ್ಲ. ಇಲ್ಲವೇ ಇಲ್ಲಿ ನಾನು ಬೇಕಾದ್ದು ಆಗಲಿ ಹೆಣ ಬಿದ್ದು ಹೋಗಲಿ, ಜನ ಲೂಟಿಯಾದರೂ ಚಿಂತೆ ಇಲ್ಲ ನಾನು ಸರಕಾರ ನಡೆಸೇ ನಡೆಸುತ್ತೇನೆ ತಮಿಳುನಾಡಿನವರನ್ನು ನೋಡಿಕೊಂಡೇ ಬಿಡುತ್ತೇನೆಂದು ತೋಳು ಮುದುರಿದರೆ ಅದು ಶೌರ್ಯ ಅಲ್ಲ. ಸಮಸ್ಯೆಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡು ಇವತ್ತಿನ ಬದಲಾದ ಪರಿಸ್ಥಿತಿಯಲ್ಲಿ ದೆಹಲಿಯಲ್ಲಿ ನಮ್ಮ ಪ್ರಧಾನಿಯಿರುವಾಗ 4 ರಾಜ್ಯಗಳೂ ಒಮ್ಮತದಿಂದ ಅವರನ್ನು ಬೆಂಬಲಿಸಿರುವಾಗ ಈಗ ಅದನ್ನು ಬಗೆಹರಿಸಿಕೊಳ್ಳುವುದಕ್ಕೆ ಒಂದು ಇತಿಹಾಸದಲ್ಲಿ ಅವಕಾಶ ಇದೆ ಎನ್ನುವುದು ಮಾತ್ರ ನನ್ನ ತಲೆಯಲ್ಲಿ ಇತ್ತೇ ಹೊರತು ಬೇರೇನೂ ಇಲ್ಲ. ಮಾನ್ಯ ಮೊಯಿಲಿಯವರದ್ದು ಒಂದು ಪಾಯಿಂಟ್ ಅವರದ್ದು ಡಿಬೇಟಿಗೆ ಒಂದು ಪಾಯಿಂಟ್. But he never won the battle. ನಾನು ಹಾಗೆ ಹೇಳಿರಲಿಲ್ಲ ಶನಿವಾರ ಮಧ್ಯಾಹ್ನ ಹೀಗೆ ಹೇಳಿದ್ದೆ ಭಾನುವಾರ ಬೆಳಿಗ್ಗೆ ಹಾಗೆ ಹೇಳಿದ್ದೆ. ಅದು ಅಲ್ಲ. I entirely agree with you, we all of us, the whole House ನಾವು ಒಂದು ಸಾರಿ ಸದನದಲ್ಲಿ ಹೇಳಿದ್ದೆವು ಸಂಪೂರ್ಣ ಬಾಯ್‌ಕಾಟ್ ಮಾಡಬೇಕೆಂದು

ವಿಧಾನಪರಿಷತ್ತಿನಲ್ಲಿ ಹೇಳಿದ್ದೆವು. ಆ ಸಮಯದಲ್ಲಿ ಆಗಿದ್ದ ಅಸೆಂಬ್ಲಿ ಆಗಿದ್ದ ಕೌನ್ಸಿಲ್‌ಗಳ ಸ್ಥಿತಿ ಆಗ ತೀರ್ಮಾನ ತೆಗೆದುಕೊಂಡಿದ್ದುದು ಯುಕ್ತವಾಗಿತ್ತು, ಸಕಾಲಿಕವಾಗಿತ್ತು. ಈಗ ಮತ್ತೆ ಸದನ ಈಗಿರತಕ್ಕಂತಹ ಸ್ಥಿತಿ ನಾವು ಪಾರ್ಟಿಯನ್ನು ತೆಗೆದುಕೊಳ್ಳುವುದು ಬೇಡ. ನಿಮ್ಮ ಖುರ್ಚಿಯನ್ನು ಗಟ್ಟಿ ಮಾಡಿಕೊಳ್ಳುವುದಕ್ಕೆ ಈ ರೀತಿ ಮಾತನಾಡಿದರೆ it looses the sanctity of the discussion itself. I really appreciate your stand. ಅದೇ ರೀತಿ ಸದನದಲ್ಲಿ ಆ ನಿಲುವು ತೆಗೆದುಕೊಂಡರೆ ನಾವು ಇಲ್ಲಿ ಚರ್ಚೆ ಮಾಡಿಕೊಂಡೇ ಹೇಳಿಬಿಡಬಹುದು ಏನು ಮಾಡುತ್ತೇವೆ, ಏನು ಬಿಡುತ್ತೇವೆಂದು ಇಲ್ಲಿಯೇ ಹೇಳಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಟ್ರಿಬ್ಯುನಲ್ ಅನ್ನು ಬಾಯ್‌ಕಾಟ್ ಮಾಡುವುದಿಲ್ಲವೆಂದು ನಾವು ಎಂದೂ ಕೂಡ ನಿಲುವು ತೆಗೆದುಕೊಂಡಿಲ್ಲವೆಂದು ಹೇಳಿದಿರಿ. ಮಾನ್ಯ ನಂಜೇಗೌಡರು ಈಗಾಗಲೇ 26ನೇ ಜುಲೈನಲ್ಲಿ ಈ ಸದನದಲ್ಲಿ ಆದಂತಹ ರೆಸಲ್ಯೂಷನ್ ಅನ್ನು ಇಲ್ಲಿ ಓದಿದರು. ಏನು ಇದೆ ಅದರಲ್ಲಿ ನಾವು ಟ್ರಿಬ್ಯುನಲ್‌ನಲ್ಲಿ ಪಾರ್ಟಿಸಿಪೇಟ್ ಮಾಡುವುದಿಲ್ಲವೆಂದು ಸ್ಪಷ್ಟವಾಗಿದೆ. ಅಲ್ಲಿಯವರೆಗೆ ಪಾರ್ಟಿಸಿಪೇಟ್ ಮಾಡವುದಿಲ್ಲ ಅಂದರೆ ಏನು ಅರ್ಥ It is as good as boycotting. ಪಾರ್ಟಿಸಿಪೇಟ್ ಎಂದರೆ ನಾವು ಯಾವುದೇ ಪ್ರೋಸೀಡಿಂಗ್ಸ್‌ನಲ್ಲಿ ಭಾಗಿಗಳಾಗುವುದಿಲ್ಲವೆಂದು ಹೌಸ್‌ನಲ್ಲಿ ರೆಸಲ್ಯೂಷನ್ ಪಾಸ್ ಮಾಡಿದಿರಿ.

ಶ್ರೀ ಎಂ.ಪಿ.ಪ್ರಕಾಶ್:- ಅವರಲ್ಲಿ ಶಬ್ದ ಇರತಕ್ಕಂಥಾದ್ದು ನಡವಳಿಕೆಗಳನ್ನು ಸ್ಥಗಿತಗೊಳಿಸಬೇಕೆಂದು ಈ ಸಭೆಯು ಭಿನ್ನವಿಸುತ್ತದೆ, ತೀರ್ಮಾನಿಸುತ್ತದೆಂದು ಹೇಳಿದೆ. ಬಹಿಷ್ಕಾರ ಮಾಡುತ್ತೇವೆಂದು ಅಲ್ಲ. ಈ ರೆಸಲ್ಯೂಷನ್ ಅನ್ನು ನಾನೇ ಡ್ರಾಫ್ಟ್ ಮಾಡಿ ತಮಗೂ ತೋರಿಸಿದ್ದೇನೆ.

ಶ್ರೀ ಹೆಚ್.ಎನ್.ನಂಜೇಗೌಡ:- ಎಲ್ಲಾ ವಿವಾದಗಳ ಇತ್ಯರ್ಥಗಳನ್ನು ಸ್ಥಗಿತಗೊಳಿಸಬೇಕೆಂದು ತೆಗೆದುಕೊಂಡ ನಿರ್ಣಯಕ್ಕೆ ಈ ಸದನವು ಬದ್ಧವಾಗಿದೆ. ಹೆಚ್ಚಿಗೆ ನಾನು ಮಾತನಾಡುವುದಿಲ್ಲ, ಇದು ತುಂಬ ಸೂಕ್ಷ್ಮವಾದ ವಿಚಾರ. ನಮ್ಮ ಸ್ನೇಹಿತರು ಇದನ್ನು ವೋಟಿಗೆ ಹಾಕೋಣವೆಂದು ಹೇಳಿದರು, ವೋಟಿಗೆ ಹಾಕಿ ತೀರ್ಮಾನ ಮಾಡುವಂತಹ ವಿಷಯ ಇದಲ್ಲ. ಏನೇ ತೀರ್ಮಾನ ಆ ಕಡೆಯದ್ದು ಈ ಕಡೆಯದ್ದು ಇರಲಿ ರಾಜ್ಯದ ಸಮಸ್ಯೆ ನಾವು ಒಗ್ಗಟ್ಟಾಗಿಯೇ ಇರಬೇಕು. ಇದು 28-12-95 ಪ್ರಧಾನಮಂತ್ರಿಯವರು ರಾಷ್ಟ್ರೀಯ ಜಲ ನೀತಿ ಮಾರ್ಗಸೂಚಿ ಪ್ರಕಟಿಸುವುದಕ್ಕಾಗಿ ಫೆಬ್ರವರಿ ಮೊದಲ ವಾರದಲ್ಲಿ ಸಭೆ ಕರೆಯುವುದಾಗಿ ದಿನಾಂಕ 1-1-96ರ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿರುವುದರಿಂದ, ರಾಷ್ಟ್ರೀಯ ಜಲನೀತಿಯ ಮಾರ್ಗಸೂಚಿ ಪ್ರಕಟಿಸುವವರೆಗೆ ಕರ್ನಾಟಕವು ಕಾವೇರಿ ನ್ಯಾಯಾಧೀಕರಣದ ಮುಂದೆ ಭಾಗವಹಿಸಬಾರದಾಗಿ ತೀರ್ಮಾನಿಸಿದೆ. ಅಸೆಂಬ್ಲಿಯದ್ದು ಅಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸರಕಾರದ ನಿಲುವು ಇಲ್ಲವೆನ್ನುವುದನ್ನು

ಹೇಳಬೇಡಿ. ಎಲ್ಲಾ ಪಾರ್ಟಿಯದ್ದು ಇಲ್ಲವೆಂದು ಹೇಳಬೇಡಿ. ಮಾಡಿದ್ದನ್ನು ಹೇಳಿ. ಇದಕ್ಕೂ ನಾವು ಎಲ್ಲರೂ ಬದ್ಧರಿದ್ದೇವಲ್ಲ. ಈ ರೆಸಲ್ಯೂಷನ್ ಏನು ಇದೆ ಇದಕ್ಕೂ ನಾವೆಲ್ಲರೂ ಬದ್ಧರಿದ್ದು ಒಪ್ಪಿಕೊಂಡಿದ್ದೇವಲ್ಲ. ಅಂದಾಗ ನೀವು ಇಲ್ಲವೆಂದು ಹೇಗೆ ಹೇಳುತ್ತೀರಿ?

ಶ್ರೀ ಎಂ.ಪಿ.ಪ್ರಕಾಶ್:- ಎಲ್ಲಾ ರಾಜಕೀಯ ಪಕ್ಷಗಳ ನಿರ್ಣಯ ತೆಗೆದುಕೊಂಡ ಮೇಲೆ ಇದೊಂದು ವಿವೇಕದ ಕ್ರಮ ಆಗುವುದಿಲ್ಲವೆಂದು ಸದನದ ನಿರ್ಣಯ ಆಗುವಂತಹ ಸಂದರ್ಭದಲ್ಲಿ ಪ್ರತ್ಯೇಕವಾದ ತೀರ್ಮಾನ ತೆಗೆದುಕೊಂಡೆವು. ಆ ಗೊತ್ತುವಳಿಯನ್ನು ಬರೆದದ್ದು ಕೂಡ ಆ ಉದ್ದೇಶಕ್ಕಾಗಿಯೇ.

ಶ್ರೀ ಹೆಚ್.ಎನ್.ನಂಜೇಗೌಡ:- ಹೇಗಿದ್ದರೂ ಅಧ್ಯಕ್ಷರು ರಾಜೀನಾಮೆ ಕೊಟ್ಟಿದ್ದಾರೆ ಈಗ ಟ್ರಿಬ್ಯುನಲ್ ಕೆಲಸ ಮಾಡುತ್ತಿಲ್ಲ. ಒಟ್ಟಿನಲ್ಲಿ ಒಂದನ್ನು ಮನವರಿಕೆ ಮಾಡಿಕೊಳ್ಳಬೇಕು. ಸುಪ್ರೀಂ ಕೋರ್ಟಿನದ್ದನ್ನು ನಾನಿಲ್ಲಿ ಓದಿದ್ದೆ, ನೀವು ಬಂದಿರಲಿಲ್ಲ. ಕೇರಳ, ಕರ್ನಾಟಕ, ತಮಿಳುನಾಡು, ಪಾಂಡಿಚೆರಿ ಎಲ್ಲ ಒಂದೇ ಭಾಷೆ ಮಾತನಾಡಿಕೊಂಡು ಒಂದೇ ಆಡಳಿತದಲ್ಲಿದ್ದರೆ ನಾವು ಯಾವ ರೀತಿ ಬಗೆಹರಿಸಿಕೊಳ್ಳುತ್ತಿದ್ದೆವು, ಒಂದೇ ಭಾಷೆ ಒಂದೇ ಆಡಳಿತ ಜನ ಇದ್ದಿದ್ದರೆ ಏನು ಮಾಡುತ್ತಿದ್ದೆವು ಎಂಬ ಸ್ಪಿರಿಟ್ ಇಟ್ಟುಕೊಂಡು ನಾವು ಇದನ್ನು ಬಗೆಹರಿಸಿಕೊಳ್ಳುವುದಕ್ಕೆ ಪ್ರಯತ್ನ ಪಡಬೇಕು. ಇನ್ನು ಮೇಲೆ ತಮಿಳುನಾಡು ಆಗಲೀ ಇನ್ನು ಯಾರಾದರೂ ಆಗಲೀ ಇಂತಹ ಕಾರ್ಯಕ್ಕೆ ಅಡ್ಡ ಬಂದರೆ, ಅವರು ರಾಷ್ಟ್ರದಲ್ಲಿ ಸಣ್ಣವರಾಗುತ್ತಾರೆ. ಇದನ್ನು ನಾವು ಗಮನದಲ್ಲಿಟ್ಟುಕೊಂಡು, ತಕ್ಷಣದಲ್ಲೇ ಎರಡು ಕಾರ್ಯವನ್ನು ತಾವು ಮಾಡಬೇಕು. ಒಂದು, ಇದು ನೆಗೋಷಿಯೇಟ್ ಸೆಟ್ಲ್‌ಮೆಂಟ್‌ಗೆ ಒಂದು ಕಡೆ ಪ್ರಯತ್ನ ಪಡಬೇಕು. ಇನ್ನೊಂದು ಕಡೆ ರಾಷ್ಟ್ರೀಯ ಜಲನೀತಿ ಆಗಲೇಬೇಕು. ಇವತ್ತಲ್ಲ, ನಾಳೆಯಲ್ಲ, ನಾಡಿದ್ದು ಅಲ್ಲ, ಅದು ಬೇಕೆ ಆಗುತ್ತದೆ. ತಾವು ಈ ಎರಡು ಕಾರ್ಯಕ್ಕೆ ಮುಂದಾಗಬೇಕೆಂದು ಹೇಳಿ ವಿನಂತಿಸಿಕೊಂಡು, ಇನ್ನು ಒಂದು ಸ್ವಲ್ಪ ದಿವಸ ಖರ್ಗೆಯವರೇ ಕಾಯೋಣ. ಅವರನ್ನು ತರಾಟೆಗೆ ತೆಗೆದುಕೊಳ್ಳುವುದಕ್ಕೆ ಮುಂಚೆ ಟೈಮ್ ಕೊಡೋಣವಂತೆ. ಅವರು ಇನ್ನು ಮೊನ್ನೆಮೊನ್ನೆ ಚೀಫ್ ಮಿನಿಸ್ಟರ್ ಆಗಿದ್ದಾರೆ. ಅಷ್ಟು ಮಾಡಬಹುದಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬದಲಾವಣೆಗಳು ಆಗುತ್ತಲೇ ಹೋಗುತ್ತವೆ. ಐದು ವರ್ಷ ಹೀಗೆ ಮುಗಿದರೆ ನಮ್ಮ ಗತಿಯೇನು? ಅವರು ಒಂದೂವರೆ ವರ್ಷ, ಮತ್ತೆ ಇವರು ಎರಡು ವರ್ಷ, ಮತ್ತೆ ಇನ್ನೊಬ್ಬರು ಸ್ವಲ್ಪ ದಿವಸ, ಏನು ಮಾಡುವುದೋ ಮಾಡಬೇಕು.

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ಇನ್ನು ಹೆಚ್ಚಿಗೆ ಮಾತನಾಡದೇ ಅನೇಕ ವಿಚಾರಗಳಿದ್ದವು. ನಾನು ಹೇಳುತ್ತೇನೆ, ಅಂಕಿಅಂಶಗಳು ಮತ್ತೊಂದು ಮಗದೊಂದು....

ಅಧ್ಯಕ್ಷರು:- ಈಗ ಅವರದ್ದೆಲ್ಲಾ ಹೇಳಿದ ಹಾಗೆ ಆಯಿತು.

ಶ್ರೀ ಹೆಚ್.ಎನ್.ನಂಜೇಗೌಡ:- ಅವೆಲ್ಲಾ ಪ್ರಸ್ತಾಪ ಮಾಡದೆಯೇ ಏಕೆಂದರೆ ಕೆಲವಾರು ವಿಚಾರಗಳು ನಾವು ಪ್ರಸ್ತಾಪ ಮಾಡುವ ಹಾಗೂ ಇಲ್ಲ. ಅದರ ಇತಿಮಿತಿಯನ್ನು ಅರಿತುಕೊಂಡು, ಇಷ್ಟೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೂ ಕೂಡ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಖರ್ಗೆಯವರೇ, ಈಗ 5 ಗಂಟೆ 20 ನಿಮಿಷ ಆಗಿದೆ. ನಾವು 8ನೇ ತಾರೀಖಿನಿಂದ ಡಿಮ್ಯಾಂಡ್ಸ್ ತೆಗೆದುಕೊಳ್ಳಬೇಕಾಗಿತ್ತು. ಇವತ್ತು 11ನೇ ತಾರೀಖು. ನಾವು ಇನ್ನು ಡಿಮ್ಯಾಂಡ್ಸ್‌ನ್ನು ತೆಗೆದುಕೊಂಡಿಲ್ಲ. ಹೇಗೆ ಮಾಡೋಣ? ಇನ್ನು ಹೆಸರುಗಳು ಬಹಳ ಇದ್ದಾವೆ ಎರಡೂ ಪಾರ್ಟಿಯಿಂದ ಕೊಟ್ಟಿರುವ ಹೆಸರುಗಳು ಬಹಳ ಇವೆ. ಇವತ್ತೆಲ್ಲ ಇದೇ ಚರ್ಚೆ ಮಾಡೋಣ ಎಂದರೆ....

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಜನರಿದ್ದಾರೆ, ಒಂದು ಐದೈದು ನಿಮಿಷ, ಹತ್ತು ಮಾತನಾಡುತ್ತಾರೆ. ಅವರಿಗೆ ಅವಕಾಶಮಾಡಿಕೊಡಿ ಬೇಕಾದರೆ ನಾಳೆ ಮುಂಜಾನೆ ರಿಪ್ಲೈ ಮಾಡಲಿ. ಹತ್ತು ಗಂಟೆಗೆ ಸೇರೋಣ ಬೇಕಾದರೆ ರಿಪ್ಲೈ ಆಗಲಿ.

ಅಧ್ಯಕ್ಷರು:- ನಾಳೆ ಮತ್ತೆ ನಾವು ಬಿಎಸಿ ಸೇರಬೇಕಾಗುತ್ತದೆ. ಬಿಸಿನಸ್ ಅಡ್ವೈಸರಿ ಕಮಿಟಿ ನಾಳೆ ಸೇರಿ ಸ್ವಲ್ಪ ರಿವೈಸ್ ಮಾಡಬೇಕಾಗುತ್ತದೆ. ಈಗ 3-4 ದಿನಗಳು ಕಳೆದುಹೋಗಿವೆ. ಡಿಮ್ಯಾಂಡ್ಸ್‌ನ್ನು ಚರ್ಚೆಗೇ ತೆಗೆದುಕೊಂಡಿಲ್ಲ. ಮೂವ್ ಮಾಡಿದ್ದಾರೆ.

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇನ್ನು ಟೈಮ್ ಇದೆ. ಆರು ತಿಂಗಳಿಗೆ ತೆಗೆದುಕೊಂಡಿದ್ದಾರೆ. ಮೂರು ತಿಂಗಳಿಗೇನು ತೆಗೆದುಕೊಂಡಿಲ್ಲ. ನಾಲ್ಕು ತಿಂಗಳಿಗೆ ತೆಗೆದುಕೊಂಡಿಲ್ಲ. ಒಮ್ಮೆಗೇ ಆರು ತಿಂಗಳಿಗೇ ತೆಗೆದುಕೊಂಡಿದ್ದಾರೆ. ಎಂಡ್ ಆಫ್ ಸೆಪ್ಟೆಂಬರ್‌ವರೆಗೆ ಟೈಮ್ ಇದೆ.

MR.SPEAKER:- What the Hon.Law Minister has to say, it is your responsibility.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೇ, ಈಗ ಅವರು ನಿಯಮ 159ರ ಅಡಿಯಲ್ಲಿ ಕೊಟ್ಟಿರತಕ್ಕಂಥ ಒಂದು ಮೋಷನ್ ಇದು. ಇಲ್ಲಿ ಚರ್ಚೆ ಮಾಡುತ್ತಿರತಕ್ಕಂಥದ್ದು ಈ ಮೋಷನನ್ನು either in part of whole ಅಡ್ಮಿಟ್ ಮಾಡಬೇಕೇ ಅಥವ ಬೇಡವೇ ಎಂದು ಹೇಳುವ ಸಂದರ್ಭದಲ್ಲಿ ಇಷ್ಟೆಲ್ಲಾ ಚರ್ಚೆಗಳು ನಡೆದಿವೆ. ಆದ್ದರಿಂದ ಈ ಚರ್ಚೆಯನ್ನು ನಾವು ನೋಡಿದಾಗ ಒಟ್ಟಾರೆ ಒಂದು ಕಡೆ ಈ ಚರ್ಚೆಯಲ್ಲಿ ಈ ಕಾವೇರಿ ವಿವಾದಕ್ಕೆ ಸಂಬಂಧಪಟ್ಟಿರುವ ವಿಚಾರ ಸುಪ್ರೀಂಕೋರ್ಟಿನ ಮುಂದೆಯೂ ಇದೆ. ಟ್ರಿಬ್ಯುನಲ್‌ನ ಮುಂದೆಯೂ ಇದೆ. ನಮ್ಮ ಇಡೀ ವಿಚಾರದಲ್ಲಿ ಒಂದು ವಿಚಾರಧಾರೆ ಏನು ಬಂತು ಎಂದು ಹೇಳಿದರೆ, ಬಹಶಃ ಮಾತುಕತೆಯಿಂದ ಸೌಹಾರ್ದಯುತವಾಗಿ ಇವತ್ತು ಈ

ಒಂದು ವಿವಾದವನ್ನು ಬಗೆಹರಿಸಬೇಕು ಎನ್ನುವ ಚಿಂತನೆಯನ್ನು ಎಲ್ಲರೂ ಒಪ್ಪುತ್ತಾರೆ, ಇದು ಆಗಲೇಬೇಕು. ಕಾರಣ ನಾವು ಯಾವ ಒಂದು ಠರಾವನ್ನು ಈ ಸದನದ ಮುಖಾಂತರ ಮಾಡಿದ್ದೆವು, ಅದರಲ್ಲೂ ಕೂಡ ಈ ಒಂದು ವಿವಾದವನ್ನು ನಾವು ಮಾತುಕತೆಯ ಮುಖಾಂತರ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬೇಕು ಎಂದು ಹೇಳಿ ಈ ಸದನ ಅಭಿಪ್ರಾಯಪಡುತ್ತದೆ ಎಂದು ಕೂಡ ನಾವು ಹೇಳಿದ್ದೇವೆ. ಇಲ್ಲಾ ಎಂದು ಹೇಳುವುದಿಲ್ಲ. ಅದಕ್ಕೆ ಒತ್ತು ಕೊಡುತ್ತಿರುವಂಥ ಹಿನ್ನೆಲೆಯಲ್ಲಿ ಇವತ್ತು ನಾವು ಈ ಮೋಷನ್ ಯಾವುದು ಇದೆ, ಈ ಮೋಷನ್‌ನಲ್ಲಿ ನಾವು ಇವತ್ತು ಮಾತನಾಡುವಂಥ ಹಿನ್ನೆಲೆ ಬಂದಾಗ, ಸುಪ್ರೀಂಕೋರ್ಟಿನ ಮುಂದೆ ಇದೆ. ಮತ್ತೊಂದು ಟ್ರಿಬ್ಯೂನಲ್ ಕಾನ್‌ಸ್ಟಿಟ್ಯೂಟ್ ಆಗಿದೆ. ಟ್ರಿಬ್ಯೂನಲ್‌ನಲ್ಲಿರುವಂಥ ಛೇರ್ಮನ್‌ರವರು ರಾಜೀನಾಮೆ ಕೊಟ್ಟಾಕ್ಷಣ Tribunal does not cease to funtion. Of course it ceases to function till such time the Chairman is appointed. But the Tribunal itself is not wound up. Tribunal is in existence. It can function only after Chief Justice appoints another Chairman. ಆದ್ದರಿಂದ ಮಾನ್ಯ ಮೊಯಿಲಿಯವರು ಒಂದು ಮಾತನ್ನು ಆಡುತ್ತಿರುವಂಥ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಿದರು, ಏನೆಂದರೆ ಅಲ್ಲಿ ಛೇರ್ಮನ್‌ರವರು ರಾಜೀನಾಮೆಯನ್ನು ಕೊಟ್ಟಮೇಲೆ it is a natural death ಎನ್ನುವಂಥ ವಾದವನ್ನು ಹೇಳಿದರು. It does not die a natural death at all legally. But it ceases to function as at the moment. But the Tribunal is not wound up. The Tribunal is there. ಆದ್ದರಿಂದ ಇಂಥ ಒಂದು ಸಿಚುಯೇಷನ್‌ನಲ್ಲಿ ಅವರು ಏತಕ್ಕೋಸ್ಕರ ಈ ಒಂದು ಅರ್ಜಿಯನ್ನು ಸಲ್ಲಿಸುವುದಕ್ಕೆ ಹೋದಿರಿ ಎನ್ನುವಂಥ ಮಾತನ್ನು ಶ್ರೀಮಾನ್ ಮೊಯಿಲಿಯವರು ಹೇಳಿದರು. ಸುಪ್ರೀಂ ಕೋರ್ಟಿನ ಮುಂದೆ 15 ಟಿಎಂಸಿ ನೀರನ್ನು ಬೇಕು ಎಂದು ಈ ಅಡ್ಮಿಸಿಬಿಲಿಟಿಗೆ ಸಂಬಂಧಪಟ್ಟಹಾಗೆ ನಾನು ಹೇಳುತ್ತಿದ್ದೇನೆ. ನಾವು ಏತಕ್ಕೆ ಅದನ್ನು ಕೊಟ್ಟೆವು ಎಂದರೆ, ಸುಪ್ರೀಂಕೋರ್ಟಿನ ಮುಂದೆ ಈ 15 ಟಿಎಂಸಿ ನೀರನ್ನು ಬಿಡಲಿಕ್ಕೆ ಇರುವ ಅರ್ಜಿಯನ್ನು ತಮಿಳುನಾಡಿನವರು ಕೊಟ್ಟಾದ ಮೇಲೆ, ಅದಕ್ಕೆ ಜ್ಯೂರಿಸ್‌ಡಿಕ್ಷನ್ ಪಾಯಿಂಟ್ ತೆಗೆದುಕೊಂಡಾಗ, ಟ್ರಿಬ್ಯುನಲ್‌ಗೆ ಹೋಗಿ ಎಂದು ಹೇಳುವ ಸಂದರ್ಭ ಬಂದಾಗ ನಾವು ಅದನ್ನು ಅಲ್ಲಿಗೆ ಇಟ್ಟುಕೊಂಡಿದ್ದೇವೆ. ಆದ್ದರಿಂದ ನಿಮ್ಮನ್ನು ನಾನು ಈ ಸಂದರ್ಭದಲ್ಲಿ ವಿನಂತಿಸುತ್ತಿರುವುದು ಇವರು ತಂದಿರುವ ಮೋಷನ್ ಯಾವುದು ಇದೆ, ಇದು 159ರ ನಿಯಮದ ಅಡಿಯಲ್ಲಿ ಅಡ್ಮಿಸಿಬಿಲಿಟಿ ಬಗ್ಗೆ ಬಂದಿರತಕ್ಕಂಥದ್ದರಲ್ಲಿ "Inorder that a motion may be admissible, it shall specify the following conditions viz. ಎಂದು ಹೇಳಿ ಕಡೆಗೆ ಅದರಲ್ಲಿ it shall not be related to any matter....

SRI M.MALLIKARJUNA KHARGE:- Our purpose is very limited ನಾವು ಸರ್ಕಾರದ ವಿರುದ್ಧ ತಂದಿದ್ದು ನಿಯಮ 159ರಲ್ಲಿ 5 ಟಿಎಂಸಿ ನೀರನ್ನು ತಾವು ಬಿಟ್ಟಿದ್ದಕ್ಕೆ ಈ ಸದನ ಒಪ್ಪುವುದಿಲ್ಲ ಎನ್ನತಕ್ಕಂಥ ನಿರ್ಣಯವನ್ನು ತಂದಿದ್ದೇವೆ. ಅದರಮೇಲೆ ಚರ್ಚೆಯಾಗಲಿ ಮತದಾನಕ್ಕೆ ಬೀಳಲಿ. ಯಾರು ಇದರ ಪರ ಇದ್ದಾರೆ, ನೀರು ಬಿಟ್ಟಿದ್ದು ಸರಿ ಎಂದು ಹೇಳುವ ಯಾರು ಸದಸ್ಯರು ಇದ್ದಾರೋ, ಬಿಟ್ಟಿದ್ದು ಸರಿ ಇಲ್ಲ ಎಂದು ಹೇಳುವ ಯಾರು ಸದಸ್ಯರು ಇದ್ದಾರೋ ಇದರ ಬಗ್ಗೆ ಮಾತನಾಡಲಿ. ಸುಪ್ರೀಂ ಕೋರ್ಟಿನ ಮುಂದೆ ಇದ್ದದ್ದು, ಟ್ರಿಬ್ಯುನಲ್ ಮುಂದೆ ಇರುವುದು ಈ ರೀತಿ ಬೇರೆ ವಿಚಾರ ಮಾಡದೆ ಮೆರಿಟ್, ಡೀಮೆರಿಟ್ ಪ್ರಶ್ನೆಯೇ ಇಲ್ಲ.

ಶ್ರೀ ಎಂ.ಸಿ.ನಾಣಯ್ಯ:- ಐದು ಟಿಎಂಸಿ ನೀರನ್ನು ಯಾವ ಆಧಾರದ ಮೇಲೆ ಬಿಟ್ಟಿರುವುದು.

ಅಧ್ಯಕ್ಷರು:- ಅದು ಇರಲಿ. That is a different thing. ನಾನು ತಮ್ಮ ಸಹಾಯ ಕೇಳಿದ್ದುದು by now we have spent 6 hours 15 minutes.

ಶ್ರೀ ಎಂ.ಸಿ.ನಾಣಯ್ಯ:- ಫರ್ದರ್ ಪ್ರಿಲಿಮಿನರಿ ಸಬ್‌ಮಿಷನ್ ಇನ್ನು ಕಂಟಿನ್ಯೂ ಆಗಬೇಕೇ ಬೇಡವೇ ಎನ್ನುವ ಬಗ್ಗೆ....

MR.SPEAKER:- When there is a pending list of 11 hon.members' names before me, as submitted by the Hon.Leader of the Congress Legislature Party or official leader of the opposition, they have to speak minimum for ten minutes and it would take another 50 minutes.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಐದು ನಿಮಿಷ, ಹತ್ತು ನಿಮಿಷಕ್ಕಿಂತ ಜಾಸ್ತಿ ಇಲ್ಲ. ಅದರೊಳಗೇ ಮಾತನಾಡುತ್ತಾರೆ.

ಅಧ್ಯಕ್ಷರು:- ನಾನು ಏನು ಹೇಳುತ್ತಿದ್ದೇನೆ ಎಂದರೆ ಎಷ್ಟೊತ್ತಾದರೂ ಮಾತನಾಡಿ. ನಾನು ಕಡಿವಾಣ ಹಾಕುವುದಿಲ್ಲ. ಈಗ ಆರು ಗಂಟೆ 15 ನಿಮಿಷಗಳ ಕಾಲ ಈ ಸದನದಲ್ಲಿ ಇದನ್ನು ಚರ್ಚೆ ಮಾಡಿದ್ದೇವೆ. ತಮ್ಮ ಕಡೆಯಿಂದ ಇನ್ನು ಏಳು ಹೆಸರು ಕೊಟ್ಟಿದ್ದೀರಿ. ಬಿಜೆಪಿ ಕಡೆಯಿಂದ ಇನ್ನು ನಾಲ್ಕು ಹೆಸರುಗಳು ಇವೆ. 7+4=11 ಜನ ಮಾತನಾಡುವುದಾದರೆ ಕನಿಷ್ಟ ಇನ್ನು ಒಂದು ಗಂಟೆ ಕಾಲ ಆಗುತ್ತದೆ; ಏಳು ಕಾಲು ಗಂಟೆ ಕಾಲ ಆಗುತ್ತದೆ. ಇದಕ್ಕೆ ಬಿಸಿನೆಸ್ ಅಡ್ವೈಸರಿ ಕಮಿಟಿ ನಾಳೆಯಾದರೂ ನಾವು ಸೇರಬೇಕಾಗುತ್ತದೆ. 8ನೇ ತಾರೀಖು ಬೇಡಿಕೆಗಳನ್ನು ಪ್ರಸ್ತಾಪ ಮಾಡಿ 8, 9, 10, 11ನೇ ತಾರೀಖಿಗೆ ಬಂದಿದ್ದೇವೆ. ನಾವು ಇನ್ನೂ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಅವರು ಹೇಳುತ್ತಾರೆ, ಇನ್ನು ಆರು ತಿಂಗಳುಗಳ ಕಾಲ ಅವಕಾಶವನ್ನು ತೆಗೆದುಕೊಂಡಿದ್ದಾರೆ. ಸಪ್ಟೆಂಬರ್‌ವರೆಗೂ ಅವಧಿ ಇದೆ. ಯಾವಾಗಲಾದರೂ

ಮಾಡಬಹುದು ಎಂದು ಹೇಳಿ ಹೇಳಿದರು. ಬಿಎಸಿಯಲ್ಲಿ ನಾವು ತೀರ್ಮಾನ ಮಾಡಿದಹಾಗೆ ಹೋಗುವುದಕ್ಕಾಗುತ್ತಿಲ್ಲ. ಆದರಿಂದ ಸಂಸದೀಯ ವ್ಯವಹಾರಗಳ ಸಚಿವರು....

ಶ್ರೀ ಎಂ.ಸಿ.ನಾಣಯ್ಯ:- ಇದಕ್ಕೆ ವ್ಯಾಪಕವಾಗಿರತಕ್ಕಂಥ ಚರ್ಚೆ ನಡೆದಿದೆ. ಎಲ್ಲಾ ವಿಷಯಗಳನ್ನು ಅಳವಡಿಸಿಕೊಂಡು ಮಾನ್ಯ ವಿರೋಧ ಪಕ್ಷದಲ್ಲಿರುವ ಬಹಳಷ್ಟು ಜನ ಹಿರಿಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಆದ್ದರಿಂದ ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿಕ್ಕೆ ಹೆಚ್ಚಿನ ಅವಕಾಶವನ್ನು ಕೊಟ್ಟಾಗ ಬಾಕಿ ಇರುವ ನಮ್ಮ ಅಧಿಕೃತ ಕಾರ್ಯಕಲಾಪಗಳನ್ನು ನಮ್ಮಿಂದ ನಡೆಸಲಿಕ್ಕಾಗಲಿಲ್ಲ. ಕಡೆಗೆ ಎರಡು-ಮೂರು ದಿವಸಗಳಿಂದಲೂ ಅಧಿಕೃತ ಕಾರ್ಯಗಳನ್ನು ನಡೆಸದೇ ಇರುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ನಾನು ತಮ್ಮ ಮುಖಾಂತರ ಅವರನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಇನ್ನು ಬಹುಶಃ ಕಾವೇರಿ ಬಗ್ಗೆ ಚರ್ಚೆ ಮಾಡುವುದಕ್ಕೆ ವಿಚಾರ ಬಂದಾಗ, ಮುಂದಿನ ದಿವಸದಲ್ಲಿ ಇದು ಯಾವ ರೀತಿ ಆಗುತ್ತದೆ ಎನ್ನುವಂಥ ಸಂದರ್ಭಗಳು ಬಂದಾಗಲೂ ಮಾತನಾಡಲಿಕ್ಕೆ ಇರುವ ಅವಕಾಶ ಇದೆ. ಆಗಸ್ಟ್ 14ನೇ ತಾರೀಖಿನವರೆಗೂ ಸಮಯ ಬರುತ್ತದೆ. ಇನ್ನು ಸುಪ್ರೀಂ ಕೋರ್ಟಿಗೆ ಬಂದಾಗ 25ನೇ ತಾರೀಖಿನಲ್ಲಿ ಅವರು ಬೆಂಚನ್ನು ಕಾನ್‌ಸ್ಟಿಟ್ಯೂಟ್ ಮಾಡಿಯಾದಮೇಲೆ ಯಾವ ರೀತಿ ಬರುತ್ತದೆ ಎನ್ನುವ ಪರಿಸ್ಥಿತಿ ಬಂದಾಗಲೂ ಚರ್ಚೆಗೆ ಒಂದು ಅವಕಾಶ ಬರುತ್ತದೆ. ಡಿಮ್ಯಾಂಡ್ಸ್ ಇದೆ. ಎಲ್ಲವನ್ನೂ ಚರ್ಚೆ ಮಾಡಿ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ಅಧಿಕೃತ ಕಾರ್ಯಕಲಾಪಗಳನ್ನು ನಾವು ಸದನ ಶುರುವಾದ ಮೇಲೆ ಮಾಡಲಿಕ್ಕೆ ಆಗಲಿಲ್ಲ, ಅಂಥ ಪರಿಸ್ಥಿತಿ ನಿರ್ಮಾಣವಾಗಿ ಕಾವೇರಿ ಬಗ್ಗೆ ನಾವು ವ್ಯಾಪಕವಾಗಿ ಚರ್ಚೆಮಾಡಿರುವ ಹಿನ್ನೆಲೆಯಲ್ಲಿ ತಾವು ಈ ಚರ್ಚೆಯನ್ನು ಇಲ್ಲಿಗೆ ಮುಗಿಸಿ ಅವರ ಮೋಷನ್‌ಗೆ ಸಂಬಂಧಪಟ್ಟಹಾಗೆ ತಮ್ಮ ತೀರ್ಪನ್ನು ತಾವು ಕೊಟ್ಟರೆ ಅಧಿಕೃತಕಾರ್ಯ ಕಲಾಪಗಳಿಗೆ ಹೋಗಲಿಕ್ಕೆ ಅನುಕೂಲವಾಗುತ್ತದೆ. ಅವರು ಕೂಡ ಸಾಕಷ್ಟು ಬೇಕು ಎಂದು ಕೇಳುತ್ತಿದ್ದಾರೆ ಚರ್ಚೆಯನ್ನು ಮೊಟಕು ಮಾಡಬೇಕೆನ್ನುವುದು ಸರ್ಕಾರದ ಇಚ್ಛೆಯಲ್ಲ.

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೇ, ನಾವು ಕಾವೇರಿ ಬೇಸಿನ್‌ನಿಂದ ಇಲ್ಲಿಗೆ ಬಂದಂಥ ಜನರು. ಇವತ್ತು ನಾವು ಹೊಸ ಸದಸ್ಯರಾಗಿ ತಮ್ಮ ಮುಂದೆ ಏನಾದರೂ ಹೇಳಿಕೊಳ್ಳಬಹುದು ಎಂದು ನಿನ್ನೆಯಿಂದ ಕಾಯ್ದು ಕುಳಿತಿದ್ದೇವೆ. ಇಲ್ಲಾ, ಬಂದದಾರಿಗೆ ಸುಂಕ ಇಲ್ಲ ಎನ್ನುವುದಾದರೆ, ನಮ್ಮ ಸ್ಥಿತಿ ಇಷ್ಟೇನೆ ಎಂದು ಹೇಳಿ ಹೊರಟುಹೋಗುತ್ತೇವೆ. ನಮ್ಮ ವಿಚಾರಗಳನ್ನು ಹೇಳುವಂಥ ಶಕ್ತಿ ನಮಗೆ ಇಲ್ಲದೇ ಹೋದರೂ ನಮ್ಮ ಶಕ್ತಿಯಾಧಾರದ ಮೇಲೆ ಇಲ್ಲಿ ಹೇಳದೇ ಇರುವ ವಿಚಾರಗಳು ನಮ್ಮ ಹತ್ತಿರ ಇವೆ. ಅದಕ್ಕೆ ತಾವು ಅವಕಾಶ ಮಾಡಿಕೊಡುತ್ತೀರಿ ಎಂದು ನಂಬಿಕೊಂಡು ಇಷ್ಟು ಸಮಯವೂ ನಾವು ಕುಳಿತಿದ್ದೇವೆ.

ಅಧ್ಯಕ್ಷರು:- ನನ್ನ ಮೇಲೆ ಇಟ್ಟಿರುವಂಥ ನಂಬಿಕೆಗೆ ಎಂದೂ ಚ್ಯುತಿ ಬರುವುದಿಲ್ಲ.

ನಾನು ನಿಮ್ಮ ನಂಬಿಕೆಗೆ ಅರ್ಹನಾಗಿಯೇ ನಡೆದುಕೊಳ್ಳುತ್ತೇನೆ. ಆದರೆ ಈಗ ಗುಲ್ಬರ್ಗದವರು ಮಂಗಳೂರಿನವರು, ಶಿವಮೊಗ್ಗದವರು ಕಾವೇರಿ ಬೇಸಿನ್‌ನವರಲ್ಲ. ಅವರು ಈಗ ಆರುಕಾಲು ಗಂಟೆ ತೆಗೆದುಕೊಂಡಿದ್ದಾರೆ. ಕಾವೇರಿ ಬೇಸಿನ್‌ನವರು ಆರುಕಾಲು ಗಂಟೆಯಿಂದ ಹೀಗೆ ಕುಳಿತಿದ್ದೀರಿ.

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೇ, ನಾವು ನಿನ್ನೆಯಿಂದಲೂ ಕೇಳುತ್ತಿದ್ದೇವೆ. ನಿನ್ನೆ ಕೂಡ ತಮ್ಮನ್ನು ಭೇಟಿಯಾಗಿ ಕೇಳಿಕೊಂಡೆವು.

ಅಧ್ಯಕ್ಷರು:- ನಾನು ಇಲ್ಲ ಎಂದು ಹೇಳುತ್ತಿಲ್ಲ. ಭೇಟಿಯಾಗಿಲ್ಲ ಎಂದು ಹೇಳುತ್ತಿಲ್ಲ. ಸುದೈವದಿಂದ ದುರ್ದೈವದಿಂದ ಅಲ್ಲಿನವರೆಲ್ಲಾ ಫ್ಲೋರ್ ಲೀಡರ್ ಆಗಿದ್ದರಿಂದ ಈ ತಾಪತ್ರಯ ಬಂದಿದೆ. ಇಲ್ಲ ಎಂದರೆ ಸ್ವಲ್ಪ ಬದಲಾವಣೆ ಆದರೆ ಆಮೇಲೆ ಸರಿ ಬರುತ್ತದೆ. ಈಗ ನಮ್ಮ ಮುಖ್ಯ ಉದ್ದೇಶ ಏನು ಅಂದರೆ ಚರ್ಚೆಗೆ ಹೆಚ್ಚಿನ ಅವಕಾಶ ಸಿಗಬೇಕು ಎಂದು ನಾವು ತಮ್ಮ ಅನಿಸಿಕೆ ಮೇರೆಗೆ ಮತ್ತು ತಾವು ಕರೆಯಿಸಿ ಒಂದು ಸಂಧಾನ ಮಾಡಿದ್ದಕ್ಕಾಗಿ ನಾವು ಅದನ್ನು ಒಪ್ಪಿಕೊಂಡು ಇಲ್ಲಿ ಸುಮ್ಮನೇ ಧರಣಿ ಕುಳಿತರೆ ಅದರಿಂದ ಸಮಯ ಹಾಳಾಗುತ್ತದೆ ಎಂದು ಎಲ್ಲರೂ ಹೇಳಿದರು. ಹೇಳಿದ ಮೇಲೆ ಒಂದು ಒಳ್ಳೆಯ ಚರ್ಚೆ ಆಗಲಿ. ಆ ಚರ್ಚೆಯ ಸ್ವರೂಪದಿಂದ ಅಥವಾ ಅದರ ಫಲಶೃತಿಯಿಂದ ಸಾಕಷ್ಟು ಸದನಕ್ಕೂ ಲಾಭ ಆಗಲಿ. ಮತ್ತು ಅನೇಕ ಸದಸ್ಯರು, ಹಾಗೂ ರೈತರಿಗೂ ಇದರ ಬಗ್ಗೆ ತಿಳುವಳಿಕೆ ಆಗಲಿ ಎನ್ನುವ ದೃಷ್ಟಿಯಿಂದ ಚರ್ಚೆಮಾಡಬೇಕು ಎಂದು ನಾವು ಧರಣಿಯನ್ನು ಹಿಂತೆಗೆದುಕೊಂಡು ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ನಾವು ಚರ್ಚೆ ಮಾಡುತ್ತಿದ್ದೇವೆ. ಈಗ ಎರಡು ಮೂರು ದಿವಸ ನಾವು ಧರಣಿ ಮಾಡಿಕೊಂಡೇ ಕುಳಿತಿದ್ದರೆ, ಇಲ್ಲ ಅನಾವಶ್ಯಕವಾಗಿ ಮಾಡುತ್ತಿದ್ದೀರಿ ಎಂದು ತಾವು ಹೇಳಬಹುದಿತ್ತು. ಈಗ ಒಂದು ಸೂಕ್ತವಾಗಿರತಕ್ಕಂಥ ಚರ್ಚೆನಡೆದ ಮೇಲೆ ಬಹಳ ಇಂಪಾರ್ಟೆಂಟ್ ಆದ ಈ ವಿಷಯದ ಮೇಲೆ ಚರ್ಚೆ ನಡೆದಾಗಲೂ ಕೂಡ ಇದನ್ನು ಮುಂದೆ ಹಾಕೋಣ, ಇಲ್ಲಿಗೆ ನಿಲ್ಲಿಸೋಣ ಎಂದರೆ ಅಷ್ಟೊಂದು ಸರಿಯಾಗುವುದಿಲ್ಲ. ಏಕೆಂದರೆ ಸಾಕಷ್ಟು ಅವರು ಹೇಳಿದಹಾಗೆ ಆ ಭಾಗದಿಂದ ಬಂದಂತಹ ಅನೇಕ ಸದಸ್ಯರು ಮತ್ತು ಐದು ಹತ್ತು ನಿಮಿಷಗಿಂತಲೂ ಜಾಸ್ತಿ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ತಾವು ಅವರಿಗೆ ಹತ್ತತ್ತು ನಿಮಿಷ ಅವಕಾಶ ಮಾಡಿಕೊಟ್ಟರೆ ಅವರೂ ಹೇಳುತ್ತಾರೆ. ಆಮೇಲೆ ಸರ್ಕಾರದವರು ಏನು ಹೇಳಬೇಕು, ಅದನ್ನು ಇವತ್ತಾದರೂ ಹೇಳಲಿ ಅಥವಾ ನಾಳೆ ಮುಂಜಾನೆ ಆದರೂ ಹೇಳಲಿ. ಅದಕ್ಕೆ ಉತ್ತರ ಕೊಡಲಿ. ಕೇಳಿಕೊಳ್ಳೋಣ. ಏಕೆಂದರೆ ಇದು ಬಹಳ ಮಹತ್ವವಾದ ವಿಷಯ ಇದೆ. ಇಡೀ ರಾಜ್ಯದಲ್ಲಿ ಕಾವೇರಿ ಇಶ್ಯೂ ಬಹಳ ಹೈಲೈಟ್ ಆಗುತ್ತದೆ. ಈಗ ಪ್ರತಿ ದಿವಸ ಟಿ.ವಿ. ಆನ್ ಮಾಡಿದಾಗ ಇದು ಒಂದನೆಯ ಸಬ್ಜೆಕ್ಟ್ ಅಥವಾ ಎರಡನೆಯ ಸಬ್ಜೆಕ್ಟ್. ಕಾವೇರಿ ನೀರಿನ ಬಗ್ಗೆ ಸದನದಲ್ಲಿ ಹೀಗೆ ಆಯಿತು, ಧರಣಿ ವಾಪಸ್ ತೆಗೆದುಕೊಂಡರು. ಅಂದರೆ ಎಲ್ಲಾ ಮುಗಿದೇ ಹೋಗಿದೆ ಇಶ್ಯೂ ಎಂದು ಆಗುತ್ತದೆ. ಅದಕ್ಕೆ ನಾವು ಧರಣಿ ವಾಪಸ್ ತೆಗೆದುಕೊಂಡರೂ ಕೂಡ ಚರ್ಚೆ ಒಳ್ಳೆಯ ರೀತಿಯಿಂದ ಆಗಲಿ ಈ ಚರ್ಚೆ ಆದ ಮೇಲಾದರೂ ಕೂಡ. ಕನಿಷ್ಟ ಪಕ್ಷ

ಅವರಿಗೆ ಅರ್ಥ ಆಗುತ್ತದೆ ಎಂದು ತಿಳಿದುಕೊಂಡು ನಾವು ಈ ಚರ್ಚೆಯನ್ನು ಮಾಡುತ್ತಿದ್ದೇವೆ. ಆದ್ದರಿಂದ ತಾವು ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಮತ್ತು ಈಗಾಗಲೇ ನಾನು ಹೇಳಿದ ಹಾಗೆ ಅವರು ತೆಗೆದುಕೊಂಡಂತಹ ಸಮಯ ಇನ್ನೂ ಆರು ತಿಂಗಳು ಇದೆ. ಮೂರು ತಿಂಗಳು ನಾಲ್ಕು ತಿಂಗಳು ಹಿಂದಿನ ಸರ್ಕಾರಗಳು ವೋಟ್ ಆನ್ ಅಕೌಂಟ್ಸ್ ತೆಗೆದುಕೊಳ್ಳುತ್ತಿದ್ದವು. ಮೂರು ತಿಂಗಳು ತೆಗೆದುಕೊಂಡರೆ ಆಗ ಒಂದು ದೊಡ್ಡ ಅಚೀವ್‌ಮೆಂಟ್ ಎಂದು ತಿಳಿದುಕೊಳ್ಳುತ್ತಿದ್ದೆವು. ಆದರೆ ಇವರು ಧಾರಾಳವಾಗಿ ಆರು ತಿಂಗಳು ತೆಗೆದುಕೊಂಡಿದ್ದಾರೆ. ಸಾಕಷ್ಟು ಸಮಯ ಇದೆ. ಚರ್ಚೆ ಮಾಡೋಣ, ಒಂದು ಮೂರು ದಿವಸ ಅಸೆಂಬ್ಲಿ ಮುಂದೆ ಹೋದರೆ ಏನೂ ಆಗುವುದಿಲ್ಲ. ಹಾಗೆ ನಾವು ಧರಣಿ ಕೂಡುವುದಕ್ಕಿಂತಲೂ ಅಥವಾ ಬಾಯ್‌ಕಾಟ್ ಮಾಡುವುದಕ್ಕಿಂತಲೂ ಚರ್ಚೆ ಆದರೆ ಅದು ಒಳ್ಳೆಯದಲ್ಲ. ಅದಕ್ಕಾಗಿ ದಯವಿಟ್ಟು ತಾವು ಸಹಕರಿಸಬೇಕು ಎಂದು ಪುನಃ ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ನಿಮ್ಮ ಸಲಹೆ ಬಹಳ ಉಪಯುಕ್ತವಾಗಿದೆ. ಇವತ್ತು ಒಂದು ಅರ್ಧ ಗಂಟೆ ಹೆಚ್ಚು ಕೂಡೋಣ? ನನ್ನದೇನು ಆಲೋಚನೆ ಎಂದರೆ ಇವತ್ತೆಲ್ಲಾ ಕಾವೇರಿ ಬೇಸಿನ್ ಮೇಲೆ ಮೆಂಬರ್ಸ್ ಯಾರ್‍ಯಾರು ಮಾತನಾಡುತ್ತಾರೋ ಅವರಿಗೆ ಮಾತನಾಡಲು ಅವಕಾಶ ಕೊಟ್ಟು, ಅವರ ಹಕ್ಕು ಮೊಟಕು ಮಾಡದೇ ಅವರೇನು ಹೇಳುವುದಕ್ಕೆ ಇಚ್ಛಿಪಡುತ್ತಾರೆ, ಅದನ್ನು ಪೂರ್ಣ ಕೇಳೋಣ. ನಮ್ಮ ಅವಕಾಶವನ್ನು ವಂಚನೆ ಆಯಿತು ಎನ್ನುವ ಭಾವನೆ ಅವರಿಗೆ ಬರುವುದು ಬೇಡ. ಸರ್ಕಾರ ಏನು ಉತ್ತರ ಕೊಡುತ್ತಾರೋ ಅದನ್ನು ನಾಳೆ ಕೊಡಿ ಎಂದು ಹೇಳುತ್ತೇನೆ. ಆ ತರಹ ಮಾಡಬಹುದಲ್ಲ. ಒಂದರ್ಧ ಗಂಟೆ ಹೆಚ್ಚು ಕೊಡುವುದಕ್ಕೆ ತಾವು ತಯಾರಿದ್ದೀರಲ್ಲ, ಅದು ಆಗಬಹುದಲ್ಲ.

ಶ್ರೀ ಸಿ.ಎಚ್.ವಿಜಯಾಶಂಕರ್:- ಆಗಬಹುದು, ಹಿರಿಯ ಸದಸ್ಯರು ಮಾತನಾಡುತ್ತಾರೆ. ನಮಗೆ ಅವಕಾಶ ಸಿಗವುದಿಲ್ಲ.

ಅಧ್ಯಕ್ಷರು:- ನೀವು ನಿಮ್ಮ ನಿಮ್ಮ ಪಕ್ಷಗಳಲ್ಲಿ ಬಂಡಾಯ ಏಳಬೇಕು ಇಲ್ಲದೇ ಹೋದರೆ ಅವರು ಅವಕಾಶ ಎಲ್ಲಿ ಕೊಡುತ್ತಾರೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- 8.30ರವರೆಗೆ ನಡೆಯಲಿ, ನಾಳೆ ಮತ್ತೆ ಬೇಕಾದರೆ ನೋಡೋಣ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಸನ್ಮಾನ್ಯ ಸಭಾಧ್ಯಕ್ಷರೆ, ಬಹಳ ಗಂಭೀರವಾದ ಸಮಸ್ಯೆ ಇದು. ಇವತ್ತು ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸಕೊಳ್ಳಬಹುದು ಎಂದು ಎಲ್ಲ ಸದಸ್ಯರ ಅಭಿಪ್ರಾಯ ಬರುತ್ತಿದೆ. ಇದು ಪ್ರಕೃತಿಗೆ ಸಂಬಂಧಪಟ್ಟ ವಿಷಯ. ಎರಡು ರಾಜ್ಯಗಳು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳತಕ್ಕ ವಿಷಯ ಆದರೆ ಐದು ಟಿಎಂಸಿ ನೀರನ್ನು ಬಿಡುವುದರ ಮೂಲಕ ಸರ್ಕಾರ ವಿರೋಧ ಪಕ್ಷಗಳ ಎಲ್ಲ ಜವಾಬ್ದಾರಸ್ಥರನ್ನು ಕರೆದು ಇದ್ದಕ್ಕಿದ್ದ ಹಾಗೆ ಐದು ಟಿಎಂಸಿ ನೀರನ್ನು ಬಿಡತಕ್ಕ ವಿಚಾರದಲ್ಲಿ ನಾವು ಬಹಳ ವಿರೋಧ ಮಾಡತಕ್ಕಂಥ ವ್ಯವಸ್ಥೆಯಲ್ಲಿ ಮಾತನಾಡುತ್ತಾ

ಬಂದಿದ್ದೇವೆ. ಮೊದಲು ಒಂದು ಆರು ಟಿಎಂಸಿ ನೀರು ಬಿಟ್ಟಾಗ, ಸನ್ಮಾನ್ಯ ಈಗಿನ ಪ್ರಧಾನಮಂತ್ರಿಗಳು ಹಾಗೂ ಮಾಜಿ ಮುಖ್ಯಮಂತ್ರಿಗಳಾದಂತಹ ಶ್ರೀ ಎಚ್.ಡಿ.ದೇವೇಗೌಡರು ನನಗೆ ಒಂದು ಮಾತು ಹೇಳಿದರು. ಯಾವುದೇ ಕಾರಣಕ್ಕೂ ಆರು ಟಿಎಂಸಿ ನೀರನ್ನು ಬಿಡುವುದರ ಮೂಲಕ ಕಾವೇರಿ ಜಲಾನಯನ ಪ್ರದೇಶದ ರೈತರಿಗೆ ಜೂನ್ ಕೊನೆಯವರೆಗೂ ಈಗ ಇರತಕ್ಕ ಬೆಳೆಗೆ ಯಾವುದೂ ತೊಂದರೆ ಆಗುವುದಿಲ್ಲ. ಮಾನ್ಯ ನಾಗೇಗೌಡರು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಮಂಡ್ಯ ಜಿಲ್ಲೆಯನ್ನು ನಾನು ಇವತ್ತು ಟ್ರೈನ್‌ನಲ್ಲಿ ಬರುತ್ತಾ ನೋಡಿಕೊಂಡು ಬಂದೆ. 25 ಭಾಗ ಬೆಳೆ ನಷ್ಟ ಆಗಿದೆ. ಮಂಡ್ಯ ಜಿಲ್ಲೆಯ ಮಣ್ಣಿನಲ್ಲಿ ವಿಶೇಷ ಗುಣಗಳು ಇವೆ. ಒಂದು ಮರಳು ಮಿಶ್ರಿತ ಇರತಕ್ಕ ಮಣ್ಣು, ಇನ್ನೊಂದು ಕೆಂಪು ಹಾಗೂ ಕಲ್ಲು ಮಿಶ್ರಣವಾದ ಮಣ್ಣು. ಎರಡಕ್ಕೂ ಬೆಳೆ ಉಳಿಸಿಕೊಳ್ಳಬೇಕಾದರೆ ಕನಿಷ್ಟ ಹತ್ತು ದಿವಸಕ್ಕೆ ಒಂದು ಸಾರಿ ನೀರು ಬೇಕೇ ಬೇಕು. 15 ದಿವಸ ಹತ್ತು ದಿವಸಕ್ಕೆ ಒಂದು ಸಾರಿ ನೀರು ಬೇಕೇ ಬೇಕು. ಈಗ ಕನಿಷ್ಟ 80ರಿಂದ ನೂರು ಕೋಟಿ ರೂಪಾಯಿ ಬೆಳೆ ನಷ್ಟ ಆಗಿದೆ. ಏಕೆಂದರೆ ಅವರ ಭಾಗದಲ್ಲಿ 18 ಟನ್, 15 ಟನ್ 20 ಟನ್ ಕಬ್ಬು ಬೀಳತಕ್ಕ ಒಂದು ವ್ಯವಸ್ಥೆಗೆ ಬಂದಿದೆ. ಆದರೆ ಅದಕ್ಕೇನೂ ರೈತರಿಗೆ ಇನ್‌ಶ್ಯೂರೆನ್ಸ್ ಇಲ್ಲ. ರೈತರಿಗೆ ಯಾವುದೇ ವಿಧವಾದ ಇನ್ಶ್ಯೂರೆನ್ಸ್ ಇಲ್ಲ. ಆದ್ದರಿಂದ ರಾಷ್ಟ್ರೀಯ ಜಲ ನೀತಿ ರೂಪಿಸುವವರೆಗೂ ಎಂದು ನಾವು ಎಲ್ಲ ಪಕ್ಷದವರೂ ಮಾತನಾಡುತ್ತಿದ್ದೇವೆ, ಎಲ್ಲಾ ಪತ್ರಿಕೆಯಲ್ಲೂ ಹೇಳುತ್ತಿದ್ದೇವೆ. ಹಾಗೆ ರಾಷ್ಟ್ರೀಯ ಜಲ ನೀತಿ ರೂಪಿಸುವವರೆಗೆ ರಾಜ್ಯದ ಜಲ ಎಲ್ಲಾ ಬತ್ತಿ ಹೋಗಿರುತ್ತದೆ ಎಂದು ನಾವು ತಿಳಿದುಕೊಂಡಿದ್ದೇವೆ. 'ಅಮ್ಮ ಮದುವೆಗೆ ಬರುವ ಹೊತ್ತಿಗೆ, ಅಯ್ಯ ಚಟ್ಟಕ್ಕೆ ಹೊರಟುಹೋಗಿರುತ್ತಾನೆ' ಆ ರೀತಿಯಾಗಿದೆ. ಇವತ್ತಿನ ಪರಿಸ್ಥಿತಿ. ಅದೇ ಅಕ್ಕನ ಮಗಳನ್ನು ಮದುವೆ ಆಗುತ್ತೇನೆಂದು ತೀರ್ಮಾನ ಮಾಡಿಕೊಂಡು, ಈ ಅಮ್ಮ ಮದುವೆಗೆ ಬರುವ ಹೊತ್ತಿಗೆ ಅಯ್ಯ ಚಟ್ಟಕ್ಕೆ ಏರಿರುತ್ತಾನೆ.

ಅಧ್ಯಕ್ಷರು:- ಗೊತ್ತಾಗಲಿಲ್ಲವೇ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ರಾಷ್ಟ್ರೀಯ ಜಲ ನೀತಿ ರೂಪಿಸುವವರೆಗೆ ರಾಜ್ಯದ ಪೂರ್ಣ ಬೆಳೆ, ರಾಜ್ಯದ ಜಲವೆಲ್ಲಾ ಬತ್ತಿ ಹೋಗಿರುತ್ತದೆ. ಆದ್ದರಿಂದ ದಯವಿಟ್ಟು ಪೂರ್ಣವಾಗಿ ಏನನ್ನು ಮಾತನಾಡುತ್ತೇನೆ ಅದನ್ನು ಅನುಷ್ಠಾನಕ್ಕೆ ತರಬೇಕು. ಇರಬಹುದು, ನಾವು ಒಪ್ಪಿಕೊಳ್ಳುತ್ತೇವೆ. ನಮ್ಮರಾಜ್ಯದವರೇ, ಪ್ರಧಾನಮಂತ್ರಿಯಾಗಿ ಇವತ್ತಿನ ಪರಿಸ್ಥಿತಿಯಲ್ಲಿ ಮಾತುಕತೆಗೆ ಉತ್ತಮವಾದಂತಹ ವಾತಾವರಣವನ್ನು ಸೃಷ್ಟಿ ಮಾಡತಕ್ಕಂಥಹ ವ್ಯವಸ್ಥೆ ಇದೆ. ಪ್ರಯತ್ನ ಪಟ್ಟರೆ, ಆದರೆ ಪ್ರಯತ್ನ ಪಟ್ಟಿಲ್ಲ. ಆದರೆ ಇನ್ನೂ ಅಪಾಯವಿದೆ ಈಗ ಎಷ್ಟು ಒಳ್ಳೆಯ ಕಾಲ ಇದೆಯೋ ಅಷ್ಟೆ ಅಪಾಯ ಕಾಲನೂ ಇದೆ. ಏಕೆಂದರೆ ಈ ಐದು ಟಿಎಂಸಿ ನೀರು ಬಿಟ್ಟಿರುವುದು ನೋಡಿದರೆ, ಅಲ್ಲಿ ಯಾರೋ ಚುಚ್ಚುತ್ತಾರೆ, ಅಲ್ಲಿಂದ ಇಲ್ಲಿಗೆ ಚುಚ್ಚುತ್ತಾರೆ, ಇದವರು ಇಲ್ಲಿ ನಮಗೆ ಚುಚ್ಚುತ್ತಾರೆ. ಸುತ್ತಮುತ್ತ ಚುಚ್ಚಾಟದಿಂದ ನಾವು ರೈತರು ಬಹಳ ಅನಾನುಕೂಲ ಪರಿಸ್ಥಿತಿಯನ್ನು ಅನುಭವಿಸತಕ್ಕ ಸ್ಥಿತಿಗೆ ಬಂದಿದ್ದೇವೆ. ಏಕೆಂದರೆ ನಾವು ಬಹಳ ಗಂಭೀರವಾಗಿ ಯೋಚನೆ

ಮಾಡಬೇಕು. ನಾವು 11.2 ಲಕ್ಷ ಎಕರೆ ನೀರನ್ನು ನಾವು ಉಪಯೋಗಿಸಿಕೊಳ್ಳುತ್ತಿದ್ದೆವು. ಆದರೆ ನಮ್ಮ ಕಾವೇರಿ ಜಲಾನಯನ ಪ್ರದೇಶದ ನೀರು ಹರಿಯತಕ್ಕ ಜಾಗ 67 ಪರ್ಸೆಂಟ್. ನಾವು ಉಪಯೋಗಿಸುತ್ತಿರುವುದು 11.2 ಲಕ್ಷ ಎಕರೆಗೆ ಮಾತ್ರ. ಅದರಲ್ಲೂ ಅರೆ ಖುಷ್ಕಿ ಬೆಳೆ, ಪೂರ್ಣ ನೀರಾವರಿ ಇಲ್ಲ. ಆದರೆ ತಮಿಳುನಾಡಿನಲ್ಲಿ 33 ಪರ್ಸೆಂಟ್ ಕಾವೇರಿ ನೀರು ಹರಿಯುತ್ತಿರುವುದು 28 ಲಕ್ಷ ಎಕರೆಗೆ ನೀರಾವರಿ ಮಾಡತಕ್ಕ ವ್ಯವಸ್ಥೆ ಇದೆ. ಆದ್ದರಿಂದ ಮೇಲ್ದಂಡೆ ಹಾಗೂ ಕೆಳದಂಡೆ ರಾಜ್ಯಗಳಲ್ಲಿ ಏಕೆಂದರೆ ಮೇಲ್ದಂಡೆಯಲ್ಲಿ ಒಂದು ಟಿಎಂಸಿ ನೀರು ಇದ್ದರೆ ಯಾವಾಗಲಾದರೂ ಕೆಳದಂಡೆಯಲ್ಲಿ ಬಿಡಬಹುದು. ಆದರೆ ಕೆಳದಂಡೆಯಿಂದ ಒಂದು ಟಿಎಂಸಿ ನೀರನ್ನೂ ಮೇಲ್ದಂಡೆಗೆ ತರುವುದಕ್ಕೆ ಸಾಧ್ಯ ಇಲ್ಲ. ಆದ್ದರಿಂದ ದಯವಿಟ್ಟು ಬಹಳ ಗಂಭೀರವಾಗಿ ಸರ್ಕಾರ ಯೋಚನೆ ಮಾಡಬೇಕು. ಇವತ್ತು ಆಗಲೇ ಮಂಡ್ಯ ಜಿಲ್ಲೆಯಲ್ಲಿ ಚಳುವಳಿ ಶುರು ಆಗಿದೆ. ಆದರೆ ಮೈಸೂರು ಜಿಲ್ಲೆಯಲ್ಲಿ ಕಬಿನಿ ಹಾರಂಗಿಯಲ್ಲಿ ಅದು ಏಕೆ ಎಂದು ನನಗೆ ಗೊತ್ತಿಲ್ಲ. ಅವರೇನು ಅನಾಥ ಮಕ್ಕಳೋ ಏನೋ ಗೊತ್ತಿಲ್ಲ. ಮಾತೆತ್ತಿದರೆ, ಬಹಳ ಸುಲಭವಾಗಿ ಗೇಟ್ ಎತ್ತಿ ನೀರು ಬಿಡುತ್ತಾರೆ.

5.40 ಪಿ.ಎಂ.

ಅದೇ ರೀತಿ ಕೆ.ಆರ್.ಎಸ್.ನಲ್ಲಿ ಸುಲಭವಾಗಿ ಕೈಹಾಕುವುದಕ್ಕಾಗುವುದಿಲ್ಲ. ಏಕೆಂದರೆ, ಇಲ್ಲಿರುವ ಜನರೇ ಬೇರೆ. ಆದುದರಿಂದ, ಈಗಾಗಲೇ ವಿಶ್ವಸಂಸ್ಥೆ ಒಂದು ವರದಿ ಕೊಟ್ಟಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಲ್ಲಿನ ಜನರೇ ಬೇರೆ, ಅಲ್ಲಿರುವ ಜನರೇ ಬೇರೆ ಎಂದರೆ ಏನರ್ಥ? ಇಲ್ಲಿನವರೇನು ಕೈಯಲ್ಲಿ ದೊಣ್ಣೆ ಹಿಡಿದುಕೊಂಡಿರುತ್ತಾರೆಯೇ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಸಮಸ್ಯೆಯೇನಾದರೂ ಬಂದರೆ ದೊಣ್ಣೆ ಹಿಡಿದುಕೊಳ್ಳಬೇಕಲ್ಲ. ಆ ಭಾಗದ ರೈತರಿಗೆ ಬದುಕುವ ಹಕ್ಕು ಹೋದನಂತರ ಕೈಯಲ್ಲಿ ದೊಣ್ಣೆ ಹಿಡಿದುಕೊಳ್ಳಬೇಕಲ್ಲ. ಅಲ್ಲಿ 17-18 ಟನ್‌ಗಳಷ್ಟು ಕಬ್ಬು ಉತ್ಪಾದನೆಯಾಗಿದೆಯೆಂದು ಈಗಾಗಲೇ ಹೇಳಿದ್ದೇನೆ. ತಮಿಳುನಾಡಿನವರು ನೀರನ್ನು ಎಷ್ಟು ಪ್ರಮಾಣದಲ್ಲಿ ವೇಸ್ಟ್ ಮಾಡುತ್ತಿದ್ದಾರೆಂದರೆ, ಸಮುದ್ರಕ್ಕೆ ಸುಮಾರು 300 ಟಿ.ಎಂ.ಸಿ.ಯಷ್ಟು ನೀರು ಬಳಕೆಯಾಗದೆ ಸಮುದ್ರಕ್ಕೆ ಹೋಗುತ್ತಿದೆಯೆಂದು ವಿಶ್ವ ರಾಷ್ಟ್ರ ಸಂಸ್ಥೆ ಅಲ್ಲಿ ಅಧ್ಯಯನ ಮಾಡಿ ಒಂದು ವರದಿ ಸಲ್ಲಿಸಿದೆ. ಆದುದರಿಂದ, ಎಲ್ಲಾ ಮೂಲಭೂತವಾದ ವಿಚಾರಗಳನ್ನು ಆಲೋಚಿಸಿ ಯಾವ ಕಾರಣಕ್ಕಾಗಿ ಇವೊತ್ತು ತಮಿಳುನಾಡಿಗೆ ಐದು ಟಿ.ಎಂ.ಸಿಯಷ್ಟು ನೀರನ್ನು ಬಿಟ್ಟಿದ್ದೀರೋ, ಇದರ ಬಗ್ಗೆ ಇಡೀ ಕರ್ನಾಟಕ ರಾಜ್ಯದ ಜನತೆ ವಿರೋಧಿಸುತ್ತಿದ್ದು, ನಾನೂ ಸಹ ವಿರೋಧಿಸುತ್ತಾ, ಈಗಾಗಲೇ ಬಹಳಷ್ಟು ಜನ ಹಿರಿಯರು ಗಂಭೀರವಾಗಿ ಈ ಕುರಿತು ಚರ್ಚಿಸಿರುವುದರಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ಏನೇ ಸಮಸ್ಯೆ ಇದ್ದರೂ ನ್ಯಾಯಾಧೀಕರಣ ಅದನ್ನು ಬಗೆಹರಿಸಲು ಸಾಧ್ಯವಿಲ್ಲ ಮತ್ತು ಸರ್ವೋಚ್ಚ ನ್ಯಾಯಾಲಯ

ಸಹ ಬಗೆಸರಿಸುವುದಕ್ಕೆ ಸಾಧ್ಯವಿಲ್ಲ. ಇದನ್ನು ಪರಸ್ಪರ ಮಾತುಕತೆ ಮೂಲಕ ಬಗೆಹರಿಸುವುದಕ್ಕೆ ಸಾಧ್ಯವಾಗಿರುವುದರಿಂದ ಮಾತುಕತೆಯಾಗಿ ಒಂದು ತೀರ್ಮಾನಕ್ಕೆ ಬರುವವರೆಗೂ ಯಾವುದೇ ಕಾರಣಕ್ಕೂ ನೀರು ಬಿಡದಿರತಕ್ಕ ವಿಚಾರವನ್ನು ಆಲೋಚಿಸಬೇಕೆಂದು ಹೇಳುತ್ತಾ, ಇಷ್ಟು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):- ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರತಕ್ಕ ಈ ಪ್ರಸ್ತಾವನೆ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ. ಅನೇಕ ವಿಷಯಗಳನ್ನು ಬಹಿರಂಗಪಡಿಸಬಾರದೆಂಬ ಕಟ್ಟುಪಾಡಿಗೆ ನಾವು ಬಹಳ ದಿವಸಗಳಿಂದ ಒಳಗಾಗಿದ್ದೇವೆ. ಇವೊತ್ತು ಮತ್ತು ನಿನ್ನೆಯ ಚರ್ಚೆಯಿಂದ ಆ ಕಟ್ಟು ಪಾಡು ಬಿಚ್ಚಿಹೋಗಿದೆ. ಶ್ರೀಮಾನ್ ನಂಜೇಗೌಡರು ಮಾತನಾಡಿರುವಂತೆ ಬಹುಶಃ ಅವರ ವಾದಗಳನ್ನು ನಾವು ಅನೇಕ ವರ್ಷಗಳಿಂದ ಕೇಳುತ್ತಲೇ ಬಂದಿದ್ದೇವೆ. ಈಗ ಸದನದಲ್ಲಿ ಹೆಚ್.ಎಂ.ಚೆನ್ನಬಸಪ್ಪನವರಂಥವರು ಒಬ್ಬರು ವ್ಯಕ್ತಿಯಿಲ್ಲ. ಶ್ರೀಮಾನ್ ನಂಜೇಗೌಡರು ಮತ್ತು ದೇವೇಗೌಡರು ಕಾವೇರಿ ಎಷ್ಟು ದೂರದವರೆವಿಗೂ ಹರಿಯುತ್ತಾಳೋ ಅದರ ಉದ್ದಕ್ಕೂ ಈಜಿ ಆ ಬಗೆಗಿನ ಎಲ್ಲಾ ವಿಷಯಗಳನ್ನೂ ರಾಜ್ಯದ ರಾಷ್ಟ್ರದ ಮತ್ತು ಸರ್ಕಾರದ ಮುಂದೆಯೂ ಹೇಳಿದ್ದಾರೆ. ಈಗ ನಮಗೆ ಏನೋ ಒಂದು ಆಸೆ ಹುಟ್ಟಿದೆ. ಈ ಕಾವೇರಿ ನದಿಯನ್ನು ಯಾರು ಈಜಿದರೋ ಮತ್ತು ಆ ಸುಳಿಯಲ್ಲಿ ಯಾರು ತೇಲಿ ಬಂದರೋ ಅವರೇ ಈ ದೇಶದ ಪ್ರಧಾನಮಂತ್ರಿಗಳಾದ ನಂತರ ಕಾವೇರಿ ಜಲ ವಿವಾದದ ಸಮಸ್ಯೆ ಬಹಳ ಸುಲಭವಾಗಿ ಬಗೆಹರಿಯುತ್ತದೆಂಬ ಆಸೆ ಸ್ವಲ್ಪ ಮರುಕಳಿಸಿದೆ. ಆದರೆ, ಮೊನ್ನೆ ತಮಿಳುನಾಡಿಗೆ ಐದು ಟಿಎಂಸಿ.ಯಷ್ಟು ನೀರನ್ನು ಬಿಡುಗಡೆ ಮಾಡಿದಂಥ ಸನ್ನಿವೇಶ ಮತ್ತು ವಿಧಾನಗಳೇನಿವೆ, ಇದು ನಮ್ಮ ಕರ್ನಾಟಕಕ್ಕೆ ಮತ್ತೆ ಸಂಕಟ ತರತಕ್ಕಂಥ ಒಂದು ದೃಷ್ಟಾಂತವಾಗಿದೆಯೆನ್ನುವ ಮಾತನ್ನು ಹೇಳುತ್ತೇನೆ. ಏಕೆಂದರೆ, ಮುಖ್ಯಮಂತ್ರಿಗಳು ಸದನದಲ್ಲಿ ಈಗ ಉಪಸ್ಥಿತರಿದ್ದಾರೆ. ಅವರು ಮಾತನಾಡುತ್ತಾ 'ನೀರು ಬಿಡುಗಡೆ ಮಾಡುವ ವಿಚಾರದಲ್ಲಿ ಬೊಮ್ಮಾಯಿಯವರು ನನಗೆ ಹೇಳಿದರು' ಎಂಬ ವಿಷಯವನ್ನು ಇವೊತ್ತು ಬಹಿರಂಗಪಡಿಸಿದರು. ಅಲ್ಲದೆ, ಮೊನ್ನೆ ದೂರದರ್ಶನದ ಸಂದರ್ಶನ ಕಾರ್ಯಕ್ರಮದಲ್ಲಿಯೂ ಸಹ ಆ ಬಗ್ಗೆ ಕೇಳಿದಾಗ somebody spoken to me ಎಂದು ಹೇಳಿದರು. ಇವೊತ್ತು ಆ ಒಗಟನ್ನು ಬಿಡಿಸಿ ಹೇಳಿದರು. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಹೆಚ್.ಡಿ.ದೇವೇಗೌಡರು ನಿಮ್ಮ ಸ್ಥಾನದಲ್ಲಿ ಕುಳಿತಿದ್ದಂಥ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವ ಸಂದರ್ಭ ಬಂತು. ಆಗ ಅವರು ನಿಮ್ಮಷ್ಟು ಸುಲಭವಾಗಿ ನೀರನ್ನು ಬಿಟ್ಟಿರಲಿಲ್ಲ. ಸರ್ವೋಚ್ಚ ನ್ಯಾಯಾಲಯದವರು ಒಂದು ಆದೇಶ ಕೊಟ್ಟರು. ಏನೆಂದರೆ, ನೀವು ಪ್ರಧಾನಮಂತ್ರಿಗಳಾಗಿ ತೀರ್ಮಾನ ಮಾಡಿ, ತೀರ್ಮಾನ ಮಾಡುವುದಕ್ಕಿಂತ ಮುಂಚಿತವಾಗಿ ಸಂಬಂಧಪಟ್ಟ ಎಲ್ಲರನ್ನೂ ಕರೆದು ಮಾತನಾಡಿ ಎಂದು ವ್ಯಾವಹಾರಿಕವಾದ ಸಲಹೆ ಕೊಟ್ಟರು. ಇದನ್ನು ಸರ್ವೋಚ್ಚ ನ್ಯಾಯಾಲಯದವರು

ಹೇಳದೇ ಇದ್ದರೂ ಕೂಡ ಮಾಡಬೇಕಾಗಿತ್ತು. ಈ ರೀತಿ ಹಿಂದಿನ ಪ್ರಧಾನಮಂತ್ರಿಗಳು ಮಾಡಿಲ್ಲ, ಮತ್ತು ಅವರ ಹಿಂದಿನ ಪ್ರಧಾನಮಂತ್ರಿಗಳೂ ಮಾಡಿಲ್ಲ, ಅಲ್ಲದೆ, ಅವರ ಹಿಂದಿನ ಪ್ರಧಾನಮಂತ್ರಿಗಳೂ ಸಹ ಮಾಡಿಲ್ಲ. ಏಕೆ ಮಾಡಿಲ್ಲವೆಂದರೆ, ತಮಿಳುನಾಡಿನಲ್ಲಿ ಯಾವುದೇ ರಾಜಕೀಯ ಪಕ್ಷ ಅಧಿಕಾರದಲ್ಲಿರಲಿ, ಅವರು ಅಂತಹ ಪ್ರಮುಖ ಸ್ಥಾನದಲ್ಲಿದ್ದರು, ರಾಷ್ಟ್ರ ರಾಜಕಾರಣವನ್ನು ನಿಯಂತ್ರಣ ಮಾಡತಕ್ಕಂಥ ಒಂದು ಹತೋಟಿ ಅವರ ಕೈಯಲ್ಲಿದ್ದಂಥ ಕಾರಣದಿಂದಾಗಿ, ಯಾವುದೇ ಸನ್ನಿವೇಶ ಬಂದರೂ ಕೂಡ ನಮ್ಮ ರಾಜ್ಯದ ವಿರುದ್ಧವಾಗಿ ಅನೇಕ ತೀರ್ಮಾನಗಳಾಗುತ್ತಿದ್ದವು. ಆ ತೀರ್ಮಾನ ದಿವಂಗತ ಪ್ರಧಾನಮಂತ್ರಿಗಳಾದ ರಾಜೀವ್‌ಗಾಂಧಿಯವರ ಕಾಲದಲ್ಲಾಗಿರಬಹುದು, ಸನ್ಮಾನ್ಯ ವಿ.ಪಿ.ಸಿಂಗ್‌ರವರ ಕಾಲದಲ್ಲಾಗಿರಬಹುದು ಅಥವಾ ಪಿ.ವಿ.ನರಸಿಂಹರಾವ್‌ರವರ ಕಾಲದಲ್ಲಾಗಿರಬಹುದು. ಒಟ್ಟಿನಲ್ಲಿ ತೀರ್ಮಾನಗಳು ನಮ್ಮ ರಾಜ್ಯದ ಪರವಾಗಿ ಆಗಲಿಲ್ಲ. ಕೊನೆಗೆ, ಕಳೆದ ವರ್ಷ ಪಿ.ವಿ.ನರಸಿಂಹರಾವ್‌ರವರು ರಾಜ್ಯ ಸರ್ಕಾರಕ್ಕೆ ಒಂದು ಪತ್ರ ಬರೆಯುತ್ತಾರೆ. ಅದು ಪ್ರಜ್ಞಾನಪೂರ್ವಕವಾಗಿ ರಾಷ್ಟ್ರೀಯ ಹಿತದೃಷ್ಟಿಯಿಂದ ಮಾಡಿದಂಥ ಮೊದಲನೆಯ ಸಲಹೆ, ನಿರ್ದೇಶನ. ಮೊದಲನೇ ಸಾರಿ ಅಂತಹ ಒಂದು ನಿರ್ದೇಶನ ಈ ರಾಷ್ಟ್ರದ ಪ್ರಧಾನಮಂತ್ರಿಗಳಿಂದ ಈ ರಾಜ್ಯಕ್ಕೆ ಬಂತು, ಒಳ್ಳೆಯದು. ಅದೊಂದು ಸೂತ್ರವಾಗಿದ್ದು, ಈಗಲೂ ಕೂಡ ಆ ಸೂತ್ರವನ್ನು ಅನುಸರಿಸಬೇಕಾದಂಥ ಸಂದರ್ಭವಿದೆ. ಹಿಂದಿನ ಪ್ರಧಾನಮಂತ್ರಿಗಳು ಸರ್ವೋಚ್ಛ ನ್ಯಾಯಾಲಯದ ಆದೇಶವಿಲ್ಲದೆ ಮಾಡಬೇಕಾದಂಥ ಕೆಲಸ ಇದಾಗಿತ್ತು, ಮಾಡಿರಲಿಲ್ಲ. ಆದರೆ, ಸರ್ವೋಚ್ಛ ನ್ಯಾಯಾಲಯ ಒಂದು ಆದೇಶ ಕೊಟ್ಟಿತೆನ್ನುವ ಕಾರಣಕ್ಕಾಗಿ ಕೊನೆಯ ಪಕ್ಷ ಅವರು ಕರ್ನಾಟಕ ಹಾಗೂ ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಜೊತೆಗೆ ಎಲ್ಲಾ ರಾಷ್ಟ್ರೀಯ ವಿರೋಧ ಪಕ್ಷಗಳ ನಾಯಕರುಗಳನ್ನು ಕರೆದು ಮಾತುಕತೆ ನಡೆಸಿ, ಸಮಾಲೋಚನೆ ಮಾಡಿ ತದನಂತರ ತಜ್ಞರನ್ನು ಅಧ್ಯಯನ, ಸಮೀಕ್ಷೆಗೆ ಕಳುಹಿಸಿ ಅವರಿಂದ ವರದಿ ತರಿಸಿಕೊಂಡು ನೀರನ್ನು ಬಿಡತಕ್ಕಂಥ ಕೆಲಸ ಮಾಡಿದರು. ಅಂದರೆ, ಇಲ್ಲೊಂದು ಸರ್ಕಾರವಿದೆ, ಅಲ್ಲಿಯೂ ಕೂಡ ಸರ್ಕಾರವಿದೆ, ಇಲ್ಲೊಬ್ಬರು ಮುಖ್ಯಮಂತ್ರಿಗಳಿದ್ದು, ಒಂದು ಶಾಸನಸಭೆ ಇದೆ. ಶಾಸನ ಸಭೆಯಲ್ಲಿ ನಾವುಗಳು ತೆಗೆದುಕೊಂಡ ತೀರ್ಮಾನಗಳು ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬೇಕು, ಅವರನ್ನು ಗೌರವಿಸಬೇಕೆನ್ನುವ ಒಂದು ವಿಧಾನವನ್ನು ಅನುಸರಿಸಿ ಮಾಡಲಾಯಿತು. ಆದರೆ, ಕೇಂದ್ರದಲ್ಲಿ ನಮ್ಮ ಕರ್ನಾಟಕದವರೇ ಪ್ರಧಾನಮಂತ್ರಿಗಳಾಗಿದ್ದು, ಅವರದೇ ಪಕ್ಷ ಅಧಿಕಾರದಲ್ಲಿದ್ದು ಈಗ ಈ ದಿಸೆಯಲ್ಲಿ ಅನುಸರಿಸುತ್ತಿರತಕ್ಕ ವಿಧಾನವೇನು? ಅಲ್ಲಿಂದ ಅವರು ದೂರವಾಣಿ ಕರೆ ಮೂಲಕ ಹೇಳಿದರೆಂದು ನೀವು ಒಂದು ಚೀಟಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿದಿರಿ ಮತ್ತು ರಾತ್ರೋರಾತ್ರಿ ತೀರ್ಮಾನ ತೆಗೆದುಕೊಂಡು ತಮಿಳುನಾಡಿಗೆ ನೀರು ಬಿಟ್ಟಿರಿ. ರಾಜ್ಯದ ವಿಚಾರದಲ್ಲಿ ಬೊಮ್ಮಾಯಿಯವರು ಮತ್ತು ನೀವು ಸ್ನೇಹ ಸಂಬಂಧದಿಂದ ನಡೆದುಕೊಳ್ಳುವುದಕ್ಕೆ ಇವೊತ್ತು ಪಟೇಲರಲ್ಲ. ಈ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದೀರಿ. ಸ್ನೇಹ ಬೇರೆ ಇರುತ್ತದೆ, ಒಂದೇ ಪಕ್ಷದಲ್ಲಿರಬಹುದು.

ಆದರೆ, ಇಡೀ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುತ್ತಿರುವ ನೀವು ಇಂತಹ ಸಂದರ್ಭ ಸನ್ನಿವೇಶ ಬಂದಾಗ ಗಡಸು ಧ್ವನಿ ಎತ್ತಿದ್ದರೆ ಬಹುಶಃ ಇಷ್ಟೊಂದು ಸುಲಭವಾಗಿ ತೀರ್ಮಾನ ಮಾಡುತ್ತಿರಲಿಲ್ಲ. ನಮ್ಮಲ್ಲಿ ಬೇಕಾದಷ್ಟು ನೀರು ಇತ್ತೆಂದು ಹೇಳಿದರು. ಇದೇ ರೀತಿ ನಾವು ಬಹಳ ಸಲ ಹೇಳುತ್ತಲೇ ಬಂದಿದ್ದೇವೆ. ಇದನ್ನೆಲ್ಲಾ ನಾವು ಬಿಚ್ಚಿ ಹೇಳಬೇಕೇ? ಬಿಚ್ಚಿಹೇಳಲಿಲ್ಲ. ನಾವು ನ್ಯಾಯಾಲಯಗಳ, ಕೇಂದ್ರ ಸರ್ಕಾರದ ಮುಂದೆ ಇಟ್ಟಂಥ ವಾದ-ವಿವಾದಗಳ ದೃಷ್ಟಿಯಿಂದ ಅನೇಕ ವಿಷಯಗಳನ್ನು ಬಹಿರಂಗಪಡಿಸಲಿಲ್ಲ. ಇತ್ತ ಕಡೆ ಇರುವ ನಾವು ಕೂಡ ಬಹಿರಂಗಪಡಿಸಲಿಲ್ಲ, ನೀವು ಕೂಡ ಬಹಿರಂಗಪಡಿಸಲಿಲ್ಲ. ಇದು ಚನ್ನಬಸಪ್ಪನವರ ಕಾಲದಿಂದಲೂ ಇದೆ. ಅಲ್ಲದೆ, ದಿವಂಗತ ದೇವರಾಜ ಅರಸು, ದೇವೇಗೌಡರ ಸರ್ಕಾರದ ಕಾಲದಿಂದಲೂ ಎಲ್ಲರೂ ಕೂಡ ಇದನ್ನು ಒಂದು ವಿಧಿ-ವಿಧಾನದ ರೂಪದಲ್ಲಿ ಅನುಸರಿಸಿಕೊಂಡು ಬಂದಿದ್ದಾರೆ. ಶ್ರೀಮಾನ್ ನಂಜೇಗೌಡರು ಹೇಳಿದಂತೆ, ಇದು 1924ನೇ ಇಸವಿಗಿಂತಲೂ ಮುಂಚಿನಿಂದ ಕರ್ನಾಟಕಕ್ಕೆ ಸಂಕಟಗಳು ಬಂದ ಕಾಲಕ್ಕೆ ನಾವು ನೀರನ್ನು ಬಳಸಿಕೊಳ್ಳುವುದಕ್ಕಾಗುವುದಿಲ್ಲ. ಬಳಸಿಕೊಳ್ಳುವುದಕ್ಕಾಗದಿದ್ದರೆ ಈ ಕಾಲ ತಳ್ಳಬೇಕು. ಏಕೆಂದರೆ, ಇವೊತ್ತಿನವರೆಗೂ ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆಯೇ? ಇಲ್ಲ. ಯೋಜನೇತರ ಹಣದಲ್ಲಿಯೇ ಇವೊತ್ತು ರಾಜ್ಯದಲ್ಲಿ ಅಣೆಕಟ್ಟುಗಳನ್ನು ಕಟ್ಟಿದ್ದು, ಎಲ್ಲಾ ಯೋಜನೆಗಳನ್ನು ನಿರ್ಮಿಸಿ ರಾಜ್ಯದ ಜನತೆಗೆ ನೀರಿನ ಸೌಲಭ್ಯ ಕೊಡುವ ಕೆಲಸ ಮಾಡಿದ್ದೇವೆ. ಇದರಿಂದ ರಾಜ್ಯದ ಬೇರೆ ಅಭಿವೃದ್ಧಿ ಕೆಲಸ-ಕಾರ್ಯಗಳಿಗೇನೂ ಹೊಡೆತ ಬೀಳಲಿಲ್ಲ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೆ, ಬೊಮ್ಮಾಯಿಯವರ ಸ್ನೇಹಕ್ಕಾಗಿ ನೀರುಬಿಟ್ಟರೆಂದು ದಯವಿಟ್ಟು ತಪ್ಪು ಅರ್ಥಬರುವಂತೆ ಮಾಡಬೇಡಿ. ಬೊಮ್ಮಾಯಿಯವರು ನಮ್ಮ ವಕೀಲರೊಡನೆ ಮಾತನಾಡಿ ಈ ಸಲಹೆ ಕೊಟ್ಟರು, ಆ ರೀತಿ ಕೊಟ್ಟ ಸಲಹೆ ಸರಿಯೆಂದು ಇವತ್ತು ಸುಪ್ರೀಂಕೋರ್ಟ್ ನೀಡಿರತಕ್ಕ ತೀರ್ಪಿನಿಂದ ಗೊತ್ತಾಗುತ್ತದೆ. ಸುಪ್ರೀಮ್ ಕೋರ್ಟ್‌ನಿಂದೇನು ತೀರ್ಪು ಬಂದಿದೆ ಅದು ಬೊಮ್ಮಾಯಿಯವರು ಅಂದು ನಮಗೇನು ಸಲಹೆ ಕೊಟ್ಟಿದ್ದಾರೋ ಅದಕ್ಕೆ ಪೂರಕವಾಗಿದೆ.

ಶ್ರೀ ಕಾಗೋಡ್ ತಿಮ್ಮಪ್ಪ:- ಹಾಗಾದರೆ ಹಿಂದಿನ ಪ್ರಧಾನಮಂತ್ರಿಗಳು ಸುಪ್ರೀಮ್ ಕೋರ್ಟ್ ಕೊಟ್ಟ ತೀರ್ಮಾನದ ಪ್ರಕಾರ ಅವರು ಅಲ್ಲೇ ಕುಳಿತುಕೊಂಡು ತೀರ್ಮಾನ ಮಾಡಬಹುದಾಗಿತ್ತು. ನಿಮ್ಮನ್ನು ಅಲ್ಲಿಗೇಕೆ ಕರೆಯಿಸಬೇಕಾಗಿತ್ತು. ಇಲ್ಲಿನ ಮುಖ್ಯಮಂತ್ರಿಯವರನ್ನು ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಮತ್ತು ಬೇರೆ ಬೇರೆ ವಿರೋಧ ಪಕ್ಷದ ನಾಯಕನ್ನೇಕೆ ಕರೆದು ಸಮಾಲೋಚನೆ ಮಾಡಬೇಕಾಗಿತ್ತು? ಏಕೆಂದರೆ ರಾಜ್ಯಗಳಿವೆ, ಅಲ್ಲಿನ ಮುಖ್ಯಮಂತ್ರಿಗಳನ್ನು ಗೌರವಿಸಬೇಕು, ಅವರುಗಳು ಅಭಿಪ್ರಾಯವನ್ನು ಕೇಳಬೇಕೆಂದು ತಮ್ಮನ್ನೆಲ್ಲ ಕರೆಸಿ ಸಮಾಲೋಚನೆ ಮಾಡಿದ್ದರು.

ಅಧ್ಯಕ್ಷರು:- ಮಾನ್ಯ ಕಾಗೋಡು ತಿಮ್ಮಪ್ಪನವರೆ, ತಮಗೆ ಸಹಾಯ ಮಾಡುವುದಕ್ಕೆ, ಮುಖ್ಯಮಂತ್ರಿಗಳು ಏನು ಹೇಳಿದ್ದರೆಂದರೆ, ಮಾನ್ಯ ಬೊಮ್ಮಾಯಿಯವರು ನಮ್ಮ ವಕೀಲರ ಜೊತೆ ಚರ್ಚೆ ಮಾಡಿ ಅನಂತರ ಮುಖ್ಯಮಂತ್ರಿಗಳಿಗೇನು ಸಲಹೆಯನ್ನು ಕೊಟ್ಟರೋ ಅದಕ್ಕೆ ಅನುಗುಣವಾಗಿ ನೀರು ಬಿಡುವ ಬಗ್ಗೆ ತೀರ್ಮಾನ ತೆಗೆದುಕೊಂಡರು. ಬೊಮ್ಮಾಯಿಯವರು ಸಲಹೆ ಕೊಟ್ಟದ್ದು, ವಕೀಲರು ಬೊಮ್ಮಾಯಿಯವರಿಗೆ ಹೇಳಿರತಕ್ಕದ್ದು, ಮುಖ್ಯಮಂತ್ರಿಗಳು ತೆಗೆದುಕೊಂಡಿರುವ ತೀರ್ಮಾನ ಸರಿಯೆಂದು ಇವತ್ತು ಸುಪ್ರೀಂ ಕೋರ್ಟ್‌ನವರು ನೀಡಿರತಕ್ಕ ತೀರ್ಮಾನದಲ್ಲಿ ಉಚ್ಛಾರವಾಗಿದೆಯೆಂದು ಅವರು ಹೇಳಿದ್ದಾರೆ. ತಮಿಳುನಾಡಿನವರು ಸುಪ್ರೀಂಕೋರ್ಟ್‌ಗೆ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ನ್ಯಾಯಮೂರ್ತಿ ಅಹಮದಿಯವರು ಏನು ತೀರ್ಮಾನ ನೀಡಿದ್ದಾರೆಂಬುದನ್ನು ಗಮನಿಸಿದ್ದೀರೋ?

ಶ್ರೀ ಕಾಗೋಡು ತಿಮ್ಮಪ್ಪ:- ಗಮನಿಸಿದ್ದೇನೆ. One of the reasons ಹೇಳಿದ್ದಾರೆ.

ಅಧ್ಯಕ್ಷರು:- ಇನ್ನೊಬ್ಬರು ನ್ಯಾಯಮೂರ್ತಿ ಇಲ್ಲವೆಂದು ಹೇಳುತ್ತಾ ಅದರ ಜೊತೆಯಲ್ಲಿಯೇ ಈಗಾಗಲೇ ರಿಲೀಫ್ ಸಿಕ್ಕಿದೆ. By way of release of 5 TMC of water, Tamil Nadu has already got the required relief ಎಂದು ಹೇಳಿದ್ದಾರೆ. I hope that is the order.

ಶ್ರೀ ಕಾಗೋಡು ತಿಮ್ಮಪ್ಪ:- ಹಾಗಿದ್ದರೆ ತಮಿಳುನಾಡಿನವರು ಮತ್ತು ಇವರು ಕುಳಿತುಕೊಂಡು ಮಾತುಕತೆಯ ಮೂಲಕ ಒಮ್ಮತದ ನಿರ್ಧಾರಕ್ಕೆ ಬಂದುಬಿಡಲಿ. ಆಗ ಟ್ರಿಬ್ಯೂನಲ್ ತಾನೇ ತಾನಾಗಿ ರದ್ದಾಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್:- ಆದರೆ ಮಾನ್ಯ ಹೆಚ್.ಎನ್.ನಂಜೇಗೌಡರು ಭಾಷಣ ಮಾಡುತ್ತ ಹೇಳಿದ ಹಾಗೆ Don't try to find fault with me. ಇಂಥ ಒಂದು ಅವಕಾಶ ಹಿಂದೆ ಯಾವಾಗಲೂ ಇರಲಿಲ್ಲ. ಹಿಂದೆ ಬೇರೆ ಪ್ರಧಾನಮಂತ್ರಿಯವರು ಇದ್ದರು, ಅಲ್ಲೊಂದು ಸರ್ಕಾರವಿರುತ್ತಿತ್ತು, ಇಲ್ಲೊಂದು ಸರ್ಕಾರವಿರುತ್ತಿತ್ತು, ಏನೇನೋ ಗೊಂದಲಗಳು ಇರುತ್ತಿದ್ದವು. ಆದರೆ ಈಗ ಇರತಕ್ಕ ಅವಕಾಶ ಇರಲಿಲ್ಲ. ಈಗ ವೀರಾವೇಶದ ಮಾತುಗಳನ್ನಾಡುವುದು ಬೇಡ. ಇದೊಂದು ವಿಶೇಷವಾದ ಸಂದರ್ಭವಿದೆ, ಅದಕ್ಕಾಗಿ ತಮಿಳುನಾಡಿನವರಿಗೂ ನಮಗೂ ಏನು ಶತಮಾನಗಳಿಂದ ವೈರತ್ವವಿದೆಯೆಂದಾಗಲೀ ಅಥವಾ ಅವರು ನಮ್ಮ ಮೇಲೆ ದಂಡೆತ್ತಿಬರುವಂತಾಗುವುದು ಬೇಡ, ಸಾಧ್ಯವಾದರೆ ಕರುಣಾನಿಧಿಯಯವರಿಗೆ ಅಲ್ಲಿನ ವಿರೋಧ ಪಕ್ಷದವರು ಆ ರೀತಿಯಾದ ಸಹಕಾರ ಕೊಡದಿದ್ದರೂ ಚಿಂತೆ ಇಲ್ಲ, ಕರ್ನಾಟಕ ಸರ್ಕಾರಕ್ಕೆ ವಿರೋಧ ಪಕ್ಷದವರು ಸಹಕಾರ ಕೊಡುತ್ತಿದ್ದೀರಿ. ಈ ಸಂದರ್ಭವನ್ನು ಉಪಯೋಗ ಮಾಡಿಕೊಂಡು ಇದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕೆಂಬುದೇ ನಮ್ಮ ಉದ್ದೇಶ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ, ತಮಿಳುನಾಡು ಸರ್ಕಾರ

ರಾಜಕೀಯವಾಗಿ ಇಂದು ಯಾವ ಸ್ಥಾನದಲ್ಲಿದೆಯೋ, ಅದು ಎಐಡಿಎಂಕೆಯಾಗಿರಬಹುದು, ಡಿಎಂಕೆಯಾಗಿರಬಹುದು, ಅವರು ಕಳೆದ 1972ನೇ ಇಸವಿಯಿಂದ ಇದೇ ರೀತಿ ಇದ್ದಾರೆ. ನಾವು ಹೀಗೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಒಂದಾಗಿ ಒಂದೇ ರೀತಿಯಾದ ಅಭಿಪ್ರಾಯವನ್ನು ರೂಢಿಸಿಕೊಂಡು ಬಂದಿದ್ದೇವೋ ಅದೇ ರೀತಿ ತಮಿಳುನಾಡಿನಲ್ಲಿ ಸಹ ಯಾವುದೇ ಪಕ್ಷ ಅಧಿಕಾರದಲ್ಲಿಲಿ ಅವರೂ ಒಂದಾಗಿ ಒಂದೇ ವಾದವನ್ನಿಟ್ಟುಕೊಂಡು ಬಂದಿದ್ದಾರೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಯವರು):- ಮಾನ್ಯ ಅಧ್ಯಕ್ಷರೆ, 1972ನೇ ಇಸವಿಯಿಂದ ಈ ರೀತಿಯಾದ ಚರ್ಚೆಗಳು ನಡೆದುಕೊಂಡು ಬರುತ್ತಲೇ ಇವೆ. ನೀರನ್ನು ಬಿಟ್ಟುಕೊಂಡು ಬರುತ್ತಲೇ ಇದ್ದೇವೆ. ಬೇರೆ ಬೇರೆ ಸಂದರ್ಭಗಳಲ್ಲಿ ಎರಡು, ಮೂರು, ಐದು ಟಿ.ಎಂ.ಸಿ ನೀರನ್ನು ಬಿಟ್ಟಿದ್ದಾರೆ. ಶ್ರೀಮಾನ್ ಎಂ.ಜಿ.ಆರ್.ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಈ ವಿವಾಧ ಒಂದು ಅಂತಿಮ ತೀರ್ಮಾನಕ್ಕೆ ಬರುವ ಮಟ್ಟಕ್ಕೆ ಬಂದಿತ್ತು. ಅವತ್ತು ಟ್ರಿಬ್ಯೂನಲ್ ರಚನೆಯಾದದ್ದು ಅದರಿಂದ ಮಧ್ಯಂತರ ಆದೇಶಬಂದದ್ದು ಆ ಸನ್ನಿವೇಶಗಳು ಬೇರೆ. ಇವತ್ತು ಕೇಂದ್ರದಲ್ಲಿ ನಮ್ಮವರೇ ಆದಂಥ ಪ್ರಧಾನಿ ಇದ್ದಾರೆ. ತಮಿಳುನಾಡಿನಲ್ಲಿ ಬೇರೆ ಪಕ್ಷದ ಸರ್ಕಾರವಿದೆ. ಈ ಹಿನ್ನೆಲೆಯನ್ನು ನೋಡಬೇಕು. ಅದನ್ನು ಬಿಟ್ಟು ಇಲ್ಲಿ ಕುರ್ಚಿ ಉಳಿಸಿಕೊಳ್ಳಲು, ಕೇಂದ್ರದಲ್ಲಿ ಕುರ್ಚಿ ಉಳಿಸಿಕೊಳ್ಳಲು ನೀರು ಬಿಟ್ಟುಬಿಟ್ಟಿದ್ದಾರೆಂದು ಹೇಳತಕ್ಕದ್ದು ಸರಿಯಾದುದಲ್ಲ. ಈ ರಾಜ್ಯದ ಹಿತವನ್ನು ಕಾಪಾಡಬೇಕು ಎನ್ನತಕ್ಕದ್ದು ನಮ್ಮಿಬ್ಬರ ಉದ್ದೇಶವಾಗಿದೆ. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದ್ದರಿಂದ ಮಾತುಕತೆಗೆ ಒಂದು ಒಳ್ಳೆಯ ವಾತಾವರಣವನ್ನು ಮಾಡಿಕೊಂಡು, ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಇತ್ಯರ್ಥಮಾಡಿಕೊಳ್ಳಬೇಕು ಎಂಬುದು ನಮ್ಮೆಲ್ಲರ ಅಭಿಪ್ರಾಯ, ಆ ದಿಕ್ಕಿನಲ್ಲಿ ಇದು ಪೂರಕವಾದಂಥ ಹೆಜ್ಜೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ನಮ್ಮವರೇ ಪ್ರಧಾನಮಂತ್ರಿಗಳಾಗಿದ್ದ ಮೇಲೆ ಅದರಲ್ಲೂ ಕಾವೇರಿ ಜಲಾನಯನ ಪ್ರದೇಶದಿಂದ ಹೋರಾಟ ಮಾಡಿದ್ದವರೇ ಅಲ್ಲಿದ್ದಮೇಲೆ ಎರಡೂ ರಾಜ್ಯಗಳ ಮಧ್ಯೆ ಬಾಂಧ್ಯವ್ಯ ಬೆಳೆದು ಈ ಸಮಸ್ಯೆಯನ್ನು ನಮ್ಮನಮ್ಮ ಮಧ್ಯದಲ್ಲೇ ಬಗೆಹರಿಸಿಕೊಳ್ಳಬೇಕು ಎನ್ನತಕ್ಕ ಪ್ರಾಮಾಣಿಕತನ ನಿಮ್ಮ ಹೃದಯದಿಂದ ಮೂಡಿಬಂದಿದ್ದರೆ, ಬಹುಶಃ ಅವರು ಎಸ್.ಎಲ್.ಪಿ.ಯನ್ನು ಹಾಕತಕ್ಕ ಕೆಲಸವನ್ನು ಮಾಡಲು ಹೊರಟ ಸುದ್ದಿ ಕೇಳಿದ ತಕ್ಷಣ ನಿಮ್ಮ ಎದೆ ನಡುಗತಕ್ಕ ಕೆಲಸವೇಕೆ ಪ್ರಾರಂಭವಾಯಿತು? ಹಾಗಿದ್ದಮೇಲೆ ತಾವು ಮೊದಲೆ ಮಾತುಕತೆಯ ಮೂಲಕ ನೀರನ್ನು ಬಿಡುಗಡೆ ಮಾಡಬಹುದಾಗಿತ್ತು. ತಮ್ಮ ಹತ್ತಿರ ಇಂಟಲಿಜೆನ್ಸ್ ಇದೆ. ನೀವು ಅಲ್ಲಿನ ಮುಖ್ಯಮಂತ್ರಿಯವರ ಜೊತೆ ಮಾತನಾಡಿ, ಅಥವಾ ಅವರು ನಿಮ್ಮ ಜೊತೆ ಮಾತನಾಡಿ, ಅಥವಾ ಪ್ರಧಾನಮಂತ್ರಿಗಳು ಕೇಂದ್ರದ ಸಂಬಂಧಪಟ್ಟ ಮಂತ್ರಿಗಳು ತಮ್ಮಿಬ್ಬರನ್ನು ಕರೆಸಿಕೊಂಡು, ನಮ್ಮ ನಿಮ್ಮ ಹೊಸ ಸ್ನೇಹ ಸಂಬಂಧ ಬೆಳೆದಿದೆ, ಈ ಸನ್ನಿವೇಶದಲ್ಲಿ ರಾಷ್ಟ್ರದಲ್ಲಿ ಕಚ್ಚಾಡತಕ್ಕದ್ದು ಸೂಕ್ತವಲ್ಲ, ಆದ್ದರಿಂದ ನಾವು ನ್ಯಾಯಾಲಯದ ಹೊರಗಡೆ

ಇದರ ಬಗ್ಗೆ ತೀರ್ಮಾನ ಮಾಡಿಕೊಳ್ಳಬೇಕೆಂದು ಉತ್ಸಾಹದಿಂದ ನಿಮ್ಮಿಬ್ಬರನ್ನು ಕರೆದು ಮಾತುಕತೆ ಮಾಡಿ ಒಪ್ಪಂದಕ್ಕೆ ಬಂದು ನೀರನ್ನು ಬಿಡಿಸಿದ್ದರೆ ಆಗ ಕರ್ನಾಟಕ ರಾಜ್ಯಕ್ಕೆ ಕೀರ್ತಿ ಬರುತ್ತಿತ್ತು, ನಿಮ್ಮನ್ನೂ ಕೇಂದ್ರ ಸರ್ಕಾರ ಗುರುತಿಸಿದಂತಾಗುತ್ತಿತ್ತು. ಆದರೆ ಈಗ ನಿಮ್ಮನ್ನು ಯಾರಾದರೂ ಗುರುತಿಸಿದ್ದಾರೆಯೇ? ಮಾತು ಎತ್ತಿದರೆ ತೋಳನ್ನು ಎತ್ತಬೇಕಾಗುತ್ತದೆ ದೊಣ್ಣೆ ತೆಗೆದುಕೊಳ್ಳಬೇಕಾಗುತ್ತದೆಂದು ಹೇಳುತ್ತೀರಿ. ಇಲ್ಲೇಕೆ ಆ ರೀತಿಯಾದ ಗಂಡಸುತನ ಹೋಗಿಬಿಟ್ಟಿತು. ಪಕ್ಷದಿಂದ ಹೊರಕ್ಕೆ ಹಾಕಲ್ಪಟ್ಟಿರುವ ರಾಮಕೃಷ್ಣ ಹೆಗಡೆಯವರು ಪಟೇಲರ ಸರ್ಕಾರಕ್ಕೆ ಏನೂ ಚ್ಯುತಿಯಿಲ್ಲವೆಂದು ಹೇಳುತ್ತಾರೆ. ನಿಮ್ಮ ಸಹಾಯ ಬೇಡ, ನಾನು ಹಾಗೆಯೇ ಬದುಕುತ್ತೇನೆ, ನನ್ನ ಸರ್ಕಾರ ಉಳಿಯಲು ಸಾಧ್ಯವಿದೆಯೆಂದಾದರೂ ತಾವು ಹೇಳುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದು ನನ್ನ ಸರ್ಕಾರ ಯಾರು ಕೈಬಿಡಬೇಡಿ ಎಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಸ್ಪಷ್ಟವಾಗಿ ಹೇಳಿದ್ದಾರೆ. ಈ ಸರ್ಕಾರಕ್ಕೆ ಬೆಂಬಲ ಕೊಡಿ, ದೇವೇಗೌಡರು ಈ ಸರ್ಕಾರವನ್ನು ಕೆಡವಲು ಪ್ರಯತ್ನ ಮಾಡುತ್ತಿದ್ದಾರೆ ಆದ್ದರಿಂದ ಯಾರೂ ಕೂಡ ಸರ್ಕಾರವನ್ನು ಕೆಡವಲು ಹೋಗಬೇಡಿ ಎಂದು ಅವರು ಹೇಳುತ್ತಿದ್ದಾರೆ. ಆದರೆ ನೀವು ನಮ್ಮವರೇ ಪ್ರಧಾನಮಂತ್ರಿಗಳಾಗಿದ್ದಾರೆಂದು ಹೇಳುತ್ತೀರಿ. ರಾಮಕೃಷ್ಣ ಹೆಗಡೆಯವರು ಇದು ನನ್ನ ಸರ್ಕಾರವೆಂದು ಹೇಳುತ್ತಾರೆ. ನಮ್ಮ ಪ್ರಧಾನಮಂತ್ರಿಗಳು, ನಮಗೆ ಬೇಕಾದವರೂ ಅಲ್ಲಿದ್ದಾರೆಂದು ಹೇಳಿದ್ದೀರಲ್ಲ ಅದಕ್ಕೆ ನಾನು ಇದನ್ನು ಹೇಳಿದೆ.

ಶ್ರೀ ಜೆ.ಹೆಚ್.ಪಟೇಲ್:- ನನ್ನ ಮತ್ತು ದೇವೇಗೌಡರ ಸಂಬಂಧ ಮತ್ತು ರಾಮಕೃಷ್ಣ ಹೆಗಡೆಯವರಿಗೆ ನಮ್ಮ ಸರ್ಕಾರದ ಬಗ್ಗೆ ಏನು ಅಭಿಪ್ರಾಯವಿದೆ ಎಂಬುದು ನನಗೆ ಗೊತ್ತು. ನಾನೇ ಅವುಗಳ ಬಗ್ಗೆ ಚಿಂತೆಮಾಡುವುದಿಲ್ಲ, ನೀವೇಕೆ ಚಿಂತೆ ಮಾಡುತ್ತೀರಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಲ್ಲಿ, ತಮ್ಮ ಸರ್ಕಾರವಿದೆಯೆಂದು ಜನರಿಗೆ ಗೊತ್ತಾಗಬೇಕಲ್ಲವೇ ಆದಕ್ಕಾಗಿ ನಾವು ಚಿಂತೆ ಮಾಡಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ನಿಮ್ಮ ಹೊಸ ಸಂಬಂಧಗಳು ಏರ್ಪಟ್ಟಾಗ ನೀವು ನೀವೇ ಕುಳಿತುಕೊಂಡು ಕೋರ್ಟ್‌ಗೆ ಹೋಗದೆ ನೀವು ನೀವೆ ತೀರ್ಮಾನ ಮಾಡಿಕೊಂಡಿದ್ದರೆ, ಅದನ್ನು ನಾವು ಒಪ್ಪಿಕೊಳ್ಳುತ್ತಿದ್ದೆವು. ನಿಮಗೆ ಶಹಬಾಸ್‌ಗಿರಿಯನ್ನೂ ಕೊಡುತ್ತಿದ್ದೆ. ಆದರೆ ಇದು ಹಾಗಲ್ಲ. ಕಾಡಿನಲ್ಲಿ ಹುಲಿ ಏನು ಮಾಡುತ್ತದೆಂದರೆ, ಮಂಗನನ್ನು ತಿನ್ನಬೇಕೆಂದು ಆಸೆ ಬರುತ್ತದೆ, ಮರದ ಮೇಲಿದ್ದ ಮಂಗಗಳು ಹುಲಿಯನ್ನು ಕಂಡು ಕೂಗುತ್ತವೆ, ಮತ್ತು ಕೆಳಕ್ಕೆ ಬರುವುದು ಮತ್ತೆ ಮೇಲಕ್ಕೆ ಹೋಗುವುದನ್ನು ಮಾಡುತ್ತಿರುತ್ತವೆ. ಕೊನೆಗೆ ಹುಲಿ ಒಂದು ಸಾರಿ ಗರ್ಜಿಸಿಬಿಡುತ್ತದೆ ಆಗ ಮರದ ಮೇಲಿದ್ದ ಮಂಗ ಕೈಬಿಟ್ಟು ಕೆಳಕ್ಕೆ ಬಿದ್ದುಬಿಡುತ್ತದೆ, ಹುಲಿ ಅದನ್ನು ಹಿಡಿದುಬಿಡುತ್ತದೆ. ಹಾಗೆ ತಮಿಳುನಾಡಿನವರು ಅಲ್ಲಿ ಕುಳಿತುಕೊಂಡು ಗರ್ಜನೆ ಮಾಡಿದ ಕೂಡಲೆ ಕರ್ನಾಟಕ ಮಂಗ ಕೆಳಕ್ಕೆ ಬಿದ್ದು ಹುಲಿಯ ಬಾಯಿಗೆ ಸಿಕ್ಕಿದಂತಾಗಿದೆ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೆ, ಅವರು ಹುಲಿಯೂ ಅಲ್ಲ, ನಾವು ಮಂಗಗಳೂ ಅಲ್ಲ. ಮೊದಲು ತಾವು ಹೇಳಿದ ಧಾಟಿ ಸರಿಯಾಗಿತ್ತು. ನೀವು ನೀವು ಒಟ್ಟಿಗೆ ಕೂಡಿ ಯಾವುದೇ ತೊಂದರೆಯಿಲ್ಲದೆ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಧಾನಮಂತ್ರಿಗಳ ಸಹಾಯವನ್ನು ಪಡೆದು ಬಗೆಹರಿಸಿಕೊಳ್ಳಲಿ ಎಂದು. ಆ ಕಾರಣದಿಂದ ನಾವು ತೋಳನ್ನು ಮಡಿಸಬಾರದೆಂದು ಹೇಳಿದ್ದು. ಹುಲಿ ಗರ್ಜಿಸಿದರೆ ಏನು ಮಾಡಬೇಕೋ ನಮಗೆ ಗೊತ್ತಿದೆ. ಸರ್ಕಸ್‌ನಲ್ಲಿರುವ ಹುಲಿಗಳೂ ಇರುತ್ತವೆ, ಕಾಡಿನಲ್ಲಿರುವ ಹುಲಿಗಳೂ ಇರುತ್ತವೆ. ಸರ್ಕಸ್‌ನಲ್ಲಿ ಹುಲಿ, ಮಂಗ, ರಿಂಗ್‌ಮಾಸ್ಟರ್ ಎಲ್ಲರೂ ಇರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಅಧ್ಯಕ್ಷರೇ ನೀರನ್ನು ಬಿಟ್ಟಂತಹ ಸನ್ನಿವೇಶದಿಂದ ಜನರ ಮನಸ್ಸಿಗೆ ಏನು ತಂದಿದೆ ಎಂದರೆ, ಕೇಂದ್ರ ಸರ್ಕಾರಕ್ಕೆ ಇಲ್ಲಿ ಒಂದು ಕರ್ನಾಟಕ ರಾಜ್ಯವಿದೆ, ಇದಕ್ಕೆ ಒಬ್ಬ ಮುಖ್ಯಮಂತ್ರಿಗಳಿದ್ದಾರೆ, ಶಾಸನ ಸಭೆ ಇದೆ, ಎನ್ನುವ ರೀತಿಯಲ್ಲಿ ವರ್ತಿಸಿಲ್ಲ. ಅವರು ತಮಿಳುನಾಡಿನ ಪರವಾಗಿ ಹೇಳಬೇಕಾದರೆ, ಹೇಳುವ ವಿಧಾನದಲ್ಲಿ ಹೇಳಬೇಕು, ಗೌರವ ಪೂರ್ವಕವಾಗಿ ಹೇಳಬೇಕು, ಜನರಿಗೂ ಕೂಡ ಇದು ಹೌದು ಎನ್ನಿಸಬೇಕು, ಆ ರೀತಿಯಾಗಿ ಜನರ ಮನಸ್ಸನ್ನು ಸರ್ಕಾರದ ಮನಸ್ಸನ್ನು ಒಲಿಸಿಕೊಂಡು ಈ ಕೆಲಸವನ್ನು ಮಾಡಬೇಕು ಎನ್ನತಕ್ಕಂತಹ ಒಂದು ಪ್ರಯತ್ನ ಇದರಲ್ಲಿ ನಡೆದಿಲ್ಲ. ಅದರಿಂದಾಗಿ ನಮಗೆ ಸಂಶಯ ಬರುತ್ತಿದೆ, ಕರ್ನಾಟಕ ರಾಜ್ಯಕ್ಕೆ ಇವತ್ತು ಏನು ಒಂದು ಗೌರವ ಸಿಗಬೇಕು, ಪ್ರತಿಷ್ಠೆ ಸಿಗಬೇಕಾಗಿತ್ತು ಇದಕ್ಕೆ ಆತಂಕ ಬಂದಿದೆ ಎಂದು ನಾನು ಇವತ್ತು ನಿಮ್ಮ ಮೇಲೆ ಮಾಡತಕ್ಕಂತಹ ಆಪಾದನೆ. ಆ ರೀತಿಯಾಗಿ ಸುಲಭವಾಗಿ ಒಬ್ಬ ಮುಖ್ಯಮಂತ್ರಿ ಈಲ್ಡ್ ಆಗುತ್ತಾ ಹೋದರೆ ನಾಳೆ ಇನ್ನು ಹೇಳುತ್ತಾರೆ, ಈಗಾಗಲೇ ಐದು ಟಿ.ಎಮ್.ಸಿ. ನೀರು ಹೋಗಿದೆ, ನಾವು ಚರ್ಚೆ ಮಾಡುತ್ತಿದ್ದೇವೆ, ಮೂರು ದಿವಸದಿಂದ ಹೋಗುತ್ತಿದೆ, ಹೋಗಿ ಆಯಿತು. ನೀವು ಅಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರನ್ನು ಬೇರೆ ಬೇರೆ ವಿಚಾರದಲ್ಲಿ ಚರ್ಚೆಗೆ ಕರೆದಿದ್ದೀರಿ, ಯಾವ ಸಂದರ್ಭದಲ್ಲಿ ಕಾವೇರಿ ವಿಚಾರ ಅಥವಾ ಕೃಷ್ಣಾ ನದಿಯ ವಿಚಾರದಲ್ಲಿ ಯಾವ ಸರ್ಕಾರ ಯಾವ ಸಂದರ್ಭದಲ್ಲಿ ವಿರೋಧ ಪಕ್ಷಗಳ ಜೊತೆ ಸಮಾಲೋಚನೆ ಮಾಡದೆ ದಿಢೀರ್ ತೀರ್ಮಾನ ಮಾಡಿರತಕ್ಕಂತಹ ಸನ್ನಿವೇಶ ಯಾವುದಿದೆ ಹೇಳಿ, ಯಾವುದಾದರೂ ಇದ್ದರೆ ಇದು ಒಂದೇ. ಆದ್ದರಿಂದ ಇದೇ ವಿಚಾರವನ್ನು ನೀವು ಅಲ್ಲಿ ಕುಳಿತಂತಹ ಸಂದರ್ಭದಲ್ಲಿ ಈ ರೀತಿಯ ಅಭಿಪ್ರಾಯ ಬಂದಿದೆ. ನೀವು ಅಲ್ಲಿ ಚೀಟಿ ಕೊಟ್ಟಿರಿ ಬೇರೆ ವಿಚಾರದಲ್ಲಿ ವಿರೋಧ ಪಕ್ಷದವರನ್ನು ಕರೆಸಿದಿರಿ, ಸಭೆಗೆ ಕರೆದಿರಿ, ಈ ಸನ್ನಿವೇಶ ಬಂದಿದೆ ಏಕೆಂದರೆ ಅನೇಕ ವಿಚಾರಗಳನ್ನು ಸದನದಲ್ಲಿ ಚರ್ಚೆ ಮಾಡದೆ ಇದ್ದರೂ ಕೂಡ ಕಾವೇರಿ ವಿಚಾರ ಬಂದಾಗ ವಿರೋದ ಪಕ್ಷಗಳ ಜೊತೆ ಸರ್ಕಾರಗಳು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡು ಅವರ ವಿಶ್ವಾಸವನ್ನು ತೆಗೆದುಕೊಂಡು ನೀರನ್ನು ಬಿಡತಕ್ಕಂಥದ್ದು ಅಥವಾ ವಿವಾದಕ್ಕೆ ಹೋಗತಕ್ಕಂಥದ್ದರಲ್ಲಿ ಯಾವ ಸ್ಟ್ಯಾಂಡನ್ನು ನಾವು ತೆಗೆದುಕೊಳ್ಳಬೇಕು, ಎನ್ನುವ ವಿಚಾರ ಬಂದಾಗ, ಎಲ್ಲಾ ಒಮ್ಮತದ ತೀರ್ಮಾನಕ್ಕೆ ಬಂದು ತೀರ್ಮಾನ ಹಂತ

ಹಂತವಾಗಿ ಮಾಡಿಸಿದ್ದೀರಿ, ಈ ವಿಚಾರದಲ್ಲಿ ಏಕೆ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ ಎಂದು ಪ್ರಶ್ನೆ ಬರುತ್ತದೆ.

SRI J.H.PATEL:- Technically I agree, ಕೆಲವು ಸಾರಿ ನಾವು ಅವಸರವಾಗಿ ಆಸ್ಪತ್ರೆಗೆ ಹೋಗಬೇಕಾಗಿರುತ್ತದೆ, ನಿಮ್ಮ ಮನೆ ಮುಂದೆ ಒಂದು ಬೈಸಿಕಲ್ ಇರುತ್ತದೆ, ನಾನು ತೆಗೆದುಕೊಂಡು ಹೋಗುತ್ತೇನೆ, ನನಗೆ ಕೇಳದೆ ಏಕೆ ತೆಗೆದುಕೊಂಡು ಹೋದೆ ಎಂದು ಹೇಳಿದರೆ, ನಿನಗೆ ಕೇಳದೇ ಇದ್ದರೂ ನಡೆಯುತ್ತದೆ ಎಂದು ಗೊತ್ತಿತ್ತು ಅದಕ್ಕೆ ತೆಗೆದುಕೊಂಡು ಹೋದೆ ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಇದರಲ್ಲಿ ಅಂತಹ ಗಡಿಬಿಡಿ ಇರುವುದು ಏನು, ಹಾಗೆ ಹೋಗುವುದು ಏನು, ಒಂದು ದಿವಸ ಅಥವಾ ಅರ್ಧ ದಿವಸ ತಡವಾಗಿದ್ದರೆ ಕೊಳ್ಳೆ ಹೊಡೆದು ಹೋಗುತ್ತಿತ್ತೇ, ಹಾಗಾದರೆ ನೀವು ಒಂದು ಕೆಲಸ ಮಾಡಿ, ಇನ್ನು ಮೇಲೆ ಯಾವ ವಿರೋಧ ಪಕ್ಷದವರನ್ನೂ ಈ ವಿಚಾರದಲ್ಲಿ ಕೇಳಬೇಡಿ, ಅವರ ಪಾಡಿಗೆ ಅವರಿಗೆ ಬಿಟ್ಟು ಬಿಡಿ. ಶ್ರೀ ಬಂಗಾರಪ್ಪನವರು ಒಂದು ಆರ್ಡಿನೆನ್ಸ್ ತಂದಿದ್ದರು, ಅವರು ವಿರೋಧ ಪಕ್ಷದವರನ್ನು ಕೇಳಿರಲಿಲ್ಲವೇ? ಅವರು ಎಲ್ಲರ ಒಮ್ಮತದಿಂದ, ಸರ್ವಾನುಮತದಿಂದ ಇಲ್ಲಿ ಪಾಸ್ ಮಾಡಲಿಲ್ಲವೇ? ಏಕೆಂದರೆ ಒಳ್ಳೆಯದಾಗಲಿ, ಕೆಟ್ಟದ್ದಾಗಲಿ ಇದು ಯಾರ ಒಬ್ಬರ ಪ್ರಶ್ನೆ ಅಲ್ಲ, ಒಂದು ಪ್ರದೇಶದ ಪ್ರಶ್ನೆ ಅಲ್ಲ, ಒಂದು ಜಿಲ್ಲೆ ಪ್ರಶ್ನೆ ಅಲ್ಲ ಇಡೀ ಕರ್ನಾಟಕ ರಾಜ್ಯದ ಪ್ರಶ್ನೆ ಇದು. ಅದಕ್ಕೋಸ್ಕರ ಇವತ್ತು ಎಲ್ಲರಿಗೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕೆಂದು ಬಂದಿದ್ದೇವೆ. ಇಲ್ಲದೆ ಇದ್ದರೆ, ನಿಮ್ಮ ಊರಿಗೆ ಕಾವೇರಿ ನೀರು ಬರುತ್ತದೆಯೇ, ನನಗೆ ಬರುತ್ತದೆಯೇ? ಇದು ರಾಜ್ಯದ ಪ್ರಶ್ನೆ. ರಾಜ್ಯದ ಪ್ರತಿಷ್ಠೆಯ ಪ್ರಶ್ನೆ. ಏಕೆಂದರೆ ಕಾವೇರಿ ಮತ್ತು ಕೃಷ್ಣ ಎಂದರೆ ನಮ್ಮ ಇಡೀ ಕರ್ನಾಟಕ ರಾಜ್ಯದ ಜೀವಾಳ ಇದ್ದ ಹಾಗೆ. ನಮ್ಮ ಆರ್ಥಿಕ ವ್ಯವಸ್ಥೆ ಅದರ ಮೇಲೆ ನಿಂತಿದೆ. ಆದ್ದರಿಂದ ಈ ಕೆಲಸದಲ್ಲಿ ನೀವು ಪ್ರಾರಂಭದಲ್ಲೇ ತಪ್ಪಿದರಲ್ಲಾ ಈ ತಪ್ಪಿಗೆ ನೀವು ಖಂಡಿತವಾಗಿಯೂ ವಿರೋಧ ಪಕ್ಷಗಳಿಗೆ ಕ್ಷಮೆ ಕೇಳಲೇಬೇಕು.

ಅಧ್ಯಕ್ಷರು:- ನೀವು ಎದ್ದು ನಿಂತಾಗ ನನ್ನ ಆಲೋಚನೆ ಬೇರೆ ಬೇರೆ ಇತ್ತು. ನೀವೆಲ್ಲ ಹಳೆಯ ಗೆಳೆಯರು ಏನೋ ಅವರ ಬಗ್ಗೆ ಒಂದೆರಡು ಒಳ್ಳೆಯ ಮಾತು ಹೇಳುತ್ತಿದ್ದೀರಿ, ಎಂದು ತಿಳಿದಿದ್ದಾರೆ ಹೋಗಿ ಹೋಗಿ ನೀವು ಅವರು ಕ್ಷಮೆ ಕೇಳಲಿ ಎಂದು ಹೇಳುತ್ತಿದ್ದೀರಿ... ಎಂತಹ ಸ್ನೇಹ ಇದು.....

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ನಾಗೇಗೌಡರು ನೀರಾವರಿ ಸಚಿವರೂ ಕೂಡ ಆಗಿದ್ದಾರೆ, ಮಂಡ್ಯ ಜಿಲ್ಲೆಯವರು. ಏಕೆಂದರೆ ಮಂಡ್ಯ ಜಿಲ್ಲೆ ಏನಾದರೂ ಒಳ್ಳೆಯದನ್ನು ಕಂಡಿದ್ದರೆ ಒಂದು ತುತ್ತು ಅನ್ನವನ್ನು ಸಂತೋಷದಿಂದ ಊಟ ಮಾಡುತ್ತಿದ್ದರೆ, ಕಾವೇರಿ ನೀರಿನಿಂದ ತಾನೆ. ನಿಮ್ಮಿಂದ ಅಪಚಾರ ಏಕೆ ಆಗಬೇಕು? ಏಕೆಂದರೆ ನೀವು ಹೇಳುವ ಧಾಟಿಯಿಂದ ಬಹಳಷ್ಟು ಸಂದಿಗ್ಧ ಮತ್ತು ಅನುಮಾನಗಳು ಪ್ರಾರಂಭವಾಗುತ್ತವೆ. ಏಕೆಂದರೆ ನೀವು ನೀರು ಬಿಡಬೇಕಾದರೆ ಈ ಅಂಕಿ ಅಂಶಗಳ ಬಗ್ಗೆ ನಮ್ಮ ನಂಜೇಗೌಡರು

ಕರಾರುವಕ್ಕಾಗಿ ಕೇಳುತ್ತಾರೆ. ಏಕೆಂದರೆ ನಾನು ಎಲ್ಲಾ ಕಡತವನ್ನು ತಂದಿಲ್ಲ, ಈಗ ಸ್ವಲ್ಪ ತಂದಿದ್ದೇನೆ. ನೀವು ನೀರು ಬಿಡುವಂತಹ ತೀರ್ಮಾನಕ್ಕೆ ಎರಡು ಕಾರಣಗಳನ್ನು ಹೇಳಿದಿರಿ, ಏನು ಹೇಳಿದಿರಿ, ಮೊದಲು ಹೇಳಿದ ದಿವಸ ತಪ್ಪು ಹೇಳಿದಿರಿ, ಎರಡನೆಯ ಸಾರಿ ಹೇಳುವಾಗ ನೀವು ಏನು ಹೇಳುತ್ತಾ ಬಂದಿರಿ, ನಮಗೆ ಬೇಕಾದಷ್ಟು ನೀರು ಇಟ್ಟುಕೊಂಡು ಬಿಟ್ಟಿರಬೇಕಾದರೆ ಹೆಚ್ಚಾಗಿರಬಹುದು ನಮಗೆ ಬೇಕಾದಷ್ಟು ನೀರು ಇತ್ತು, ಆ ಬೇಕಾಗಿರುವಷ್ಟು ನೀರಿನ ಪೈಕಿ ನಾವು ಐದು ಟಿ.ಎಂ.ಸಿ.ಯನ್ನು ಬಿಟ್ಟಿದ್ದೇವೆಂದಾದರೂ ಹೇಳಬೇಕು, ಇಲ್ಲ ನಮಗೆ ಬೇಕಾದಷ್ಟು ನೀರು ಇತ್ತು ಅದಕ್ಕಿಂತ ಜಾಸ್ತಿ ಇದ್ದುದನ್ನು ನಾವು ಬಿಟ್ಟಿದ್ದೇವೆ ಎಂದು ಆದರೂ ಹೇಳಬೇಕು.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ನನಗೆ ಇಲ್ಲಿ ಒಂದು ಕನ್‌ಫ್ಯೂಷನ್ ಪ್ರಾರಂಭವಾಗಿದೆ, ಏನೆಂದರೆ, ಮೊಯಿಲಿಯವರು 144 ದಿವಸ ಬೇಕಾಗುತ್ತದೆ ಎಂಬ ಮಾತನ್ನು ಅವರು ಹೇಳಿದರು. ನಾನು ಜುಲೈ 30ರವರೆಗೆ ಜುಲೈ ಆಗಸ್ಟ್‌ನಲ್ಲಿ ಮಳೆ ಬಾರದೆ ಇದ್ದರೆ ಎರಡು ರಾಜ್ಯಗಳು ಸಫರ್ ಪಡಬೇಕಾಗುತ್ತದೆ. ಅದರಲ್ಲಿ ಡಿಸ್‌ಪ್ಯೂಟ್ ಇಲ್ಲ. ಜುಲೈ 30ರವರೆಗೆ ಏನು ನಮ್ಮ ಹತ್ತಿರ ನಾಲ್ಕು ಮೇಜರ್ ಪ್ರಾಜೆಕ್ಟ್‌ಗಳು ಇವೆ, ಕೆ.ಆರ್.ಎಸ್., ಕಬಿನಿ, ಹಾರಂಗಿ ಮತ್ತು ಹೇಮಾವತಿ ಅದು ಬಿಟ್ಟು, ಮೈನರ್ ಮತ್ತು ಮೀಡಿಯಂ ಇರಿಗೇಷನ್ ಅಚ್ಚು ಕಟ್ಟುಗಳನ್ನು ನಾವು ಈ ನಾಲ್ಕು ಮೇಜರ್ ಇರ್‍ರಿಗೇಷನ್‌ಗೆ ಸೇರಿಸುವುದಿಲ್ಲ. ಅದು ಬಿಟ್ಟು ಜುಲೈಯವರೆಗೆ ತೊಂದರೆ ಇಲ್ಲ ಎಂದು ಹೇಳಲೇಬೇಕು. ನೀವು ಹೇಳದೇ ಇದ್ದರೆ ಫ್ಯಾಕ್ಟ್ಸ್ ಇರುತ್ತದೆ. ಮಾನ್ಯ ನಂಜೇಗೌಡರು ಬಹಳ ಚೆನ್ನಾಗಿ ಹೇಳಿದರು, 74ರವರೆಗೆ ಒಂದು ಫ್ಯಾಕ್ಟ್, 84ರವರೆಗೆ ಒಂದು ತರಹ 1991ರಲ್ಲಿ ಟ್ರಿಬ್ಯುನಲ್ ಆದ ಮೇಲೆ ಅಲಗ್ ಕಮಿಟಿ ರಿಪೋರ್ಟ್ ಬಂದ ಮೇಲೆ every facts are before the CWC. You cannot hide. ಅವರು ಎಲ್ಲಿ ಬೇಕಾದರೂ ಇನ್‌ಸ್ಪೆಕ್ಷನ್ ಮಾಡಬಹುದು. ಎರಡು ಸಾರಿ ಇನ್‌ಸ್ಪೆಕ್ಷನ್ ಆಗಿದೆ 1994ರಲ್ಲಿ ಅಲಗ್ ಕಮಿಟಿ ಬಂದ ಮೇಲೆ, ರಘು ರಾಮನ್ ಕಮಿಟಿ ಇನ್‌ಸ್ಪೆಕ್ಟ್ ಮಾಡಿದ ಮೇಲೆ ನಮ್ಮ ಹತ್ತಿರ ಇರುವುದು, ಅವರ ಹತ್ತಿರ ಇರುವುದು ಎರಡು ಫಿಗರ್ ಕ್ಲಿಯರ್ ಇರುವುದರಿಂದ ನಾನು ಹೇಳುವುದು ಇಡೀ ನೀರೂ ಸಂಪೂರ್ಣವಾಗಿ ಆಗುತ್ತದೆ ಎಂದು ಅಲ್ಲ, ಜುಲೈ 30ನೇ ತಾರೀಖಿನವರೆಗೆ ನಾಲ್ಕು ಮೇಜರ್ ಕಾಮಗಾರಿ ಕೆಳಗೆ ಇರತಕ್ಕಂತಹ ಅಚ್ಚು ಕಟ್ಟಿಗೆ ನೀರಿನ ತೊಂದರೆ ಇಲ್ಲ. ಆಗಸ್ಟ್‌ನಲ್ಲಿ ಮಳೆ ಬರಲಿಲ್ಲ ಎಂದರೆ ಬೇರೆ ವಿಚಾರ. ಆ ಪಾಯಿಂಟ್ ನಾನು ಹೇಳಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಮದ್ರಾಸ್‌ನಲ್ಲಿ ಇರತಕ್ಕಂತಹ ರಿಸರ್ವಾಯರ್ ಪರಿಸ್ಥಿತಿ ತಮಗೆ ಗೊತ್ತಿದೆ, ತಾವು ಐದು ಟಿ.ಎಂ.ಸಿ. ನೀರು ಬಿಟ್ಟಿರಿ, ಸರ್ಕಾರಕ್ಕೆ ಏನಾದರೂ ಮಾಹಿತಿ ಇದೆಯೋ, ಉದ್ದೇಶಪೂರ್ವಕವಾಗಿ ಏನಾದರೂ ಅವರು ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕುತ್ತೇವೆಂದು ಹೆದರಿಸಿಕೊಂಡು ಐದು ಟಿ.ಎಂ.ಸಿ ನೀರು ಬಿಡತಕ್ಕಂತಹ ವ್ಯವಸ್ಥೆ ಆಗಿದೆಯೇ?

ಶ್ರೀ ಕೆ.ಎನ್.ನಾಗೇಗೌಡ:- ಮದ್ರಾಸ್‌ನಲ್ಲಿ ಎಷ್ಟು ಇದೆ, ಮೆಟ್ಟೂರ್‌ನಲ್ಲಿ ಎಷ್ಟು

ಇದೆ, ಭವಾನಿಯಲ್ಲಿ ಎಷ್ಟು ಇದೆ ಎಂದರೆ 15 TMC ಇರತಕ್ಕಂಥದ್ದು, ಗ್ರಾಸ್ 20 ಟಿ.ಎಂಸಿ. ಇರತಕ್ಕಂತಹ ಫಿಗರ್ಸ್ ಇದೆ ಮಾನ್ಯ ನಂಜೇಗೌಡರು ಕೇಳಿದರು, ಆಗ ನಾನು ಹೊರಗಡೆ ಹೋಗಿದ್ದೆ. ಈಗ ನಾನು ಅದನ್ನು ತರಿಸಿ ಇದೇ ಸದನದ ಮುಂದಿಟ್ಟಿದ್ದೇನೆ. ಅವರ ಪಾಯಿಂಟ್ ಏನೆಂದರೆ ನಾವು ಎಷ್ಟು ಉಪಯೋಗಿಸುತ್ತೇವೆ ಅದು ಇಂಪಾರ್ಟೆಂಟ್ ಅಲ್ಲ, ಅವರು ಕೇಳಿದ್ದುದು ಏನೆಂದರೆ ಜೂನ್ ತಿಂಗಳಲ್ಲಿ ನೀವು ನಮಗೆ ಇಷ್ಟು ಕೊಡಬೇಕಾಗಿತ್ತು, ಜುಲೈ ತಿಂಗಳಲ್ಲಿ ಇಷ್ಟು ಕೊಡಬೇಕಾಗಿತ್ತು, ಹೋದ ತಿಂಗಳು ಐದು ಟಿ.ಎಂ.ಸಿ. ಡಿಪಿಸಿಟ್ ಇದೆ. ಈ ತಿಂಗಳು ಫರ್ಸ್ಟ್ ವೀಕ್‌ನಲ್ಲಿ ಆ 10 ಟಿ.ಎಂ.ಸಿ ಕೊಡಬೇಕಾಗಿತ್ತು. ಆ ಫರ್ಸ್ಟ್ ವೀಕ್ 10 ಟಿ.ಎಂ.ಸಿ ಪ್ರೀವಿಯಸ್ ಐದು ಟಿ.ಎಂ.ಸಿ. ಎರಡೂ ಸೇರಿ 15 ಟಿ.ಎಂ.ಸಿ ಕೊಡಿ ಎಂದು ಅವರು ಕೇಳಿದ್ದಾರೆ. ಆದ್ದರಿಂದ ಈ ಫಿಗರ್ಸ್ ಏನು ಇದೆ ದಯವಿಟ್ಟು, ಹಿಂದೆ ಆ ರೀತಿ ಮಾಡಿದ್ದುದು ಇತ್ತು, ಅವರು ಹೇಳಿದ ಹಾಗೆ 1994 onwards you cannot hide any figures...

ಶ್ರೀ ಕಾಗೋಡು ತಿಮ್ಮಪ್ಪ:- ಹಾಗಿದ್ದರೆ ನಮಗೆ ಅಷ್ಟೊಂದು ಯಥೇಚ್ಛವಾಗಿ ನೀರು ಇದ್ದಿದ್ದರೆ ಯಾರಿಗೂ ಹೇಳಬಾರದಾಗಿತ್ತು, ತಮ್ಮ ಪಾಡಿಗೆ ತಾವು ಬಿಟ್ಟು ಬಿಡಬೇಕಾಗಿತ್ತು. ಏಕೆ ಇಟ್ಟುಕೊಂಡಿದ್ದೀರಿ, ನಾನು ಏಕೆ ಹೇಳುತ್ತೇನೆಂದರೆ ನಮಗೆ ಗೊತ್ತಿದೆ ಈ ವರ್ಷ ಜೂನ್ 7ರಿಂದ ನಮಗೆ ಮುಂಗಾರು ಪ್ರಾರಂಭವಾಗಬೇಕಾಗಿತ್ತು, ಒಂದು ತಿಂಗಳಾಯಿತು, ಮಧ್ಯದಲ್ಲಿ ಸೈಕ್ಲೋನ್ ಬಂದಿತ್ತು, ಮೂರು-ನಾಲ್ಕು ದಿವಸ ಮಳೆ ಬಂತು. ಇಲ್ಲದೆ ಹೋದರೆ ಇನ್ನೂ ಪರಿಸ್ಥಿತಿ ಕೆಡುತ್ತಿತ್ತು. ಹೆಚ್ಚು ಕಡಿಮೆ ಒಂದು ತಿಂಗಳು ಆಗಿದೆ ಮುಂಗಾರು ದುರ್ಬಲ ಅಷ್ಟೇ ಅಲ್ಲ, ಮುಂಗಾರು ಹೆಚ್ಚು ಕಡಿಮೆ ಇಲ್ಲೇ ಇಲ್ಲ. ಮುಂಗಾರು ಪ್ರಾರಂಭವಾಗದೇ ಇರುವಂತಹ ಪರಿಸ್ಥಿತಿ ಇವತ್ತು ಇದೆ. ಈ ಎಲ್ಲಾ ಜಲಾನಯನ ಅಣೆಕಟ್ಟಿನ ಪ್ರದೇಶಕ್ಕೆ ನೀರು ಬರುವುದು ಎಲ್ಲಿಂದ? ಮಂಡ್ಯ ಜಿಲ್ಲೆಯಿಂದ ನೀರು ಬರುತ್ತದೆಯೇ, ಮಲೆನಾಡು ಪ್ರದೇಶದಿಂದ ನೀರು ಬರಬೇಕು.

6. 10 ಪಿ.ಎಂ.

ಮಂಡ್ಯದಲ್ಲಿ ನೀರು ಹುಯ್ದರೆ ಕೃಷ್ಣರಾಜಸಾಗರಕ್ಕೆ ನೀರು ಬರುತ್ತದೆಯೇ? ಮಲೆನಾಡಿನ ಭಾಗದಲ್ಲಿ ಅಂದರೆ ಕೂರ್ಗ್, ಚಿಕ್ಕಮಗಳೂರು ಪ್ರದೇಶದಲ್ಲಿ ಮಳೆ ಬಿದ್ದರೆ, ಅಲ್ಲಿ ನೀರು ಬರುತ್ತದೆ. ಆದ್ದರಿಂದ ಮಲೆನಾಡು ಪ್ರದೇಶದಲ್ಲಿ ಇವೊತ್ತು ಮುಂಗಾರು ಇಲ್ಲವೆಂದು ಹೇಳಿದ ಮೇಲೆ, ಹೆಚ್ಚು ನೀರು ಸಂಗ್ರಹಣೆ ಆಗುವುದಕ್ಕೆ ಕಾರಣ ಎಲ್ಲಿಂದ ಬಂತು?

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು):- ಜನಗಳ ಮನಸ್ಸಿನಲ್ಲಿ ತಪ್ಪು ತಿಳುವಳಿಕೆ ಆಗುವುದು ಬೇಡ. ನೀರು ನಮ್ಮಲ್ಲಿ ಬಹಳ ಅಗಾಧವಾಗಿದೆ ಅದಕ್ಕೋಸ್ಕರ ಬಿಟ್ಟಿದ್ದೇವೆ ಎನ್ನತಕ್ಕಂಥ ಪ್ರಶ್ನೆ ಇಲ್ಲಿ ಇಲ್ಲ. ಸ್ವಲ್ಪ ಮಳೆ ಬಂದಿದ್ದರಿಂದ ಜಲಾಶಯಗಳಲ್ಲಿ ಜುಲೈ ತಿಂಗಳಿಗೆ ನಮ್ಮ ಬೇಸಾಯಕ್ಕೆ ಬೇಕಾಗಿರತಕ್ಕಂಥ ನೀರು, ನಮ್ಮ ಬಿತ್ತನೆಗೆ, ನಾಟಿ ಹಾಕಲಿಕ್ಕೆ ನಮಗೆ 24 ಟಿಎಂಸಿ ನೀರು ಬೇಕು. ಇದು ಬಿಟ್ಟು ಇನ್ನು 5-6 ಟಿ.ಎಂ.ಸಿ ನೀರು

ಇದೆ ಎನ್ನತಕ್ಕಂಥದ್ದು. ಇದು ಐದು ಹೋದಮೇಲೆ ನಮಗೆ ಉಳಿದದ್ದು ಒಂದು ಟಿ.ಎಂ.ಸಿ ನೀರು, ಅದು ಕುಡಿಯುವ ನೀರಿಗೆ, ಅದಕ್ಕೆ ಇದಕ್ಕೆ ಬೇಕಾಗುತ್ತದೆ. ಜುಲೈ ಮುಗಿದ ಮೇಲೆ, ಒಂದು ವೇಳೆ ಮಳೆ ಬರದೇಹೋದರೆ ನಮಗೆ ಸಾಕಷ್ಟು ಕಷ್ಟ ಅವರಿಗೆ ನೀರು ಬಿಡುವ ಪ್ರಶ್ನೆಯೇ ಇಲ್ಲ. ಯಾರು ಕೇಳಿದರೂ ಕೊಡುವ ಪ್ರಶ್ನೆ ಇಲ್ಲ. ನಮ್ಮಲ್ಲಿ ನೀರು ಇದ್ದರೆ ತಾನೆ ಅವರಿಗೆ ಬಿಡುವುದು. ಆದ್ದರಿಂದ ನಾವು ಮತ್ತೆ ಡಿಸ್ಟ್ರೆಸ್ ಫಾರ್ಮುಲಾಕ್ಕೆ ಹೋಗಬೇಕಾಗುತ್ತದೆ. ಹಾಗೆಂದರೆ ನಾವೇನು ಇಂಟೀರಿಮ್ ಆರ್ಡರ್ ಒಪ್ಪಿಕೊಂಡಿದ್ದೇವೆಂದರ್ಥವಲ್ಲ. ತೀರಾ ಗುದ್ದಾಟ ಮಾಡಿಕೊಂಡು ಹೋದರೆ ಕಷ್ಟ ಆಗುತ್ತದೆ, ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವುದು ಕಷ್ಟ ಆಗುತ್ತದೆ, ಎನ್ನುವ ಒಂದೇ ಒಂದು ಕಾರಣದಿಂದ, ಸೌಹಾರ್ದಯುತವಾಗಿ ವಾತಾವರಣ ನಿರ್ಮಾಣವಾಗಲಿ ಎನ್ನುವ ಕಾರಣಕ್ಕೋಸ್ಕರ ಐದು ಟಿಎಂಸಿ ನೀರು ಕೊಟ್ಟಿದ್ದೇವೆಯೇ ಹೊರತು ಅವರಿಗೆ ಹೆದರಿಕೊಂಡಾಗಲೀ, ಖರ್ಚ ಉಳಿಸಿಕೊಳ್ಳುವುದಕ್ಕಾಗಲೀ, ಇನ್ನು ಯಾವುದೇ ಕಾರಣಕ್ಕೋಸ್ಕರವಾಗಲೀ ನೀರು ಬಿಟ್ಟಿಲ್ಲ. ನಮಗೆ ತೊಂದರೆ ಆಗತಕ್ಕಂಥ ಪರಿಸ್ಥಿತಿ ಬಂದರೆ, ಯಾವ ಕಾರಣಕ್ಕೂ ಕೂಡ ಈ ಸರ್ಕಾರ ಎಂಥ ತ್ಯಾಗಕ್ಕೂ ಕೂಡ ಸಿದ್ಧವಾಗಿದೆ. ಈ ರಾಜ್ಯದ ಹಿತವನ್ನು ಕಾಪಾಡಲಿಕ್ಕೆ ಇದರ ಬಗ್ಗೆ ಯಾರೂ ಕೂಡ ಸಂಶಯ ಇಟ್ಟುಕೊಳ್ಳತಕ್ಕಂಥ ಅಗತ್ಯವಿಲ್ಲ. ಈ ರಾಜ್ಯದ ಜನರೂ ಕೂಡ ತಪ್ಪು ತಿಳಿದುಕೊಳ್ಳುವ ಅಗತ್ಯವಿಲ್ಲ.

ಶ್ರೀ ಬಿ.ಬಿ.ಶಿವಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ ಮೇಲೆ ನನಗೆ ಒಂದಂತು ಅರ್ಥವಾಯಿತು. ತಮಿಳುನಾಡಿಗೆ ನಿಮಗೆ ಒಂದು ಅಗ್ರಿಮೆಂಟ್ ಆದ ಹಾಗೆ ಕಾಣುತ್ತಿದೆ. ಅದೇನೆಂದರೆ ಬದುಕಿದರೆ ಒಟ್ಟಿಗೆ ಬದುಕೋಣ, ಸಾಯುವುದಾದರೆ ಒಟ್ಟಿಗೆ ಸಾಯೋಣ ಎನ್ನುವುದು.

ಶ್ರೀ ಸಿದ್ಧರಾಮಯ್ಯ:- ತಮಿಳುನಾಡಿನವರು ನಮ್ಮ ದೇಶದವರು ಅಲ್ಲವೇ? ಆದರೆ ನಮ್ಮ ರೈತರೂ ಬದುಕಬೇಕು, ನಮಗೂ ನೀರಾವರಿಗೆ ನೀರು ಬೇಕು, ಜೊತೆಗೆ ಅವರಿಗೂ ನೀರು ಬೇಕು. ಈ ವ್ಯಾಜ್ಯ ನಿನ್ನೆ ಮೊನ್ನೆ ಬಂದಿರತಕ್ಕಂಥದ್ದಲ್ಲ, ಇದು ನೂರಾರು ವರ್ಷಗಳಿಂದ ಬಂದಿರತಕ್ಕಂಥ ವ್ಯಾಜ್ಯ. ಇದು ಬಹಳ ಸೂಕ್ಷ್ಮವಾದಂಥ ವಿಚಾರ, ರೈತರು ನಮ್ಮ ಬಗ್ಗೆ ತಪ್ಪು ತಿಳುವಳಿಕೆ ಮಾಡಿಕೊಳ್ಳಬಾರದು, ಏಕೆಂದರೆ ನಾವು ಆ ಭಾಗದಿಂದ ಬಂದಿದ್ದೇವೆ, ನಾವೂ ರೈತರೇ, ನಮ್ಮ ಜಮೀನುಗಳು ಕೂಡ ನೀರಾವರಿ ಆಗುತ್ತವೆ, ನಮ್ಮ ಜಮೀನು ನೀರಾವರಿ ಆಗುವುದನ್ನು ಬಿಟ್ಟು ಅವರ ಜಮೀನು ನೀರಾವರಿ ಆಗುವುದಕ್ಕೆ ನಾವು ಇಚ್ಛೆಪಡುವುದಿಲ್ಲ. ನಮ್ಮದೂ ಆಗಬೇಕು, ಜೊತೆಗೆ ನ್ಯಾಯಯುತವಾಗಿ ಇತ್ಯರ್ಥ ಆಗಬೇಕು. ಒಂದು ವೇಳೆ ಅನ್ಯಾಯವಾದಾಗ ಎಂಥದೇ ಹೋರಾಟಕ್ಕೆ, ಯಾವುದೇ ತ್ಯಾಗಕ್ಕೆ ನಾವು ಕೂಡ ಸಿದ್ಧರಾಗಿದ್ದೇವೆ.

ಶ್ರೀ ಬಿ.ಬಿ.ಶಿವಪ್ಪ:- ತಮ್ಮ ಮಾತನ್ನು ಕೇಳಿ ಒಂದಂತು ತುಂಬಾ ಸಂತೋಷವಾಯಿತು. ಅದೇನೆಂದರೆ ತಮಿಳುನಾಡಿನವರು ಬೇರೆ ದೇಶದವರು ಬೇರೆ ಅಲ್ಲ ಎಂದು ಹೇಳಿದ್ದೀರಿ. ಅದು ಒಪ್ಪತಕ್ಕಂಥ ಮಾತು. ಅದೇ ನಾವು ಕೂಡ ಹೇಳುತ್ತಾ

ಇರತಕ್ಕಂಥದ್ದು. ಇಡೀ ಭಾರತ ದೇಶದವರು ಒಂದೇ ಎನ್ನುವ ಮನೋಭಾವವನ್ನು ತಾಳಿ ಎನ್ನತಕ್ಕಂಥ ಮಾತನ್ನೇ ನಾವೂ ಹೇಳುತ್ತಿದ್ದೇವೆ. ಇವೊತ್ತು ನಿಮಗೆ ಇದ್ದಕ್ಕಿದ್ದಹಾಗೆ ತಮಿಳುನಾಡಿನ ಮೇಲೆ ಭಾರಿ ವಿಶ್ವಾಸ, ಪ್ರೇಮ, ಪ್ರೀತಿ ಉಕ್ಕಿ ಹರಿಯಲು ಶುರುವಾಯಿತಲ್ಲ!

ಶ್ರೀ ಕಾಗೋಡು ತಿಮ್ಮಪ್ಪ:- ಇಲ್ಲೇ ನಮಗೆ ಆತಂಕ ಬರುತ್ತಾ ಇರತಕ್ಕಂಥದ್ದು.

ಶ್ರೀ ಡಿ.ಆರ್.ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ ತಮಿಳುನಾಡಿನ ಜಲಾಶಯಗಳಾದ ಮೆಟ್ಟೂರು, ಭವಾನಿ ಏನು ಇವೆ ಅಲ್ಲಿಯ ನೀರು ಅವರಿಗೆ ಎಲ್ಲಿಯವರೆಗೆ ಸಾಲುತ್ತದೆ?

ಶ್ರೀ ಕೆ.ಎನ್.ನಾಗೇಗೌಡ:- ಅದು ನಮಗೆ ಗೊತ್ತಾಗುವುದಿಲ್ಲ.

ಶ್ರೀ ಡಿ.ಆರ್.ಪಾಟೀಲ್:- ಗೊತ್ತಾಗಬೇಕಲ್ಲ, ನಮ್ಮದು ಹೇಗೆ ನೀವು ಲೆಕ್ಕ ಹಾಕುತ್ತೀರಿ ಅವರದೂ ನೀವು ಲೆಕ್ಕ ಹಾಕಬೇಕಲ್ಲ. ಈಗ ನಮಗೆ ಜುಲೈ 31ರೊಳಗೆ ನೀರು ಸಾಕಾಗುತ್ತದೆಂದು ಹೇಳಿದ್ದೀರಿ. ಅವರಿಗೂ ಅದು 31 ಜುಲೈವರೆಗೆ ಸಾಕಾಗುತ್ತದೆ ಅಥವಾ ಐದು ಟಿ.ಎಂ.ಸಿ. ನೀರು ಏನು ನೀವು ಬಿಟ್ಟಿದ್ದೀರಿ ಅದನ್ನು ಅವರು ಆಗಸ್ಟ್, ಸೆಪ್ಟೆಂಬರ್‌ವರೆಗೆ ಕಾಳಜಿ ತೆಗೆದುಕೊಂಡಿದ್ದಾರೆ ಹೇಗೆ ಎಂಬುದು ಈ ಸದನಕ್ಕೆ ಗೊತ್ತಾಗಬೇಕಲ್ಲ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜೇಗೌಡರು, ಮಾನ್ಯ ದೇವೇಗೌಡರು ಎಲ್ಲಾ ಈ ವಿಚಾರದಲ್ಲಿ ನೀವು ಎಷ್ಟು ಅಚ್ಚುಕಟ್ಟು ಮಾಡುತ್ತಿದ್ದೀರಿ, ಎಷ್ಟು ಎಕರೆ ನಿಮಗೆ ನೀರು ಬೇಕು, ಯಾವಾಗ ಬೇಕು ಎಂದು ಬಹಳ ವರ್ಷದಿಂದ ಕೇಳಿಕೊಂಡು ಬಂದಿದ್ದಾರೆ. ಇವೊತ್ತಿನವರೆಗೆ ಅವರು ಕೊಟ್ಟಿಲ್ಲ. ಅವರು ಏನು ಹೇಳುತ್ತಾರೆಂದರೆ ನಮ್ಮ ಟ್ರಿಬ್ಯೂನಲ್ ಏನು ಆರ್ಡರ್ ಮಾಡಿದ್ದಾರೆ, ಆ ಆರ್ಡರ್ ಪ್ರಕಾರ ನಾವು ಡೌನ್ ಸ್ಟ್ರೀಮ್‌ಗೆ ಇದ್ದೇವೆ ನೀವು ಅಪ್ ಸ್ಟ್ರೀಮ್‌ನವರು ನಮಗೆ ಏನು ನೀರು ಬರಬೇಕೋ ಅದು ಕೊಡಿ, ನಮ್ಮ ಭಾಗದ ವಿಚಾರ ಬಿಡಿ ಎಂದುಕೊಂಡೇ ಬಂದಿದ್ದಾರೆ. ಅದು ಇತ್ಯರ್ಥ ಆಗಬೇಕಾದರೆ ಈಗ ಕಾಲ ಪರಿಪಕ್ವವಾಗಿದೆ ನಮ್ಮ ಉಪಮುಖ್ಯಮಂತ್ರಿಗಳು ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ನಮಗೆ ಬಂದಿರತಕ್ಕಂಥ ಆತಂಕ ಇಷ್ಟೆ ಜುಲೈ ತಿಂಗಳವರೆಗೆ ನಮಗೆ ಎಷ್ಟು ನೀರಿನ ಪ್ರಮಾಣ ಬೇಕಾಗಿತ್ತೋ, ಅಷ್ಟರವರೆಗೆ ನಮಗೆ ನೀರು ಇದೆ. ಆ ಕಾರಣಕ್ಕಾಗಿ ನಮ್ಮಲ್ಲಿ ಇದ್ದಂಥ 30 ಟಿಎಂಸಿ ನೀರಿನಲ್ಲಿ ನಾವು ಐದನ್ನು ಬಿಟ್ಟು, ಒಂದು ಟಿಎಂಸಿ ಕುಡಿಯುವ ನೀರಿಗೆ, 24 ಟಿಎಂಸಿ ಉಳಿಸಿಕೊಂಡಿದ್ದೇವೆ ಎಂದು ಹೇಳುತ್ತಾರೆ. ತಾವು ದಿನನಿತ್ಯದ ಫೋರ್‌ಕಾಸ್ಟ್ ಕೇಳುತ್ತಿದ್ದೀರಿ. ಇವೊತ್ತು ಜುಲೈ 11ನೇ ತಾರೀಖು, ಮುಂಗಾರು ಬರತಕ್ಕಂಥ ಸೂಚನೆಗಳು ಕಾಣುತ್ತಿಲ್ಲ. ಈ ಸನ್ನಿವೇಶದಲ್ಲಿ ನೀವು ಮಾಡಬೇಕಾದ ಕೆಲಸ ಏನಿತ್ತು ಎಂದರೆ ಡಿಸ್ಟ್ರೆಸ್ ಫಾರ್ಮುಲಾ ಪ್ರಕಾರ ನೀರನ್ನು ಬಿಡುವುದಕ್ಕೆ ಆಗುತ್ತಿಲ್ಲ ಎಂದು ಹೇಳಬೇಕಾಗಿತ್ತು. ಆ ಕೆಲಸ ನೀವು

ಮಾಡದೇ ನೀವೇ ಮುಂದಾಗಿ ನೀರನ್ನು ಬಿಟ್ಟಿರಿ. ಅವರೇನು ನಿಮ್ಮನ್ನು ನೀರು ಬಿಡಿ ಎಂದು ಕೇಳಿರಲಿಲ್ಲ. ನಿಮಗೆ ಪತ್ರ ಕೂಡ ಬರೆದಿರಲಿಲ್ಲ. ನಮ್ಮ ಜೊತೆ ಮಾತನ್ನೂ ಆಡಿಲ್ಲ.

ಶ್ರೀ ಕೆ.ಎನ್.ನಾಗೇಗೌಡ:- ಅವರ ಇರಿಗೇಶನ್ ಸೆಕ್ರೆಟರಿ, ನಮ್ಮ ಇರಿಗೇಶನ್ ಸಕ್ರೆಟರಿಯವರ ಜೊತೆ ಮಾತನಾಡಿದ್ದರು.

ಶ್ರೀ ಸಿದ್ಧರಾಮಯ್ಯ:- ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ನಾವು ಹಿಂದೆ ಅನೇಕ ಸಂದರ್ಭಗಳಲ್ಲಿ ನೋಡಿದ್ದೇವೆ. ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳ ಜೊತೆ ಚರ್ಚೆ ನಡೆದಾಗ ಕೂಡ ತೀರ್ಮಾನ ಆಗದೇ ಇದ್ದಂಥ ಸಂದರ್ಭ ಇತ್ತು. ಇವೊತ್ತು ಕಾರ್ಯದರ್ಶಿಯವರ ಮಧ್ಯದಲ್ಲಿ ಚರ್ಚೆಯಾಗಿ ನೀವು ನೀರು ಬಿಡುವ ಮಟ್ಟಕ್ಕೆ ಹೋಗಿದ್ದೀರಿ ಎಂದರೆ ನೀವು ಎಷ್ಟರ ಮಟ್ಟಿಗೆ ಬಿಗು ನಿಲುವನ್ನು ತೆಗೆದುಕೊಂಡಿದ್ದೀರಿ ಎನ್ನುವುದು ಇದರಿಂದ ಅರ್ಥವಾಗುತ್ತದೆ. ಟ್ರಿಬ್ಯೂನಲ್ ಇದ್ದಮೇಲೂ ಕೂಡ ಹೋದ ವರ್ಷ ಏನಾಯಿತು. ಹೋದವರ್ಷ ಸುಮ್ಮನೆ ಕೇಂದ್ರ ಸರ್ಕಾರ ನೀರು ಬಿಡಿ ಎಂದು ಹೇಳಿದ್ದಕ್ಕೆ ನೀರು ಬಿಟ್ಟುಬಿಟ್ಟರೇ? ಟೆಕ್ನಿಕಲ್ ಕಮಿಟಿ ಬಂದು ಅವರು ಪ್ರವಾಸ ಮಾಡಿ, ಅವರು ಅಂತಿಮವಾಗಿ ತೀರ್ಮಾನ ಕೊಟ್ಟಮೇಲೆ ನೀವು ನೀರು ಬಿಟ್ಟಿರಿ. ಸ್ವಾಮಿ ನಿಮ್ಮ ವಾದದ ಪ್ರಕಾರ ನಿಮಗೆ ಬೇಕಾದಷ್ಟು ನೀರು ಇದೆ ನೀವು ಬಿಟ್ಟಿರಿ. ನೀವು ಅಧಿಕಾರ ಉಳಿಸಿಕೊಳ್ಳೋಗೊಸ್ಕರ ಬಿಟ್ಟಿರೋ ಯಾವುದಕ್ಕೆ ಬಿಟ್ಟಿರೋ ಅದನ್ನು ನಾವು ಹೇಳುವುದಕ್ಕೆ ಹೋಗೋದಿಲ್ಲ. ಆದರೆ ನೀವು ನಡೆದುಕೊಳ್ಳತಕ್ಕಂಥ ರೀತಿ ಏನು ಇದೆ ಅದರಿಂದ ಕರ್ನಾಟಕದ ಜನರಿಗೆ ಸಂಶಯಕೂಡ ಬಂದಿದೆ. ಮತ್ತು ಈ ರೈತರ ರಕ್ಷಣೆ ಮಾಡತಕ್ಕಂಥ ವಿಷಯದಲ್ಲಿ ನೀವು ನಿಷ್ಠುರವಾಗಿ ನಡೆದುಕೊಂಡಿಲ್ಲ ಪ್ರಾಮಾಣಿಕವಾಗಿ ನಡೆದುಕೊಂಡಿಲ್ಲ, ಇದು ಇವೊತ್ತು ಎದ್ದು ಕಾಣುತ್ತಿದೆ. ಹೋದ ಸಾರಿ ನೀರು ಬಿಟ್ಟ ಕಾರಣ ಮಂಡ್ಯ, ಮೈಸೂರು ಭಾಗದಲ್ಲಿ ಚಳುವಳಿಯಾಯಿತು, ವಿರೋಧವಾಯಿತು. ಆದರೆ ಜನ ನಿಮ್ಮನ್ನು ಆರಿಸಿದರು, ಅದೇ ಸಂಕೇತಗಳು ಅಲ್ಲ. ಅವುಗಳ ಮೇಲೆ ನಾವು ನಿರ್ಧಾರಕ್ಕೆ ಬರುವುದಕ್ಕೆ ಆಗುವುದಿಲ್ಲ. ರಾಜ್ಯದ ಹಿತ ಕಾಪಾಡಬೇಕು ಎನ್ನತಕ್ಕಂಥ ಕಲ್ಪನೆ ನಮಗೆ ಇದ್ದರೆ, ಅದರ ಬಗ್ಗೆ ನಿಷ್ಠೆ ಇದ್ದರೆ,ನಾವು ಅನುಸರಿಸತಕ್ಕಂಥ ವಿಧಾನಗಳಲ್ಲಿ ಸಂಶಯ ಬರುವುದಕ್ಕೆ ಅವಕಾಶವನ್ನು ನಾವು ಕೊಡಬಾರದು. ಇವೊತ್ತು ನೀವು ಕೈಗೊಂಡಿರತಕ್ಕಂಥ ತೀರ್ಮಾನದಿಂದ ಸಂಶಯಗಳು ಬಂದಿವೆ. ನೀವು ಇವೊತ್ತು ರೈತರ ಹಿತವನ್ನು ಕಾಪಾಡುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ, ಎನ್ನತಕ್ಕಂಥ ಆಪಾದನೆಯನ್ನು ನಾವು ನೇರವಾಗಿ ಅನಿವಾರ್ಯವಾಗಿ ಮಾಡಬೇಕಾಗಿದೆ. ಆದ್ದರಿಂದ ಇವೊತ್ತು ನಾವು ಮುಖ್ಯಮಂತ್ರಿಗಳಿಗೆ ಹೇಳತಕ್ಕಂಥದ್ದು ಏನೆಂದರೆ ನೀವು ಬಿಗು ನಿಲುವನ್ನು ತಾಳಬೇಕಾಗುತ್ತದೆ. ನೀವು ನಿಮ್ಮ ಪ್ರಯತ್ನದಿಂದ .ತಮಿಳುನಾಡು ಮತ್ತು ಕರ್ನಾಟಕ ಮಧ್ಯೆ ಸಂಬಂಧ ಯಾರೂ ಪ್ರವೇಶ ಮಾಡದೇ ಒಂದು ಇತ್ಯರ್ಥಕ್ಕೆ ಬಂದರೆ,

ಒಂದು ತೀರ್ಮಾನ ಮಾಡಿಸಿದರೆ ಬಹಶಃ ನೀವು ಕರ್ನಾಟಕದ ಇತಿಹಾಸದಲ್ಲಿ ಒಬ್ಬ ಶಾಶ್ವತವಾದ ನಾಯಕರಾಗಿ ಉಳಿಯುತ್ತೀರಿ. ಇವೊತ್ತು ಶ್ರೀಮಾನ್ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಾರೆ, ಅವರಿಗೂ ಕೂಡ ಉಭಯ ಸಂಕಟ ಇದೆ, ನೀರಿನ ಕಷ್ಟ ಇದೆ, ಏಕೆಂದರೆ ಕಾವೇರಿ ನೀರಿನ ವಿಚಾರದಲ್ಲಿ ಬಹುಶಃ ಅವರು ಹೇಳಿರುವಂಥ ಮಾತನ್ನು ನಾನಾಗಲೀ, ಪಟೇಲರಾಗಲೀ ಹಿಂದೆ ಎಂದೂ ಹೇಳಿಲ್ಲ. ಏಕೆಂದರೆ ಅವರು ಆ ಪ್ರದೇಶದಲ್ಲಿ ಇದ್ದಂಥವರು, ಆ ನೀರಿನಲ್ಲಿ ಬದುಕಬೇಕು ಎಂದು ಆಸೆ ಪಟ್ಟವರು. ಇವೊತ್ತು ಅವರ ಬದುಕು ಅದರಲ್ಲಿ ಇರೋ ಕಾರಣಕ್ಕಾಗಿ ಅವರಿಗೆ ಶ್ರೀಮಾನ್ ನಂಜೇಗೌಡರಿಗೆ ಇರೋಷ್ಟು ಕಳಕಳಿ ನಮಗೆ ಬರುವುದಿಲ್ಲ. ಏಕೆಂದರೆ ಅದರಿಂದ ನೇರವಾಗಿ ಪ್ರಯೋಜನ ಪಡೆಯತಕ್ಕಂತವರು ಅವರು. ಹಾಗಾಗೀ ಅವರು ಏನೇನು ಹೇಳಿದ್ದಾರೆ ಎನ್ನತಕ್ಕಂಥದ್ದು, ತಮಿಳುನಾಡಿನ ಜನರಿಗೂ ಗೊತ್ತು, ತಮಿಳುನಾಡಿನ ಸರ್ಕಾರಕ್ಕೂ ಗೊತ್ತು, ದೆಹಲಿಯಲ್ಲಿರತಕ್ಕಂಥವರಿಗೂ ಗೊತ್ತು. ಏನೇ ತೀರ್ಮಾನ ಮಾಡಲು ಹೊರಟರೂ ಕೂಡ ಸಂಶಯ ಪಡತಕ್ಕಂಥ ಸನ್ನಿವೇಶ ಅಥವಾ ಸಂದರ್ಭ ಬಂದರೆ ಆಶ್ಚರ್ಯ ಪಡಬೇಕಾಗಿಲ್ಲ. ಕೆಳಗಡೆ ಇದ್ದವರು ನಮಗೆ ಶೇರು ಎಂದು ಹೇಳುವುದಾಗಲೀ, ಅಥವಾ ಮೇಲೆ ಇದ್ದವರು ನಮಗೆ ಶೇರು ಬೇಕು ಎಂದು ಹೇಳುವುದಾಗಲೀ ಕಾಲ ಹೋಗಿಬಿಟ್ಟಿದೆ, ಹೊಸ ಕಾಲ ಬಂದಿದೆ. ಎಂದು ನಮ್ಮ ಮಾನ್ಯ ನಂಜೇಗೌಡರು ಹೇಳಿದ್ದಾರೆ. ಆ ಪರ್ವ ಆಗಿದ್ದರೆ ನಿಜಕ್ಕೂ ಹೊಸ ಪರ್ವ ನಿರ್ಮಾಣವಾಗುವುದು ರಾಷ್ಟ್ರದ ದೃಷ್ಟಿಯಿಂದ ಬಹಳ ಒಳ್ಳೆಯದು. ಹಿಂದೆ ಸಾಕಷ್ಟು ಚಳುವಳಿಗಳು ನಡೆದು ಎಷ್ಟು ಜನ ಸತ್ತರು. ಏನು ಅನಾಹುತವಾಯಿತು ಎನ್ನುವುದನ್ನು ನಾವು ಕಂಡಿದ್ದೇವೆ. ಅಂಥ ಒಂದು ಹೊಸ ವಾತಾವರಣ ತಮ್ಮ ನಾಯಕತ್ವದಲ್ಲಿ ಆಗುವುದಾದರೆ ಖಂಡಿತವಾಗಿಯೂ ನಾವು ಅದಕ್ಕೆ ಸ್ವಾಗತವನ್ನು ಮಾಡುತ್ತೇವೆ. ಆದರೆ ಆ ರೀತಿ ಮಾಡತಕ್ಕಂಥ ಕೆಲಸ ಏನು ಪ್ರಾರಂಭ ಮಾಡಿದ್ದೀರಿ ಎನ್ನುವುದು ಬಹಳ ಮುಖ್ಯವಾದ ವಿಚಾರ. ಕೇವಲ ನಾವು ಉದಾರಿಗಳಾದರೆ ಮಾತ್ರ ಸಾಕಾಗುವುದಿಲ್ಲ, ಬೇರೆಯವರೂ ಕೂಡ ಆಗಬೇಕಾಗುತ್ತದೆ. ಆದರೆ ತಮಿಳುನಾಡಿನ ಜನರಿಂದ ಈ ಒಂದು ಸ್ನೇಹ ಸಂಬಂಧ ಬಂದಿದ್ದು ನನಗಂತೂ ಕಾಣಲಿಲ್ಲ. ಏಕೆಂದರೆ ಮೊನ್ನೆ ಕರುಣಾನಿಧಿಯವರು....

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):- ಎರಡನ್ನೂ ನೀವೇ ಹೇಳುತ್ತೀರಲ್ಲ, ನಿಮ್ಮ ಸರ್ಕಾರ ಒಳ್ಳೆಯ ಸಂಬಂಧವನ್ನೂ ಅದರೊಂದಿಗೆ ಬೆಳೆಸಿಕೊಳ್ಳಿ, ಇದಕ್ಕೆ ಒಂದು ಶಾಶ್ವತ ಪರಿಹಾರವನ್ನು ಕಂಡುಹಿಡಿಯಿರಿ ತನ್ಮೂಲಕ ಇತಿಹಾಸದಲ್ಲಿ ನಿಮ್ಮ ಹೆಸರನ್ನು ಉಳಿಸಿಕೊಳ್ಳಿ ಎಂದು ಒಳ್ಳೆಯ ಮಾತನ್ನೂ ನೀವು ಹೇಳುತ್ತೀರಿ. ಆದರೂ ಕೂಡ ಅನುಮಾನದಿಂದಲೇ ನೀವು ಅವರನ್ನು ನೋಡಬೇಕು, ಅವರನ್ನು ನಂಬಬಾರದು, ಅವರನ್ನು ಹತ್ತಿರ ಬಿಟ್ಟುಕೊಳ್ಳಬಾರದು ಎಂದೂ ಹೇಳುತ್ತೀರಿ, ಇದು ಹೇಗೆ? ನಂಜೇಗೌಡರು ಈ ವಿಚಾರದಲ್ಲಿ ಸ್ಪಷ್ಟವಾಗಿದ್ದಾರೆ, ಅವರ ಮನಸ್ಸಿನಲ್ಲಿ ದ್ವಂದ್ವ ಇಲ್ಲ

(ನಗು)

ಶ್ರೀ ಕಾಗೋಡು ತಿಮ್ಮಪ್ಪ:- ಹಾಗಾದರೆ ಅವರನ್ನು ಇಟ್ಟುಕೊಳ್ಳಿ, ಈಗ ಅವರನ್ನು ಮಂತ್ರಿ ಮಾಡುತ್ತೀರೋ ಅಥವಾ ಹಾಗೇ ಇಟ್ಟುಕೊಳ್ಳುತ್ತೀರೋ ನೋಡಿಕೊಳ್ಳಿ, ನೀವು ಅವರು ಸೇರಿ ತೀರ್ಮಾನ ಮಾಡಿಕೊಂಡಿದ್ದರೆ ಈ ಸಮಸ್ಯೆಯು ವ್ಯವಹಾರವೇ ಬೇಡ.

ಶ್ರೀ ಎಂ.ಸಿ.ನಾಣಯ್ಯ:- ರಾಜ್ಯದ ಹಿತದೃಷ್ಟಿಯಿಂದ ಅವರು ಬೇಕಾಗುತ್ತಾರೆ, ಕಾವೇರಿ ಇಶ್ಯೂ ಬಂದಾಗ. ಏಕೆಂದರೆ, ಅವರು ಆ ಕಡೆಯವರಿಂದ ಬಂದಿರುವುದರಿಂದ ಬೇಕಾಗುತ್ತಾರೆ. ನೀವೂ ಬೇಕಾಗಿರತಕ್ಕಂಥ ಸಂದರ್ಭದಲ್ಲಿ ನಿಮ್ಮನ್ನೂ ಪರಿಗಣನೆಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಅವರನ್ನು ಇಟ್ಟುಕೊಳ್ಳಿ, ಪರವಾಗಿಲ್ಲ. ನಿಜವಾಗಿಯೂ ಕೂಡ ಎರಡೂ ರಾಜ್ಯಗಳ ಸಂಬಂಧವನ್ನು ಉತ್ತಮವಾಗಿ ಬೆಳೆಸಬೇಕು ಎನ್ನುವ ಪ್ರಾಮಾಣಿಕತನ ನಿಮ್ಮಲ್ಲಿದ್ದು ಆ ನೀರನ್ನು ಬಿಟ್ಟಿದ್ದೀರಿ ಎನ್ನತಕ್ಕಂಥದ್ದು ತಮಿಳುನಾಡಿನ ಸರ್ಕಾರಕ್ಕೆ ಗೊತ್ತಾಗಿದ್ದರೆ, ಅಥವಾ ಆ ರೀತಿಯಲ್ಲಿ ನೀವು ಅವರಿಗೆ ಗೊತ್ತುಮಾಡಿದ್ದರೆ ಅವರು ಈ ಬಗ್ಗೆ ಏನು ಹೇಳಬೇಕಾಗಿತ್ತು ಎಂದರೆ ಕರ್ನಾಟಕದ ಜನರಿಗೆ, ಕರ್ನಾಟಕ ಸರ್ಕಾರಕ್ಕೆ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದು ಹೇಳಬೇಕಾಗಿತ್ತು. ಅಂಥ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎನ್ನತಕ್ಕಂಥ ಒಂದೇ ಮಾತನ್ನೂ ಕೂಡ ಅವರು ಹೇಳಲಿಲ್ಲ.

ಶ್ರೀ ಸಿದ್ಧರಾಮಯ್ಯ (ಹಣಕಾಸು ಮಂತ್ರಿಗಳು):- ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಈ ರೀತಿಯಲ್ಲಿ ಹೇಳಿಕೊಂಡು ಸುಮ್ಮನೇ ದೊಡ್ಡತನ ತೋರಿಸುವುದಕ್ಕೆ ಹೋಗಬೇಡಿ. ಈಗ 5 ಟಿ.ಎಂ.ಸಿಯಷ್ಟು ನೀರನ್ನು ತೆಗೆದುಕೊಂಡಾದ ಮೇಲೆ ನಮಗೆ ಇನ್ನೂ 11 ಟಿ.ಎಂ.ಸಿಯಷ್ಟು ನೀರು ಬರಬೇಕೆಂದು ಮತ್ತೆ ಪ್ರಾರಂಭ ಮಾಡಿಬಿಟ್ಟಿದ್ದಾರೆ. ಈಗ 5 ಟಿ.ಎಂ.ಸಿ.ಯಷ್ಟು ನೀರನ್ನು ನೀವು ಸುಲಭವಾಗಿ ಕೊಟ್ಟ ಮೇಲೆ ಇನ್ನೂ 11 ಟಿ.ಎಂ.ಸಿ.ಯಷ್ಟು ನೀರನ್ನು ನೀವು ಕೊಡುತ್ತೀರಿ ಎನ್ನುವ ಭಾವನೆ ಅವರಿಗೆ ಬಂದಿದೆ. ಆದ್ದರಿಂದ ಒಂದು ಸಾರಿ ಅವರು ರೂಟೀ ಹಾಕುವುದರ ಬದಲಾಗಿ ಹತ್ತು ಸಾರಿ ಹಾಕಿದರೆ ನೀವು 10 ಸಾರಿ ಕೈಬಿಡುತ್ತೀರಿ ಎನ್ನುವುದು ಗೊತ್ತಾಗಿಬಿಟ್ಟಿದೆ. ಆದ್ದರಿಂದ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. 'ಗುಡ್‌ಗೆಸ್ಚರ್' ಎಂದು ಹೇಳಿ 5 ಟಿ.ಎಂ.ಸಿ ನೀರು ಕೊಟ್ಟಿದ್ದೇವೆ, ಸುಪ್ರೀಂ ಕೋರ್ಟ್‌ನಿಂದ ಬಂದು 11 ಟಿ.ಎಂ.ಸಿ.ಯಷ್ಟು ನೀರು ಕೊಡಿ ಎಂದರೆ 11ರಷ್ಟು ಕೊಡೋಣ ಎಂದು ಹೇಳಿ, ಅದು ಕಂಪಲ್‌ಶನ್, ಆದರೆ ಇದು ಔಟ್ ಆಫ್ ಗುಡ್ ಗೆಸ್ಚರ್.

ಶ್ರೀ ಕಾಗೋಡು ತಿಮ್ಮಪ್ಪ:- ನಾನು ಹೇಳುವುದೇನೆಂದರೆ, ನೀವು ಏನು ಉದಾರತನವನ್ನು ತೋರಿಸಿದ್ದೀರೋ ಅದಕ್ಕೆ ಪ್ರತಿಯಾಗಿ ಉದಾರತನವನ್ನು

ತೋರಿಸುವುದಾಗಲೀ ಅಥವಾ ಹೊಸ ಪ್ರಜ್ಞೆ ಹೊಸ ವಿಚಾರ ತಮಿಳುನಾಡಿನ ಸರ್ಕಾರಕ್ಕೆ ಉದಯವಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಏಕೆಂದರೆ ಆ ರೀತಿಯಲ್ಲಿ ಉದಯವಾಗಿದೆ ಎಂದು ನಾನಂತೂ ತಿಳಿದುಕೊಂಡಿಲ್ಲ. ಮತ್ತೆ ಈ ಹಿಂದೆ ಹೇಗೆ ಕೇಂದ್ರ ಸರ್ಕಾರಕ್ಕೆ ತಮ್ಮ ರಾಜಕೀಯ ಬೆಂಬಲವನ್ನು ನೀಡಿ, ಸಂದರ್ಭ ಬಂದಾಗಲೆಲ್ಲ ಕರ್ನಾಟಕ ಸರ್ಕಾರದ ವಿರುದ್ಧವಾಗಿ ತಮ್ಮ ಸಾಧನೆಯನ್ನು ತೋರಿಸಿಕೊಂಡಿದ್ದಾರೋ ಅದೇ ಪ್ರವೃತ್ತಿ ಅದೇ ಪ್ರಯತ್ನ ಈಗಲೂ ಕೂಡ ಆಗತಕ್ಕಂಥ ಸನ್ನಿವೇಶ ಬಂದಿದ್ದು, ಇವೊತ್ತಿಂದ ನೀವು ಜಾಗ್ರತರಾಗಿದ್ದೀರಿ, ಇದರಲ್ಲೇನಾದರೂ ನೀವು ತಪ್ಪಿದರೆ ನೀವು ಕರ್ನಾಟಕದ ರಕ್ಷಣೆಯನ್ನು ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಎಚ್ಚರಿಕೆಯ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿ.....

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):- ಈಗಿರತಕ್ಕಂಥ ಸಂಬಂಧ ಹಿಂದೆ ಯಾವ ಶತಮಾನದಲ್ಲೂ ಇರಲಿಲ್ಲ, ಮುಂದಿನ ಶತಮಾನದಲ್ಲಿ ಬರುತ್ತದೆಯೋ ಅಥವಾ ಇಲ್ಲವೋ, ಈಗ ನಮ್ಮವರೇ ಪ್ರಧಾನಿಯಾಗಿದ್ದಾರೆ, ಅವರ ಹಿಂದೆ ಇರತಕ್ಕಂಥ ಪೊಲಿಟಿಕಲ್ ಫೋರ್ಸ್‌ನಲ್ಲಿ ನಾವೆಲ್ಲಾ ಭಾಗಿಗಳಾಗಿದ್ದೇವೆ ಇಂಥ ಸಂದರ್ಭದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳದಿದ್ದರೆ, ಇನ್ನು ಯಾವಾಗಲೂ ಕೂಡ ಆಗುವುದಿಲ್ಲವೆಂದು ತಿಳಿದು ಈಗ ಅದಕ್ಕೋಸ್ಕರ ಸಂಬಂಧ ಮಾಡಬೇಕು. ಈಗ ನಿಮ್ಮ ಮನೆಯ ಹೆಣ್ಣನ್ನು ತರಬೇಕು. ತನ್ಮೂಲಕ ಸಂಬಂಧ ಬೆಳೆಸಬೇಕು ಎಂದು ನನಗೆ ಇಚ್ಛೆ ಇದ್ದರೆ, ನಾನು ವಿಳ್ಳೇದೆಲೆ ಇನ್ನು ಮುಂತಾದವುಗಳನ್ನು ತೆಗೆದುಕೊಂಡು ಬರುತ್ತೇನೆ. ಮೊದಲನೇ ಭಾರಿಗೇ ತೆಗೆದುಕೊಂಡು ಹೋಗಿ 11 ಟಿ.ಎಂ.ಸಿ ನೀರನ್ನು ಕೊಡುವುದಿಲ್ಲ. ಮೊದಲು ಒಳ್ಳೆಯ ಸದ್ಭಾವನೆ ಆಗಲೀ ಎನ್ನುವುದು ನಮ್ಮ ಇಚ್ಛೆ. ಇದನ್ನೂ ನೀವು ಅನುಮಾನದಿಂದ ನೋಡುತ್ತಾ ಹೋದರೆ ಹೇಗೆ? ಸಂಬಂಧ ಮಾಡಿ ಎಂದು ಹೇಳುತ್ತೀರಿ, ಸಮಸ್ಯೆಯನ್ನು ಬಗೆಹರಿಸಿ ಎಂದು ನೀವು ಹೇಳುತ್ತೀರಿ, ಮತ್ತೆ ಅವನು ಕಳ್ಳ ಇದ್ದಾನೆ, ಹುಷಾರು ಎಂದೂ ಹೇಳುತ್ತೀರಿ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಕಾವೇರಿ ನದಿಯ ನೀರನ್ನು ಬಳಸಿಕೊಳ್ಳುವ ಅಚ್ಚುಕಟ್ಟಿನ ಕಾವೇರಿ ತಪ್ಪಲಿನ ಜನರೇ 5 ಟಿ.ಎಂ.ಸಿ ನೀರನ್ನು ಬಿಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದರಲ್ಲಿ ಏನೂ ಅನುಮಾನವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಈ ವಿಚಾರದಲ್ಲಿ ಏನೆಲ್ಲಾ ಪ್ರಯತ್ನ ಮಾಡಿದರೂ ಕೂಡ ಅಷ್ಟೊಂದು ಸುಲಭವಾಗಿ ಒಪ್ಪತಕ್ಕಂಥ ವಿಚಾರ ಅಲ್ಲ ಎನ್ನುವುದನ್ನು ಅನೇಕ ವರ್ಷಗಳಿಂದ, ಇತಿಹಾಸದಿಂದ ನಾವು ನೋಡುತ್ತಾ ಬಂದಿದ್ದೇವೆ. ಆದರೆ ಈಗ ನೀವೇನೋ ಹೇಳಬಹುದು, ಈಗ ನಮ್ಮವರೇ ಪ್ರಧಾನಮಂತ್ರಿಗಳಾಗಿದ್ದಾರೆ, ಅವರ ಬೆಂಬಲ ಕೂಡ ಇರುವ ಕಾರಣಕ್ಕಾಗಿ ಒಂದೇ ಪಕ್ಷವಾದ ಕಾರಣ ಒಂದೇ ಒಗ್ಗಟ್ಟಿನಿಂದ ಸರ್ಕಾರ ನಡೆಸುತ್ತಿರುವುದರಿಂದ ಸಮಸ್ಯೆ ಬಗೆಹರಿಸುವುದಕ್ಕೆ ಸುಲಭವಾಗುತ್ತದೆ ಎನ್ನುತ್ತೀರಿ. ಆದರೆ ಹಿಂದೆ ಇದ್ದದ್ದಕ್ಕಿಂತ ರಾಜಕೀಯ ಬಿಕ್ಕಟ್ಟು ಇವೊತ್ತು ಇನ್ನೂ ಹೆಚ್ಚು ತರುತ್ತಾರೆ ಎನ್ನತಕ್ಕಂಥ ಮಾತನ್ನು ಮಾತ್ರ ನೀವು ನೆನಪಿನಲ್ಲಿಟ್ಟುಕೊಳ್ಳಿ. ಏಕೆಂದರೆ ನಾವು

ಇವೊತ್ತೇ ಇದನ್ನು ಪೂರೈಸುವುದಕ್ಕೆ ಹೋಗುವುದಕ್ಕಾಗುವುದಿಲ್ಲ, ನಾವು ಇನ್ನೂ ಇರುತ್ತೇವಲ್ಲ. ಅದ್ದರಿಂದ ಈ ಎಚ್ಚರಿಕೆಯನ್ನು ನೀವು ಇಟ್ಟುಕೊಂಡು ನಮ್ಮ ಕರ್ನಾಟಕದ ಹಿತವನ್ನು ದಯವಿಟ್ಟು.....

ಅಧ್ಯಕ್ಷರು:- ಇಷ್ಟು ವರ್ಷದ ಗೆಳೆತನದಲ್ಲಿ ಪಟೇಲರ ವಿಚಾರ ನಿಮಗೆ ಇಷ್ಟೇನಾ ಗೊತ್ತಿರುವುದು. ಅವರು ನಿಮಗೆ ಉದಾಹರಣೆಯನ್ನು ಕೂಡ ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ:- ಅದು ಗೊತ್ತಿರುವ ವಿಚಾರವಾದ್ದರಿಂದಲೇ ನಾನು ಇಷ್ಟರಮಟ್ಟಿಗೆ ಬಿಚ್ಚಿ ಹೇಳಬೇಕಾದ ಅವಶ್ಯಕತೆ ಬಂದದ್ದು.

ಅಧ್ಯಕ್ಷರು:- ಒಪ್ಪಿಕೊಳ್ಳದೇ ಹೋದರೆ ಅವರು ಬಿಟ್ಟುಬಿಡುತ್ತಾರೋ ಒಪ್ಪಿಕೊಳ್ಳದೇ ಹೋದರೆ ಸಂಬಂಧ ಮಾಡುವಾಗ ಅವರು ಬಿಟ್ಟುಬಿಡುತ್ತಾರೆಯೇ? ನಿಮಗೆ ಇಷ್ಟೆನಾ ಪಟೇಲರ ಪರಿಚಯ ಇರುವುದು. ಹಾಗಾದರೆ ನಿಮಗೆ ಪಟೇಲರ ಸ್ನೇಹವೇ ಸರಿಯಾಗಿ ಆಗಿಲ್ಲವೆಂದೆನಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ಹೌದೌದು.

ಅಧ್ಯಕ್ಷರು:- ಈಗ ಅವರಿಗೂ ಹಾಗೇ ಮಾತನಾಡಿದಿರಿ. ನಂಜೇಗೌಡರೇ ನೀವೇ ಹೇಳಿ, ನೀವಾಗಲೀ ಪಟೇಲರಾಗಲಿ ಹಾಗೆಲ್ಲ ಒಪ್ಪಿಕೊಂಡು ಬಿಡುತ್ತೀರೋ?

ಶ್ರೀ ಹೆಚ್.ಎನ್.ನಂಜೇಗೌಡ:- ಅಧ್ಯಕ್ಷರೇ, ನನ್ನನ್ನೂ ಸೇರಿಸುತ್ತಿದ್ದೀರಿ ಇದರಲ್ಲಿ.

ಶ್ರೀ ಕಾಗೋಡು ತಿಮ್ಮಪ್ಪ:- ಈಗ ಪಟೇಲರಿಗೆ ಸ್ವಲ್ಪ ಸೀರಿಯಸ್‌ನೆಸ್ ಕಡಿಮೆಯಾಗಿದೆ. ಬಹಳ ಲಘುವಾಗಿ ಎಲ್ಲಾ ವಿಚಾರವನ್ನು ಪರಿಗಣಿಸುವ ಹಾಗಿದೆ. ಈಗ ಮುಖ್ಯಮಂತ್ರಿಗಳಾದ ಮೇಲಾದರೂ ಸ್ವಲ್ಪ.....

ಶ್ರೀ ಜೆ.ಹೆಚ್.ಪಟೇಲ್:- ನಿಮ್ಮಂತಹವರು ಕೈ ಬಿಟ್ಟು ಹೋದ ಮೇಲೆ, ಸೀರಿಯಸ್‌ನೆಸ್ ಹೋಗದೇ ಮತ್ತೇನಾಗುತ್ತದೆ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:- ಅದು ಇಲ್ಲದೇ ಇರುವ ಕಾರಣಕ್ಕಾಗಿಯೇ ನಿಮ್ಮನ್ನು ಬಿಟ್ಟು ಹೋಗುವ ಸನ್ನಿವೇಶ ಬಂತು. ಇಲ್ಲದಿದ್ದರೆ ಬಿಟ್ಟು ಹೋಗುವಂಥ ಅವಶ್ಯಕತೆ ಇರಲಿಲ್ಲ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಏನು ಮಾಡುವುದು, ನಾಳೆಗೆ ಮುಂದೂಡೋಣವೇ, ಏಕೆಂದರೆ ಆ್ಯಕ್ಚುಯಲ್ ಆಗಿ ಕಾವೇರಿ ಬೇಸಿನ್‌ನಿಂದ ಬಂದಿರತಕ್ಕಂಥ ಸದಸ್ಯರಲ್ಲಿ ಯುವಕರು ಯಾರೂ ಇನ್ನೂ ಮಾತನಾಡಿಲ್ಲ.

ಶ್ರೀ ಕೆ.ಎನ್.ನಾಗೇಗೌಡ:- ಈಗ ಮಾತನಾಡಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ಸಾಧ್ಯವಿಲ್ಲ. ಏಕೆಂದರೆ ಅಧ್ಯಕ್ಷರು ನಿಯಮ

159, ಮತ್ತು 165 ಮೇಲೆ ಹೇಳಬೇಕಾಗುತ್ತದೆ. ಇದು ಅಷ್ಟು ಸುಲಭವಾದ ವಿಚಾರವೇನು.

ಅಧ್ಯಕ್ಷರು:- ಅದೇನು ನಾನು ಹೇಳುತ್ತೇನೆ ಬಿಡಿ, ನನ್ನ ಕಷ್ಟ ನಿಮಗೆ ಏತಕ್ಕೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ಬೇಕಾದರೆ ಮಾತನಾಡುವವರೆಲ್ಲ ಮಾತನಾಡಲಿ ರಿಪ್ಲೈ ಬೇಕಾದರೆ ನಾಳೆಗೆ ಕೊಡಲಿ.

ಶ್ರೀ ಕೆ.ಎನ್.ನಾಗೇಗೌಡ:- ಅಧ್ಯಕ್ಷರೇ, ರಿಪ್ಲೈ ಕೊಡುವಂಥದ್ದನ್ನೆಲ್ಲಾ ಈಗಾಗಲೇ ಎಲ್ಲವನ್ನೂ ಹೇಳಿಬಿಟ್ಟಿದ್ದೇವೆ. ಆದ್ದರಿಂದ ರಿಪ್ಲೈ ಕೊಡುವುದಕ್ಕೆ ಇನ್ನೂ ಏನು ಇದೆ?

ಅಧ್ಯಕ್ಷರು:- ನಿನ್ನೆ ಮತ್ತು ಇವೊತ್ತೆಲ್ಲಾ ಕಾಲಿಂಗ್ ಅಟೆನ್‌ಶನ್, ನಿಯಮ 351 ಇವುಗಳೆಲ್ಲಾ ಕೈಬಿಟ್ಟು ಹೋಗಿವೆ ಎಕ್ಸ್‌ಪ್ಟ್ ಕೊಶ್ಚನ್ ಹವರ್. ಆದಕಾರಣ ನಾಳೆ 9-30ಕ್ಕೆ ಹೌಸ್ ಪ್ರಾರಂಭವಾಗುವುದರಿಂದ 9 ಗಂಟೆಗೇ ತಾವು ಬನ್ನಿ, ಲೀಡರ್‌ನ್ನು ಕೂಡ ಬರುವುದಕ್ಕೆ ಹೇಳುತ್ತೇನೆ, ಕುಳಿತುಕೊಂಡು ಅದರ ಬಗ್ಗೆ ಮಾತನಾಡೋಣ ನಾಳೆ 9 ಗಂಟೆಗೇ ನೀವು ಬರುವುದಕ್ಕಾಗುತ್ತದಲ್ಲವೇ? ಯಡಿಯೂರಪ್ಪನವರಿಗೂ ನಾನು ಹೇಳಿ ಕಳುಹಿಸುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- We will meet at 9.00 and decide as to what we should do about this, how long we should discuss. If it is the desire of everybody that we should discuss this for another week, let the B.A.C. take a decision.

MR.SPEAKER:- That is the reason. I don't want to be a party for it. I have already developed a feeling that there is a slight distract. That is the reason I want the BAC to take a decision. The decision of the BAC is the consensus of the House. I do not want to take an arbitrary decision by myself. We will have the BAC convened tomorrow morning at 9.00 0'clock.

ಅಧ್ಯಕ್ಷರು:- ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 9-30ಕ್ಕೆ ಸೇರುವುದು.

(ಸದನವು ಸಂಜೆ 6 ಗಂಟೆ 29 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 12ನೇ ಜುಲೈ ಮಾಹೆ 1996 ಶುಕ್ರವಾರದಂದು ಬೆಳಿಗ್ಗೆ 9 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.